بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

ವಿಶ್ವದಾದ್ಯಂತ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ವೈಭವಯುತ ಅಭಿವೃದ್ಧಿಗಳು

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

Weekly **BADAR** Qadian KANNADA

ಸಂಪುಟ 02

ವಾರ್ಷಿಕ ಶುಲ್ಕ ರೂ.600/-

ಸಂಚಿಕೆ 51-52

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್

Postal Reg. No: 3000039689/2020-22 | ಡಿಸೆಂಬರ್ 22-29, 2022 | 22-29 ಫತಹ್ 1401 ಹಿಜರಿ ಶಮ್ಸಿ | 27 ಜಮಾದಿ ಉಲ್ ಅವ್ವಲ್- 05 ಜಮಾದಿ ಉಸ್ಸಾನಿ 1444 ಹಿಜರಿ ಖಮರಿ

**ನಾನು ಸತ್ಯವಂತನೆಂದೂ ದೇವನ ದಯೆಯಿಂದ ನಾನೇ ಈ ಹೋರಾಟದಲ್ಲಿ ಜಯಶಾಲಿಯಾಗುವೆನೆಂದೂ ಪೂರ್ಣ ಭರವಸೆಯಿಂದಲೂ ದೃಢನಂಬಿಕೆಯಿಂದಲೂ ಘೋಷಿಸುತ್ತೇನೆ.**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನುಡಿಯುತ್ತಾರೆ:

ನಾನು ಸತ್ಯವಂತನೆಂದೂ ದೇವನ ದಯೆಯಿಂದ ನಾನೇ ಈ ಹೋರಾಟದಲ್ಲಿ ಜಯಶಾಲಿಯಾಗುವೆನೆಂದೂ ಪೂರ್ಣ ಭರವಸೆಯಿಂದಲೂ ದೃಢನಂಬಿಕೆಯಿಂದಲೂ ಘೋಷಿಸುತ್ತೇನೆ. ನಾನು ದೂರಗಾಮಿ ದೃಷ್ಟಿಯಿಂದ ನೋಡುವಾಗ ನಾನು ಲೋಕವನ್ನು ನನ್ನ ಸತ್ಯದ ಪಾದಗಳಡಿಯಲ್ಲಿ ಕಾಣುತ್ತಿದ್ದೇನೆ. ನಾನು ಮಹತ್ತರವಾದ ಜಯಗಳಿಸುವ ಕಾಲವು ಸಮೀಪವಾಗಿದೆ. ಏಕೆಂದರೆ ನನ್ನ ನಾಲಗೆಗೆ ಬೆಂಬಲವಾಗಿ ಇನ್ನೊಂದು ನಾಲಗೆ ಮಾತನಾಡುತ್ತಿದೆ. ನನ್ನ ಕೈಯನ್ನು ಬಲಪಡಿಸಲು ಇನ್ನೊಂದು ಕೈ ಚಲಿಸುತ್ತಿದೆ. ಇದನ್ನೆಲ್ಲ ಲೋಕ ನೋಡುತ್ತಾ ಇಲ್ಲ; ಆದರೆ ನಾನು ನೋಡುತ್ತಿರುವೆನು. ನನ್ನೊಳಗೆ ಒಂದು ದೈವಿಕ ಚೇತನ ಮಾತನಾಡುತ್ತಿದೆ. ಅದು ನನ್ನ ಶಬ್ದ ಶಬ್ದಗಳಿಗೂ ಅಕ್ಷರ ಅಕ್ಷರಗಳಿಗೂ ಜೀವ ನೀಡುತ್ತಿದೆ. ಆಕಾಶದಲ್ಲಿ ಒಂದು ಉತ್ಸಾಹ ಮತ್ತು ಉತ್ತೇಜಕ ಸ್ಥಿತಿಯುಂಟಾಗಿದೆ. ಅದು ಈ ಒಂದು ಮುಷ್ಟಿ ಮಣ್ಣನ್ನು ಒಂದು ಬೊಂಬೆಯನ್ನಾಗಿ ಮಾಡಿ ನಿಲ್ಲಿಸಿದೆ. ಪಾಪಗಳಿಗೆ ಪಶ್ಚಾತ್ತಾಪಗೊಂಡು ದೇವನ ಕಡೆಗೆ ಮರಳುವ ಬಾಗಿಲು ಮುಚ್ಚಲ್ಪಡದ ಪ್ರತಿಯೊಬ್ಬನು ಬೇಗನೆ ತಿಳಿದುಕೊಳ್ಳುವನು - ನಾನು ನನ್ನಿಷ್ಟದ ಪ್ರಕಾರ ವಾದಿಸಿದವನಲ್ಲ ಎಂದು. ಸತ್ಯವಂತನನ್ನು ಗುರುತಿಸಲಾರದ ಕಣ್ಣುಗಳು ದೃಷ್ಟಿಯನ್ನು ಹೊಂದಿವೆಯೋ? ಈ ದೈವಿಕ ಕರೆಯನ್ನು ಲಕ್ಷಿಸದವನು ಸಜೀವವಾಗಿ ಇರುವನೆಂದು ಗ್ರಹಿಸಲ್ಪಡುವನೇ?

**(ಇಝ್ಝಾಲ ಔಹಾಮ್; ರೂಹಾನೀ ಖಝ್ಝಾಈನ್, ಸಂಪುಟ-3, ಪುಟ-403)**







ದಿನಾಂಕ 01 ಅಕ್ಟೋಬರ್ 2022 ರಂದು ಮಸ್ಜಿದ್ ಫತ್ಹೇ ಅಝೀಮ್ (ಅಮೇರಿಕ)ದ ಉದ್ಘಾಟನೆಯ ಸಮಾರಂಭದಲ್ಲಿ ಹುಝೂರ್ ಅನ್ವರ್(ಅತಬಿಅ) ರವರ ಸಂಬೋಧನೆ

ಮಸ್ಜಿದ್ ಫತ್ಹೇ ಅಝೀಮ್ (ಅಮೇರಿಕ)ದ ಉದ್ಘಾಟನೆಯ ಸಂದರ್ಭದಲ್ಲಿ ಝಿಯಾನ್ ಪಟ್ಟಣದ ಗವರ್ನರ್ ಹುಝೂರ್(ಅತಬಿಅ) ಅವರಿಗೆ ಪಟ್ಟಣದ ಕೀಲಿಕೈ ನೀಡುತ್ತಿರುವುದು








ಮಸ್ಜಿದ್ ಫತ್ಹೇ ಅಝೀಮ್ (ಝಿಯಾನ್, ಅಮೇರಿಕ) ನ ಒಂದು ಸುಂದರ ನೋಟ

ಹುಝೂರ್ ಅನ್ವರ್(ಅತಬಿಅ) ರವರು ಮಸ್ಜಿದ್ ಫತ್ಹೇ ಅಝೀಮ್ (ಝಿಯಾನ್, ಅಮೇರಿಕ) ಅನ್ನು ಉದ್ಘಾಟಿಸುತ್ತಿರುವುದು







ಮಸ್ಜಿದ್ ಬೈತುಲ್ ಇಕ್ರಾಮ್ (ಡಲ್ಲಾಸ್, ಅಮೇರಿಕ)ದ ಒಂದು ಸುಂದರ ನೋಟ

ದಿನಾಂಕ 8 ಅಕ್ಟೋಬರ್ 2022 ರಂದು ಮಸ್ಜಿದ್ ಬೈತುಲ್ ಇಕ್ರಾಮ್ (ಡಲ್ಲಾಸ್, ಅಮೇರಿಕ)ದ ಉದ್ಘಾಟನೆಯ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ರವರ ಸಂಬೋಧನೆ ನೀಡುತ್ತಿರುವುದು








ದಿನಾಂಕ 01 ಅಕ್ಟೋಬರ್ 2022 ರಂದು ಹುಝೂರ್ ಅನ್ವರ್(ಅತಬಿಅ) ರವರು Lake country News-Sun Prior ನ ಪ್ರತಿನಿಧಿಗಳನ್ನು ಸಂದರ್ಶನ ನೀಡುತ್ತಿರುವುದು

ದಿನಾಂಕ 07 ಅಕ್ಟೋಬರ್ 2022 ರಂದು ಹುಝೂರ್ ಅನ್ವರ್(ಅತಬಿಅ) ರವರು ಮಸ್ಜಿದ್ ಬೈತುಲದ ಖೈಯೂಮ್ (ಫೋರ್ಟ್ ವರ್ಥ್, ಅಮೇರಿಕ) ವನ್ನು ಉದ್ಘಾಟಿಸುತ್ತಿರುವುದು



شبیہ مبارک حضرت مرزا غلام احمد صاحب قادیانی مسیح موعود و مہدی معہود علیہ السلام (1835ء - 1908ء)




سیدنا و امامنا حضرت مرزا مسرور احمد خلیفۃ المسیح الخامس ایدہ اللہ تعالیٰ بنصرہ العزیز

بسم الله الرحمن الرحيم

نَحْمَدُهٗ وَنُصَلِّی عَلٰی رَسُوْلِهِ الْکَرِیْمِ

وَعَلٰی عَبْدِہِ الْمَسِیْحِ الْمَوْعُوْدِ

خدا کے فضل اور رحم کے ساتھ

ھوالنّــاصر

**ಸರ್ವಶಕ್ತನಾದ ಅಲ್ಲಾಹನು ನನಗೆ ಹಿರಿಮೆಯನ್ನು ನೀಡುತ್ತಾನೆ ಮತ್ತು ನನ್ನ ಪ್ರೀತಿಯನ್ನು ಹೃದಯಗಳಲ್ಲಿ ಇರಿಸುತ್ತಾನೆ ಮತ್ತು ಪ್ರಪಂಚದಾದ್ಯಂತ ನನ್ನ ಸರಪಳಿಯನ್ನು(ಜಮಾಅತ್ತನ್ನು) ಹರಡಿಸುತ್ತಾನೆ ಮತ್ತು ನನ್ನ ಪಂಗಡವನ್ನು ಎಲ್ಲಾ ಪಂಗಡಗಳ ಮೇಲೆ ಮೇಲುಗೈ ಸಾಧಿಸುತ್ತದೆ ಎಂದು ನನಗೆ ಪದೇ ಪದೇ ತಿಳಿಸಿದ್ದಾನೆ. ಮತ್ತು ನನ್ನ ಪಂಗಡದ ಜನರು ಜ್ಞಾನ ಮತ್ತು ದೈವಜ್ಞಾನದಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತಾರೆ, ಅವರು ತಮ್ಮ ಸತ್ಯಾಂಶದ ಪ್ರಕಾಶದಿಂದ, ತಮ್ಮ ಪುರಾವೆಗಳಿಂದ ಮತ್ತು ದೃಷ್ಟಾಂತಗಳ ಬೆಳಕಿನಿಂದ ಪ್ರತಿಯೊಬ್ಬರ ಬಾಯಿಯನ್ನು ಮುಚ್ಚುತ್ತಾರೆ ಮತ್ತು ಪ್ರತಿಯೊಂದು ಜನಾಂಗವೂ ಈ ಚಿಲುಮೆಯಿಂದ ನೀರನ್ನು ಕುಡಿಯುತ್ತಾರೆ. ಈ ಸರಪಳಿಯು (ಜಮಾಅತ್) ಭೂಮಿಯನ್ನು ಆವರಿಸುವವರೆಗೆ ಬಲವಾಗಿ ಬೆಳೆಯುತ್ತದೆ ಮತ್ತು ಪ್ರವರ್ಧಮಾನಕ್ಕೆ ಬರುತ್ತದೆ.**

**ಆದ್ದರಿಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಸಂದೇಶವು ಇಡೀ ಜಗತ್ತಿಗೆ ತಲುಪುತ್ತದೆ ಮತ್ತು ಜಗತ್ತು ನಿಮ್ಮನ್ನು ರಸೂಲುಲ್ಲಾಹ್(ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಮತ್ತು ಅವರ ನಿಜವಾದ ಪ್ರೇಮಿ ಮತ್ತು ಶೂರ ಪೈಲ್ವಾನನ ರೀತಿಯಲ್ಲಿ ತಿಳಿಯುತ್ತಾರೆ ಮತ್ತು ತಿಳಿಯುತ್ತಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.**

---

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರೀತಿಯ ಜಮಾಅತ್‌ಗೆ ಅಸಂಖ್ಯಾತ ಶುಭವಾರ್ತೆಗಳಿವೆ ಮತ್ತು ಇನ್‌ಶಾಅಲ್ಲಾಹ್ ವಿಜಯದ ಬಾಗಿಲು ಸದಾ ತೆರೆಯುತ್ತಾ ಹೋಗುತ್ತವೆ.**

## ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರ ಬದರ್ ಓದುಗರಿಗಾಗಿ ವಿಶೇಶ ಸಂದೇಶ

ಇಸ್ಲಾಮಬಾದ್, ಯುಕೆ

MA 18-10-2022

ಪ್ರೀತಿಯ 'ಬದರ್' ವಾರಪತ್ರಿಕೆ ಖಾದಿಯಾನ್‌ನ ಓದುಗರೇ

**ಅಸ್ಸಲಾಮು ಅಲೈಕುಂ ವ ರಹಮತುಲ್ಲಾಹಿ ವ ಬರಕಾತಹು**

ಅಲ್ಹಮ್ದುಲಿಲ್ಲಾಹ್, ಬದರ್ ಪತ್ರಿಕೆಯು "ವಿಶ್ವದಾದ್ಯಂತ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಅಭಿವೃದ್ಧಿಗಳು" ಎಂಬ ವಿಶೇಷ ಸಂಚಿಕೆಯನ್ನು ಪ್ರಕಟಿಸುವ ಅವಕಾಶ ಪಡೆಯುತ್ತಿದೆ. ಈ ಸಂದರ್ಭದಲ್ಲಿ ಸಂದೇಶ ಕಳುಹಿಸಲು ನನ್ನಲ್ಲಿ ಮನವಿ ಮಾಡಲಾಗಿದೆ. ಅಲ್ಲಾಹನು ಇದನ್ನು ಎಲ್ಲಾ ರೀತಿಯಲ್ಲೂ ಅನುಗ್ರಹಿಸಲಿ ಎಂದು ದುಆ ಮಾಡುತ್ತೇನೆ.

ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನುಡಿಯುತ್ತಾನೆ: **ಅಲಮ್ ತರ ಕೈಫ ಝರಬಲ್ಲಾಹ ಮಸಲ ಕಲಿಮತುನ್ ತೈಯಿಬತುನ್ ಕಶಜರತಿನ್ ತೈಯಿಬತಿನ್ ಅಸ್‌ಲುಹಾ ಸಾಬಿತುನ್ ವ ಫರುಹಾ ಫಿಸ್ಸಮಾಇ- ತುತೀ ಉಕುಲಹಾ ಕುಲ್ಲ ಹೀನಿನ್ ಬಿಇಝ್‌ನಿ ರಬ್ಬಿಹಾ-** (ಇಬ್ರಾಹೀಮ್: 25-26) ಅಂದರೆ: ಒಂದು ಉತ್ತಮ ವಚನವನ್ನು ಅಲ್ಲಾಹನು ಹೇಗೆ ಹೋಲಿಸುತ್ತಾನೆಂದು ನೀನು ಕಾಣಲಿಲ್ಲವೇ? ಬೇರುಗಳು ಭದ್ರವಾಗಿದ್ದುಕೊಂಡು ಶಾಖೆಗಳು ಆಕಾಶದೆಡೆಗೆ ಚಾಚಿಕೊಂಡಿರುವ ಒಂದು ಉತ್ತಮ ವೃಕ್ಷದಂತೆ ಅದರ ಸ್ಥಿತಿಯಾಗಿದೆ. ಅದರ ಪ್ರಭುವಿನ ಆಜ್ಞೆಯಂತೆ ಅದು ತನ್ನ (ತಾಜಾ) ಫಲಗಳನ್ನು ಸದಾಕಾಲ ನೀಡುತ್ತಿರುತ್ತದೆ. ಜನರು ಚಿಂತಿಸಿ ಮನದಟ್ಟು ಮಾಡಿಕೊಳ್ಳಲಿಕ್ಕಾಗಿ ಅಲ್ಲಾಹನು ಉಪಮೆಗಳನ್ನು ನೀಡಿ ವಿವರಿಸಿಕೊಡುತ್ತಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಆಯತನ್ನು ವ್ಯಾಖ್ಯಾನಿಸುತ್ತ ಹೇಳುತ್ತಾರೆ:

"ರಸೂಲುಲ್ಲಾಹ್(ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಅವರ ಕಾಲದಲ್ಲಿ ಹೇಗೆ ಅಲೌಕಿಕ ಕುರುಹುಗಳು ಅವರಿಗಾಗಿ ಮತ್ತು ಅವರನ್ನು ಅನುಸರಿಸುವವರಿಗೆ ಕಾಣಿಸಿಕೊಂಡವು. ಅದಕ್ಕೆ ಮತ್ತೊಂದು ಉದಾಹಣೆ ಇಲ್ಲ. ಮತ್ತು ರಸೂಲುಲ್ಲಾಹ್(ಸ) ಅವರ ನಂತರವೂ ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ನಿಷ್ಠೆಯಿಂದ ಅನುಸರಿಸುವವರೊಂದಿಗೆ ದೈವಿಕ ಕುರುಹುಗಳ ಸರಪಳಿಯು ಹೇಗೆ ಸಂಬಂಧ ಹೊಂದಿದೆ ಎಂದರೆ ಪ್ರತಿಯೊಬ್ಬ ಬುದ್ಧಿವಂತ ವ್ಯಕ್ತಿಯು ಪವಿತ್ರ ಖುರ್‌ಆನ್‌ದೊಂದಿಗೆ ಒಂದು ಅಸ್ತಿತ್ವದ ಸಂಪರ್ಕವಿದೆ ಅದು ಭೌತಿಕ ನಿಯಮಗಳ ಮೇಲೆ ಆಳ್ವಿಕೆ ನಡೆಸುತ್ತಿದೆ ಮತ್ತು ಅದರಲ್ಲಿ ಸಂತೋಷಗೊಳ್ಳುತ್ತದೆ ಎಂದು ಸುಲಭವಾಗಿ ತಿಳಿದುಕೊಳ್ಳುತ್ತಾನೆ. ಪ್ರಸ್ತುತ ಕಾಲದಲ್ಲಿಯೂ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಸಂಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅನುಗ್ರಹಗಳಿಂದ ಈ ಆಯತ್‌ಗೆ ಇಷ್ಟೊಂದು ವಿಶಾಲವಾದ ಅರ್ಥಗಳು ವ್ಯಕ್ತವಾಗಿವೆ. ಈ **ಬಿಇಝ್ನಿ ರಬ್ಬಿಹಾ** ಎಂಬುದು ಫಲಗಳ ತಾಜಾ ಉದಾಹಣೆಯಾಗಿದೆ. ತಮ್ಮ ನಂತರ ತಮ್ಮ ಜಮಾಅತ್‌ನೊಂದಿಗೂ ಸರ್ವಶಕ್ತನಾದ ಅಲ್ಲಾಹನ ವರ್ತನೆಯೂ ಹೀಗೆ ಇದೆ. ಈ ವರ್ತನೆಯ ಅಡಿಯಲ್ಲಿ, ಅದು ತೀವ್ರ ವಿರೋಧದ ಹೊರತಾಗಿಯೂ ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಇದೆ. **ಫಸುಬ್ಹಾನಲ್ಲಾಹಿ ವಲ್ ಹಮ್ದು ಲಿಲ್ಲಾಹಿ ಅಲ್ಲಾಹು ಅಕ್ಬರ್.**"

**(ತಫ್ಸೀರೆ ಕಬೀರ್, ಸಂಪುಟ-3, ಪುಟ-475)**

ನಾವು ಅಲ್ಲಾಹನ ಅನುಗ್ರಹಗಳ ಕಡೆ ಕಣ್ಣು ಹಾಯಿಸಿದರೆ, ನಮಗೆ ಕೃತಜ್ಞತೆಗಳನ್ನು ಸ್ವೀಕರಿಸಲು ದೀರ್ಘವಾದ ಒಂದು ಪಟ್ಟಿ ಸಿದ್ಧವಾಗಿ ನಿಂತಿರುವವುದನ್ನು ಕಾಣಬಹುದು, ಜಮಾಅತ್ ನಡೆಸುತ್ತಿರುವ ಶಾಲೆಗಳು ಮತ್ತು ಆಸ್ಪತ್ರೆಗಳ ಪ್ರಗತಿಯ ವರದಿಗಳನ್ನು ಕೇಳಿ ಅಥವಾ ಓದಿದ ನಂತರ, ನಮ್ಮ ಆಸ್ಪತ್ರೆಗಳಲ್ಲಿ ವಾಸಿಯಾದ ಬಡವರ ಶಾಂತಿಯುತ ಮುಖಗಳು, ಜಮಾಅತ್‌ನೆಡೆಗೆ ಅವರ ಪ್ರಾರ್ಥನೆಗಳ ಪದಗಳು, ಕೃತಜ್ಞತೆಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಎಲ್ಲೋ ಬಡಮಕ್ಕಳಿಗೆ ಮಾನವೀಯ ಸೇವೆಯಡಿಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾದಾಗ ಬಡ ಮಕ್ಕಳ ಮುಖದಲ್ಲಿ ಸಂತಸವು ಅಲ್ಲಾಹನ ಸ್ತುತಿಯ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಮನೆ ಬಳಕೆಗೆ ಎರಡ್ಮೂರು ಮೈಲಿ ದೂರದಿಂದ ನೀರು ತರುತ್ತಿದ್ದ ಏಳೆಂಟು ವರ್ಷದ ಮಕ್ಕಳ ಸಂತಸಕ್ಕಾಗಿ ಈಗ ಅವರ ಮನೆಯ ಬಾಗಿಲಿಗೆ ನೀರು ಒದಗಿಸಲಾಗಿದೆ. ಇದಕ್ಕೆ ಅವರು ಜಮಾಅತ್‌ಗೆ ಕೃತಜ್ಞತೆ ಸಲ್ಲಿಸುತ್ತಾರೆ. ಹಾಗೂ ಜಮಾಅತ್ ಅಲ್ಲಾಹನಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಜಮಾಅತ್‌ನ ಪ್ರಗತಿಯ ವರದಿ ಕೇಳಿದಾಗ, ಅಲ್ಲಾಹನ ಅನುಗ್ರಹದಿಂದ ಜಮಾಅತ್‌ಗೆ ಲಭಿಸಿದ ಮಿಷನ್ ಹೌಸ್‌ಗಳು ಮತ್ತು ಮಸೀದಿಗಳಿಗಾಗಿ ನಾವು ಅಲ್ಲಾಹನಿಗೆ ಕೃತಜ್ಞರಾಗಿರುತ್ತೇವೆ. ಎಲ್ಲೋ ನಾವು ಅದ್ಭುತವಾದ ಪ್ರಗತಿಯ ಕಥೆಗಳನ್ನು ಕೇಳಿ ಅಲ್ಲಾಹನನ್ನು ಸ್ತುತಿಸುತ್ತಾ ಅಲ್ಲಾಹನ ಮುಂದೆ ಸಜದಾದಲ್ಲಿ ಬಾಗುತ್ತೇವೆ. ಧರ್ಮದ ಸಂಪೂರ್ಣ ಪ್ರಕಟಣೆಗೆ ಸರ್ವಶಕ್ತನಾದ ಅಲ್ಲಾಹನು ನಮಗಾಗಿ ಎಂತಹ ವ್ಯವಸ್ಥೆಗಳನ್ನು ಒದಗಿಸಿದ್ದಾನೆ, ಆ ವ್ಯವಸ್ಥೆಗಳು ಮೂವತ್ತು ವರ್ಷಗಳ ಹಿಂದೆ

ಸಾಧ್ಯವಿರಲಿಲ್ಲ ಮತ್ತು ಅದರ ಸಂಪೂರ್ಣ ಪ್ರಯೋಜನವನ್ನು ಪಡೆದು ನಾವು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞರಾಗಿರುತ್ತೇವೆ. ಅಹ್ಮದಿಯತ್‌ನ ಗಿಡವು ಬೆಳೆಯುತ್ತಿದೆ. ಪ್ರತಿ ವರ್ಷವೂ ಅಲ್ಲಾಹನು ನಮಗೆ ಕೆಲವು ಹೊಸ ಹೊಸ ದೇಶವನ್ನು ನೀಡುತ್ತಿದ್ದಾನೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಇಲ್‌ಹಾಮ್ “ನಾನು ನಿನ್ನ ಸಂದೇಶವನ್ನು ಭೂಮಿಯ ಅಂಚುಗಳಿಗೆ ತಲುಪಿಸುತ್ತೇನೆ” ಇದರ ನೆರವೇರಿಕೆಯನ್ನು ನಾವು ನೋಡುತ್ತಿದ್ದೇವೆ ಮತ್ತು ಅದಕ್ಕೆ ಉದಾಹರಣೆಯಾಗುತ್ತಿದ್ದೇವೆ. ಲಕ್ಷಾಂತರ ಪವಿತ್ರ ಆತ್ಮಗಳು ಅಹ್ಮದಿಯ್ಯತ್ ಅನ್ನು ಸ್ವೀಕರಿಸಿದ್ದಕ್ಕಾಗಿ ಸರ್ವಶಕ್ತನಾದ ಅಲ್ಲಾಹನನ್ನು ನಾವು ಸ್ತುತಿಸುತ್ತೇವೆ ಮತ್ತು ಕೃತಜ್ಞರಾಗಿರುತ್ತೇವೆ. ಒಂದು ಕಡೆ ವಿರೋಧದ ಭೂಕಂಪವು ಸೃಷ್ಟಿಯಾಗಿದೆ, ಆದರೆ ಅವರ ನಡುವೆ ಪ್ರೀತಿಯಿಂದ ತೊಯ್ದಿರುವ ಜನರು ಸಹ ಇದ್ದಾರೆ ಮತ್ತು ಅವರು ರಸೂಲುಲ್ಲಾಹ್(ಸಲ್ಲಲ್ಲಾಹು ಅಲೈಹಿವ ಸಲ್ಲಮ್) ಹಾಗೂ ಅವರ ಪ್ರೀತಿಯ ನಿಷ್ಠಾವಂತ ಗುಲಾಮರ ಮೇಲೆ ದರೂದ್ ಕಳುಹಿಸುತ್ತಿದ್ದಾರೆ. ಅವರಿಗೆ ತಮ್ಮ ಮೇಲೆ ನಡೆಯುತ್ತಿರುವ ಯಾವುದೇ ಹಿಂಸಾಚಾರ ಮತ್ತು ವಿರೋಧವು ಸತ್ಯವನ್ನು ಸ್ವೀಕರಿಸದಂತೆ ತಡೆಯಲು ಸಾಧ್ಯವಾಗಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: “ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜಮಾಅತ್‌ಅನ್ನು ಹೊಂದಿರದ ಯಾವುದೇ ಖಂಡವು ಇಂದು ಜಗತ್ತಿನಲ್ಲಿ ಉಳಿದಿಲ್ಲ ಮತ್ತು ಜಮಾಅತ್ತಿನಲ್ಲಿ ತನ್ನ ಪಾಲನ್ನು ಹೊಂದಿರದ ಯಾವುದೇ ಧರ್ಮವೂ ಇಲ್ಲ, ಕ್ರಿಶ್ಚಿಯನ್ನರು, ಹಿಂದೂಗಳು, ಬೌದ್ಧರು, ಪಾರ್ಸಿಗಳು, ಸಿಖ್ಖರು, ಯಹೂದಿಗಳು, ಎಲ್ಲಾ ಸಮುದಾಯಗಳ ಅನುಯಾಯಿಗಳನ್ನು ಹೊಂದಿವೆ. ಮತ್ತು ಯುರೋಪಿಯನ್ನರು, ಅಮೇರಿಕನ್ನರು, ಆಫ್ರಿಕನ್ನರು ಮತ್ತು ಏಷ್ಯಾದ ನಿವಾಸಿಗಳು ಅವರನ್ನು ನಂಬಿದ್ದಾರೆ. ಅವರು ಸಮಯಕ್ಕೆ ಮುಂಚಿತವಾಗಿ ಹೇಳಿದ್ದು ಅಲ್ಲಾಹನ ಮಾತು ಇಲ್ಲದಿದ್ದರೆ, ಅದು ಹೇಗೆ ನಿಜವಾಯಿತು? **(ದಅ್‌ವತುಲ್ ಅಮೀರ್, ಪುಟ–350)**

ಆದ್ದರಿಂದ ನಿಮ್ಮ ಸಂದೇಶವು ಇಡೀ ಜಗತ್ತಿಗೆ ತಲುಪುತ್ತದೆ ಮತ್ತು ಜಗತ್ತು ನಿಮ್ಮನ್ನು ರಸೂಲುಲ್ಲಾಹ್(ಸಲ್ಲಲ್ಲಾಹು ಅಲೈಹಿ ವ ಸಲ್ಲಮ್) ಮತ್ತು ಅವರ ನಿಜವಾದ ಪ್ರೇಮಿ ಮತ್ತು ಶೂರ ಪೈಲ್ವಾನನ ರೀತಿಯಲ್ಲಿ ತಿಳಿಯುತ್ತಾರೆ ಮತ್ತು ತಿಳಿಯುತ್ತಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ.

ಈಗ ನಾವು ನೋಡುತ್ತಿದ್ದೇವೆ ಸರ್ವಶಕ್ತನಾದ ಅಲ್ಲಾಹನು MTA ಮೂಲಕ ಸ್ವತಃ ಸಂದೇಶವನ್ನು ಜಗತ್ತಿಗೆ ಕಳುಹಿಸುತ್ತಿದ್ದಾನೆ. ನಾನು ಮುಂಚೆಯು ಅನೇಕ ಬಾರಿ ಹೇಳಿದ್ದೇನೆ ನಮ್ಮ ಈ ಲೌಕಿಕ ಸಂಪನ್ಮೂಲಗಳು ಟಿವಿ ಚಾನೆಲ್‌ಅನ್ನು ನಡೆಸಲು ಅದು ದಿನದ 24 ಗಂಟೆ ನಡೆಸಲು ಮತ್ತು ಪ್ರಪಂಚದ ವಿವಿಧ ಭಾಗಗಳಲ್ಲಿ ನಡೆಸಲು ಸಾಧ್ಯವಾಗುತ್ತಿರಲಿಲ್ಲ. ಇಂದು ಪ್ರಪಂಚದ ಎಲ್ಲಾ ಭಾಗಗಳಿಗೆ ಈ ಕಾರ್ಯಕ್ರಮಗಳು ತಲುಪುತ್ತಿದೆ ಮತ್ತು ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ನನ್ನ ಖುತ್ಬಗಳ ಅನುವಾದಗಳು ತಲುಪುತ್ತಿವೆ. ಆರರಿಂದ ಏಳು ಭಾಷೆಗಳಲ್ಲಿ ಏಕಕಾಲಕ್ಕೆ ನೇರ ಅನುವಾದ ಮಾಡಲಾಗುತ್ತಿದೆ. ಇದೆಲ್ಲವೂ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಮಾಡಿದ ವಾಗ್ದಾನಗಳ ಫಲಿತಾಂಶವಾಗಿದೆ. ನನ್ನ ಖುತ್ಬ ಕಾರ್ಯಕ್ರಮಗಳ, MTAಯ ವಿವಿಧ ಕಾರ್ಯಕ್ರಮಗಳ ಮೂಲಕ, ಪರಿಶುದ್ಧ ಆತ್ಮಗಳು ಅಹ್ಮದಿಯ್ಯತ್‌ಗೆ ಸೇರುತ್ತಿದ್ದಾರೆ. ಎಂ.ಟಿ.ಎ ಅಥವಾ ಇತರ ಕಾರ್ಯಕ್ರಮಗಳಲ್ಲಿ ತಮ್ಮ ಖುತ್ಬಗಳು ನಮ್ಮ ಮೇಲೆ ಹೇಗೆ ಪ್ರಭಾವ ಬೀರಿತು ಮತ್ತು ನಾವು ಅಹ್ಮದಿಯ್ಯತ್‌ನಲ್ಲಿ ಯಾವ ರೀತಿ ಆಸಕ್ತಿ ಹೊಂದಿದ್ದೇವೆ ಮತ್ತು ಅಲ್ಲಾಹನು ಅಹ್ಮದಿಯ್ಯತ್ ಅನ್ನು ಸ್ವೀಕರಿಸಲು ನಮಗೆ ಯಾವ ರೀತಿ ಅವಕಾಶ ಮಾಡಿಕೊಟ್ಟನು ಎಂದು ಅನೇಕ ಜನರು ನನಗೆ ಬರೆಯುತ್ತಾರೆ.

ಸರ್ವಶಕ್ತನಾದ ಅಲ್ಲಾಹನಿಂದ ಜ್ಞಾನವನ್ನು ಪಡೆದ ನಂತರ ಜಮಾಅತ್ತಿನ ಅದ್ಭುತ ಭವಿಷ್ಯದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆಯುತ್ತಾರೆ: “ಸರ್ವಶಕ್ತನಾದ ಅಲ್ಲಾಹನು ನನಗೆ ಹಿರಿಮೆಯನ್ನು ನೀಡುತ್ತಾನೆ. ನನ್ನ ಪ್ರೀತಿಯನ್ನು ಹೃದಯಗಳಲ್ಲಿ ಇರಿಸುತ್ತಾನೆ. ಪ್ರಪಂಚದಾದ್ಯಂತ ನನ್ನ ಸರಪಳಿಯನ್ನು (ಜಮಾಅತ್ತನ್ನು) ಹರಡಿಸುತ್ತಾನೆ ಮತ್ತು ನನ್ನ ಪಂಗಡವು ಎಲ್ಲಾ ಪಂಗಡಗಳ ಮೇಲೆ ಮೇಲುಗೈ ಸಾಧಿಸುತ್ತದೆ ಎಂದು ನನಗೆ ಪದೇ ಪದೇ ತಿಳಿಸಿದ್ದಾನೆ. ನನ್ನ ಪಂಗಡದ ಜನರು ಲೋಕಜ್ಞಾನ ಮತ್ತು ದೈವಜ್ಞಾನದಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತಾರೆ, ಅವರು ತಮ್ಮ ಸತ್ಯಾಂಶದ ಪ್ರಕಾಶದಿಂದ, ತಮ್ಮ ಪುರಾವೆಗಳಿಂದ ಮತ್ತು ದೃಷ್ಟಾಂತಗಳ ಬೆಳಕಿನಿಂದ ಪ್ರತಿಯೊಬ್ಬರ ಬಾಯಿಯನ್ನು ಮುಚ್ಚುತ್ತಾರೆ ಮತ್ತು ಪ್ರತಿಯೊಂದು ಜನಾಂಗವೂ ಈ ಚಿಲುಮೆಯಿಂದ ನೀರನ್ನು ಕುಡಿಯುತ್ತದೆ. ಈ ಸರಪಳಿಯು (ಜಮಾಅತ್) ಭೂಮಿಯನ್ನು ಆವರಿಸುವವರೆಗೆ ಬಲವಾಗಿ ಬೆಳೆಯುತ್ತದೆ ಮತ್ತು ಪ್ರವರ್ಧಮಾನಕ್ಕೆ ಬರುತ್ತದೆ. ಅನೇಕ ಅಡೆತಡೆಗಳು, ಸಂಕಷ್ಟಗಳು ಎದುರಾಗುತ್ತವೆ ಆದರೆ ಅಲ್ಲಾಹನು ಅವೆಲ್ಲವನ್ನು ಮಧ್ಯದಿಂದ ದೂರಮಾಡಿ ತನ್ನ ವಾಗ್ದಾನವನ್ನು ಪೂರೈಸುತ್ತಾನೆ. ಮತ್ತು ಅಲ್ಲಾಹನು ನನಗೆ ಹೇಳಿರುವನು, ನಾನು ನಿನಗೆ ಎಷ್ಟು ಅನುಗ್ರಹ ನೀಡುವೆನೆಂದರೆ ಅರಸರು ನಿನ್ನ ವಸ್ತ್ರಗಳಿಂದ ಅನುಗ್ರಹವನ್ನು ಹುಡುಕುವರು.


ಕೇಳಿರಿ!! ಈ ಅಲ್ಲಾಹನ ಮಾತುಗಳನ್ನು ನೆನಪಿನಲ್ಲಿಡಿ ಮತ್ತು ಈ ಭವಿಷ್ಯವಾಣಿಗಳನ್ನು ತಮ್ಮ ಸಂದೂಖುಗಳಲ್ಲಿ ಸಂರಕ್ಷಿಸಿ ಇರಿಸಿಕೊಳ್ಳಿರಿ. ಏಕೆಂದರೆ ಇದು ಸರ್ವಶಕ್ತನಾದ ಅಲ್ಲಾಹನ ಮಾತುಗಳಾಗಿವೆ. ಒಂದಲ್ಲ ಒಂದು ದಿವಸ ಇದು ಪೂರ್ಣಗೊಳ್ಳುತ್ತದೆ.

**(ತಜಲ್ಲಿಯಾತೆ ಇಲಾಹಿಯ್ಯ, ರೂಹಾನಿ ಖಝಾಇನ್ ಸಂಪುಟ–20, ಪುಟ–409)**

ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರೀತಿಯ ಜಮಾಅತ್‌ಗೆ ಅಸಂಖ್ಯಾತ ಶುಭವಾರ್ತೆಗಳಿವೆ ಮತ್ತು ಇನ್‌ಶಾಅಲ್ಲಾಹ್ ವಿಜಯದ ಬಾಗಿಲು ಸದಾ ತೆರೆಯುತ್ತಾ ಹೋಗುತ್ತವೆ. ಈಗ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೈಅತ್‌ನಲ್ಲಿ ತನ್ನನ್ನು ಪರಿಗಣಿಸುವ ಪ್ರತಿಯೊಬ್ಬ ವ್ಯಕ್ತಿಯು ಈ ನಂಬಿಕೆಯನ್ನು ತನ್ನ ಹೃದಯದಲ್ಲಿ ಇರಿಸಿಕೊಳ್ಳುವುದು ಮತ್ತು ಯಾವಾಗಲೂ ಅದರ ಮೇಲೆ ದೃಢವಾಗಿರುವುದು ಅವನ ಕರ್ತವ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ನಂತರ ಅವರ ಮಾರ್ಗವನ್ನು ಅನುಸರಿಸುವ ಖಿಲಾಫತ್ ವ್ಯವಸ್ಥೆಯೊಂದಿಗೆ ಸಂಪರ್ಕವನ್ನು ಹೊಂದಿ ಈ ನಂಬಿಕೆಯ ದ್ಯೋತಕವಾಗಿ ಅದನ್ನು ಪ್ರಪಂಚದ ಮೂಲೆಗಳಲ್ಲಿ ಹರಡಿಸಬೇಕು ಮತ್ತು ಜಗತ್ತಿನಲ್ಲಿ ತೌಹೀದ್ (ಅಲ್ಲಹನ ಏಕತ್ವ) ಅನ್ನು ಸ್ಥಾಪಿಸಬೇಕು ಎಂಬುವುದು ನಂಬುವವರ ಕರ್ತವ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದಂತೆ: ಇದು ಸರ್ವಶಕ್ತನಾದ ಅಲ್ಲಾಹನ ಸುನ್ನತ್ ಆಗಿದೆ, ಅವನು ಎರಡು ಶಕ್ತಿಗಳನ್ನು ತೋರಿಸುತ್ತಾನೆ ಮತ್ತು ಈ ಎರಡನೇ ಶಕ್ತಿಯು ಖಿಲಾಫತ್ ವ್ಯವಸ್ಥೆಯಾಗಿದೆ ಎಂದು ನಮಗೆಲ್ಲರಿಗೂ ಚೆನ್ನಾಗಿ ತಿಳಿದಿದೆ. ಆದ್ದರಿಂದ ಖಿಲಾಫತ್ ವ್ಯವಸ್ಥೆಯು ಧಾರ್ಮಿಕ ಬೆಳವಣಿಗೆಯೊಂದಿಗೆ ಪ್ರಮುಖ ಸಂಬಂಧವನ್ನು ಹೊಂದಿದೆ ಮತ್ತು ಇದು ಇಸ್ಲಾಮಿನ ಶರಿಯ್ಯತ್‌ನ ಪ್ರಮುಖ ಭಾಗವಾಗಿದೆ. ಖಿಲಾಫತ್ ಇಲ್ಲದೆ ಧಾರ್ಮಿಕ ಬೆಳವಣಿಗೆ ಸಾಧ್ಯವಿಲ್ಲ. ಖಿಲಾಫತ್ ಇಲ್ಲದೆ ಜಮಾಅತ್‌ನ ಏಕತೆ ಉಳಿಯಲು ಸಾಧ್ಯವಿಲ್ಲ.

ಅಲ್ಲಾಹನು ನಮ್ಮನ್ನು ನಿಜವಾದ ಗುಲಾಮರನ್ನಾಗಿ ಮಾಡಲಿ. ಅಲ್ಲಾಹನ ಒಲವು ಮತ್ತು ಪ್ರತಿಫಲಗಳ ವಾರಸುದಾರರಾಗಿ ನಮ್ಮನ್ನು ಮೊದಲಿಗಿಂತ ಹೆಚ್ಚು ಮಾಡಲಿ ಮತ್ತು ಪ್ರತಿ ಮುಂಬರುವ ದಿನದಲ್ಲಿ ಪ್ರಗತಿಯ ಹೊಸ ಗುರಿಗಳನ್ನು ಹೊಂದಿಸುವುದನ್ನು ಮುಂದುವರಿಸೋಣ.– **ಆಮೀನ್**

ವಸ್ಸಲಾಮ್,
ವಿನೀತ



ಖಲೀಫತುಲ್ ಮಸೀಹ್ ಖಾಮಿಸ್

# ಕನ್ನಡ ವಾರಪತ್ರಿಕೆ 'ಬದರ್' ವಾರ್ಷಿಕ ಸಂಚಿಕೆ'


| ಕ್ರಮ ಸಂಖ್ಯ | ವಿಷಯ ಸೂಚಿಕೆ | ಪುಟ |
|---|---|---|
| 01 | ಸಂಪಾದಕರ ನುಡಿ | 01 |
| 02 | ಅಲ್ಲಹನ ಉಪದೇಶಗಳು | 02 |
| 03 | ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು | 03 |
| 04 | "ನಾನು ನಿನ್ನ ಉಪದೇಶವನ್ನು ಭೂಮಿಯ ಕೊನೆಯವರೆಗೆ ಸಾಗಿಸುತ್ತೇನೆ" | 04 |
| 05 | ಯುರೋಪಿನಲ್ಲಿ ಅಹ್ಮದೀಯ ಜಮಾಅತ್ತಿನ ಅಭಿವೃದ್ಧಿ | 08 |
| 06 | ದೂರದ ಪೂರ್ವದಲ್ಲಿ ಅಹ್ಮದಿಯಾ ಜಮಾಅತ್ತಿನ ಪ್ರಗತಿ | 13 |
| 07 | ಮಧ್ಯಪ್ರಾಚ್ಯದಲ್ಲಿ ಅಹ್ಮದಿಯಾ ಸಮುದಾಯದ ಅಭಿವೃದ್ಧಿಗಳು | 20 |
| 08 | ಆಫ್ರಿಕಾದಲ್ಲಿ ಅಹ್ಮದಿಯಾ ಜಮಾಅತ್‌ನ ಬೆಳವಣಿಗೆಗಳು | 24 |


**"ಪ್ರಪಂಚದ ಪ್ರತಿಯೊಂದು ದೇಶದಲ್ಲಿ, ಅಹ್ಮದಿಯಾ ಜಮಾಅತ್‌ನ ಪರಿಚಯಗಳು ಹೆಚ್ಚಾಗುವ ಪ್ರವೃತ್ತಿ ಕಂಡುಬಂದಿದೆ ಮತ್ತು ಜನರು ಅಹ್ಮದಿಯ್ಯತ್‌ಗೆ ಹತ್ತಿರವಾಗುತ್ತಿದ್ದಾರೆ"**

**"ಕುರುಡರಿಗೆ ಮತ್ತು ದೃಷ್ಟಿ ಇಲ್ಲದವರಿಗೆ ಈ ಸರಪಳಿಯು ತಲುಪಿರುವ ಶ್ರೇಷ್ಠತೆಯ ಬಗ್ಗೆ ಏನು ತಿಳಿದಿದೆ?"**

ಜಲ್ಸಾ ಸಾಲಾನ ಖಾದಿಯಾನ್ 2022ರ ಸಂದರ್ಭದಲ್ಲಿ ಬಿಡುಗಡೆಯಾಗಲಿರುವ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರು "ಪ್ರಪಂಚದ ಮೂಲೆಗಳಲ್ಲಿ ಅಹ್ಮದಿಯಾ ಜಮಾಅತ್ತಿನ ಮಹಾನ್ ಅಭಿವೃದ್ಧಿಗಳು" ಎಂಬ ಶೀರ್ಷಿಕೆಯನ್ನು ಅನುಮೋದಿಸಿದ್ದಾರೆ. ಸೀಮಿತ ಪುಟಗಳಲ್ಲಿ ಈ ಶೀರ್ಷಿಕೆಗೆ ಸಾಧ್ಯವಾದಷ್ಟು ನ್ಯಾಯ ಒದಗಿಸಲು ಪ್ರಯತ್ನಿಸಿದ್ದೇವೆ, ಆದರೆ ಜಮಾಅತ್ ಇಂದು ಎಷ್ಟು ಬೆಳೆದಿದೆ ಎಂಬುದನ್ನು ಕೆಲವೇ ಪುಟಗಳಲ್ಲಿ ವಿವರಿಸಲು ಅಸಾಧ್ಯವಾಗಿದೆ. ಇದು ಯಾವಾಗಲೂ ಬರೆಯಲ್ಪಡುವ ವಿಷಯವಾಗಿದೆ. ಹುಝೂರ್ ಅನ್ವರ್(ಅತಬಿಅ) ಅವರು ವರ್ಷದ ಆರಂಭದಲ್ಲಿ ನಮಗೆ ಈ ಶೀರ್ಷಿಕೆಗೆ ಅನುಮೋದನೆಯನ್ನು ನೀಡಿದ್ದರು ಮತ್ತು ಅದೇ ವಿಷಯದ ಮೇಲೆ ಅಂದರೆ "ನಾನು ನಿನ್ನ ಉಪದೇಶವನ್ನು ಭೂಮಿಯ ಕೊನೆಯವರೆವರೆಗೆ ತಲುಪಿಸುತ್ತೇನೆ" ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವೈಭವಯುತ ದೈವವಾಣಿಯಾಗಿದೆ, ಈ ಶೀರ್ಷಿಕೆಯ ಕುರಿತು ಆನ್‌ಲೈನ್ ಅಲ್‌ಫಝ್ಲ್ ದಿನಪತ್ರಿಕೆಯು ಸಹ ಮಾರ್ಚ್ 21 ರಿಂದ ಮಾರ್ಚ್ 26ರವರೆಗೆ 6 ಸಂಚಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದೆ, ಇದು ಒಂದು ಉತ್ತಮ ಅನಿರೀಕ್ಷಿತ ಸಂದರ್ಭವಾಗಿದೆ. ತದನಂತರ ಈ ಎಲ್ಲಾ ಲೇಖನಗಳನ್ನು ತಮ್ಮ ವೆಬ್‌ಸೈಟ್ www.alfazlonline.org ನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗಿದೆ, ಮಾನ್ಯ ಹನೀಫ್ ಮಹಮೂದ್ ಸಾಹಿಬ್ ಸಂಪಾದಕರು ಮತ್ತು ಎಲ್ಲಾ ಲೇಖನ ಬರಹಗಾರರು ಇದಕ್ಕಾಗಿ ಧನ್ಯವಾದಗಳಿಗೆ ಅರ್ಹರು. ಓದುಗರು ಈ ಅಮೂಲ್ಯ ಪ್ರಯತ್ನದ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಡೈಲಿ ಅಲ್–ಫಝ್ಲ್ ಆನ್‌ಲೈನ್‌ಗೆ ಧನ್ಯವಾದಗಳು, ಅಲ್–ಫಝ್ಲ್‌ನ ಮಾಜಿ ಸಂಪಾದಕ ಮತ್ತು ಜಾಮಿಯಾ ಅಹ್ಮದಿಯಾ ಘಾನಾದ ಪ್ರಸ್ತುತ ಶಿಕ್ಷಕ ಮಾನ್ಯ ಅಬ್ದುಲ್ ಸಮೀ ಖಾನ್ ಸಾಹಿಬ್ ಅವರ ಸುಂದರವಾದ ಲೇಖನವನ್ನು ಸಹ ನಾವು ನಮ್ಮ ಈ ವಿಶೇಷ ಸಂಚಿಕೆಯಲ್ಲಿ ಸೇರಿಸುತ್ತಿದ್ದೇವೆ.

ನಮ್ಮ ಪ್ರೀತಿಯ ಒಡೆಯರಾದ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲ ಬಿನಸ್ರಿಹಿಲ್ ಅಝೀಝ್ ಅವರು ತಮ್ಮ ಅತ್ಯಂತ ಬಿಡುವಿಲ್ಲದ ವೇಳಾಪಟ್ಟಿಯ ಹೊರತಾಗಿಯೂ, ಈ ವಿಶೇಷ ಸಂಚಿಕೆಗಾಗಿ ವಿಶ್ವಾಸವರ್ಧಕ ಸಂದೇಶ ಹಾಗೂ ತಮ್ಮ ಸಹಿಯೊಂದಿಗೆ ಅವರ ಚಿತ್ರವನ್ನು ಕಳುಹಿಸಿದ್ದಾರೆ, ಇದಕ್ಕಾಗಿ ನಾವು ಹುಝೂರ್ ಅನ್ವರ್(ಅತಬಿಅ) ಅವರಿಗೆ ಕೃತಜ್ಞರಾಗಿರುತ್ತೇವೆ. ಮತ್ತು ನಾವು ನಿಮಗಾಗಿ ಪ್ರಾರ್ಥಿಸುತ್ತೇವೆ, **ಅಲ್ಲಾಹುಮ್ಮ ಅಯ್ಯದ್ ಇಮಾಮನ ಬಿರೂಹಿಲ್ ಖುದೂಸ್ ವ ಬಾರಿಕ್ ಲನಾ ಫೀ ಉಮ್ರಿಹೀ ವ ಅಮ್ರಿಹೀ–** ತದನಂತರ, ನಮ್ಮ ಲೇಖನಗಳ ಬರಹಗಾರರಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ, ಅವರು ಸ್ಪಷ್ಟತೆಯೊಂದಿಗೆ ಸಮಗ್ರ ಮತ್ತು ಘನ ಲೇಖನಗಳನ್ನು ಸಿದ್ಧಪಡಿಸಿದ್ದಾರೆ.

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

ಒಬ್ಬ ಪ್ರವಾದಿ ಒಬ್ಬನೇ ಬರುತ್ತಾನೆ ಆದರೆ ಒಬ್ಬನೇ ಉಳಿಯುವುದಿಲ್ಲ. ಅತೀ ಶೀಘ್ರದಲ್ಲೇ ಅವನೊಂದಿಗೆ ಒಂದು ಜಮಾಅತ್ ರಚನೆಯಾಗುತ್ತದೆ, ಅವರು ಯಾವಾಗಲೂ ತಮ್ಮ ಜೀವನ, ಸಂಪತ್ತು ಮತ್ತು ಸಮಯವನ್ನು ಅವನ ಮೇಲೆ ಸುರಿಯಲು ಸಿದ್ಧರಾಗಿರುತ್ತಾರೆ, ಏಕೆಂದರೆ ಅವರು ಅವರ ಮುಖದಲ್ಲಿ ಅಲ್ಲಾಹನ ಮುಖವನ್ನು ನೋಡುತ್ತಾರೆ ಮತ್ತು ಯಾರಿಗೆ ಅಲ್ಲಾಹನ ಮುಖ ಕಾಣಲು ಪ್ರಾರಂಭವಾಗುತ್ತದೆಯೋ ಆತನಿಗೆ ಲೋಕದ ಯಾವುದೇ ಶಕ್ತಿಯು ಹೆದರಿಸಲು ಸಾಧ್ಯವಿಲ್ಲ. ತದನಂತರ ಅವನ ಅನುಯಾಯಿಗಳು ಅವನ ಪಟ್ಟಣದಿಂದ ನಗರಕ್ಕೆ, ನಗರದಿಂದ ದೇಶಕ್ಕೆ ಮತ್ತು ನಂತರ ದೇಶದಿಂದ ಇಡೀ ಜಗತ್ತಿಗೆ ಹರಡುತ್ತಾರೆ. ಹೀಗೆ ಆ ಪ್ರವಾದಿಯ ಭವಿಷ್ಯವಾಣಿಯ ಪ್ರಕಾರ ಸಂಭವಿಸುತ್ತದೆ ಆ ಪ್ರವಾದಿಯು ಮುಂಚಿತವಾಗಿಯೇ ಸರ್ವಶಕ್ತನಾದ ಅಲ್ಲಾಹನಿಂದ ವಾರ್ತೆಯನ್ನು ಪಡೆದು ತಿಳಿಸಿರುತ್ತಾರೆ. ಇದು ಪ್ರವಾದಿಯ ಸತ್ಯತೆಗೆ ಒಂದು ದೊಡ್ಡ ಪುರಾವೆಯಾಗಿದೆ, ಇದನ್ನು ಸರ್ವಶಕ್ತನಾದ ಅಲ್ಲಾಹನು ಬಹಳ ಸಂಕ್ಷಿಪ್ತ ಪದಗಳಲ್ಲಿ ವಿವರಿಸಿದ್ದಾನೆ. ಅಲ್ಲಾಹನು ಹೀಗೆಂದಿರುವನು **ಕತಬಲ್ಲಾಹು ಲಅಗ್ಲಿಬನ್ನ ಅನಾ ವರುಸುಲಿ–** ಇದು ಬದಲಾಯಿಸಲಾಗದ ದೈವವಿಧಿಯಾಗಿದೆ. ಆದ್ದರಿಂದ ಈ ಬದಲಾಯಿಸಲಾಗದ ವಿಧಿಯ ಚಿಹ್ನೆಗಳು ಬಹಳ ಪ್ರಮುಖವಾಗಿವೆ ಮತ್ತು ಚಿತ್ರವು ಸ್ಪಷ್ಟವಾಗಿ ಗೋಚರಿಸಲು ಪ್ರಾರಂಭಿಸಿದೆ. ಇಂದು ಅಹ್ಮದಿಯಾ ಜಮಾಅತ್ ಅಲ್ಲಾಹನ ಅನುಗ್ರಹದಿಂದ 213 ದೇಶಗಳಲ್ಲಿ ಹರಡಿದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಸಂಪೂರ್ಣ ನಿರ್ಣಯು ಮತ್ತು ಸಂಪೂರ್ಣ ನಂಬಿಕೆಯೊಂದಿಗೆ ಸರ್ವಶಕ್ತನಾದ ಅಲ್ಲಾಹನಿಂದ ಸುದ್ದಿಯನ್ನು ಸ್ವೀಕರಿಸಿದ ನಂತರ ಎಲ್ಲಾ ದೇಶಗಳಲ್ಲಿ ಅಹ್ಮದಿಯಾ ಹರಡುವಿಕೆಯ ಬಗ್ಗೆ ಭವಿಷ್ಯ ನುಡಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

ಓ ಜನರೇ ಇದು ಭೂವ್ಯಾಕಾಶಗಳನ್ನು ಸೃಷ್ಟಿಸಿದವನ ಭವಿಷ್ಯವಾಣಿಯಾಗಿದೆ: ಅಲ್ಲಾಹನು ತನ್ನ ಈ ಜಮಾಅತನ್ನು ಎಲ್ಲ ದೇಶಗಳಲ್ಲಿಯೂ ಹರಡುವನು. ತರ್ಕ ಮತ್ತು ಸಾಕ್ಷ್ಯಾಧಾರ ಮೂಲಕ ಎಲ್ಲರ ಮೇಲೆ ಅವರಿಗೆ ಜಯವನ್ನು ನೀಡುವನು. ಆ ದಿನಗಳು ಬರಲಿವೆ, ಅವು ಸಮೀಪದಲ್ಲಿಯೇ ಇವೆ. ಲೋಕದಲ್ಲಿ ಕೇವಲ ಈ ಒಂದು ಧರ್ಮ ಮಾತ್ರ ಗೌರವಾದರಗಳೊಂದಿಗೆ ಸ್ಮರಿಸಲ್ಪಡುವುದು. ಅಲ್ಲಾಹನು ಈ ಧರ್ಮಕ್ಕೆ ಅಸಾಧಾರಣವಾದ ಅನುಗ್ರಹ ನೀಡುವನು. ಈ ಜಮಾಅತನ್ನು ನಾಶಮಾಡಲು ಚಿಂತಿಸುವ ಪ್ರತಿಯೊಬ್ಬನನ್ನು ನಿರಾಶೆ ಹೊಂದಿದವನಾಗಿ ಮಾಡುವನು. ಈ ಜಯ ಖಿಯಾಮತ್ ತನಕ ಜಾರಿಯಲ್ಲಿರುವುದು. (ತಝ್ಕಿರತುಶ್ಶಹದತೈನ್, ರೂಹಾನಿ ಖಝಾಈನ್, ಸಂಪುಟ–20, ಪುಟ–66)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಈ ಭವಿಷ್ಯವಾಣಿಯು ಅತ್ಯಂತ ಭವ್ಯವಾದ ರೀತಿಯಲ್ಲಿ ನೆರವೇರುವುದನ್ನು ನಾವು ನೋಡುತ್ತಿದ್ದೇವೆ. ಮತ್ತು ಈ ಭವಿಷ್ಯವಾಣಿಯು ಪ್ರಪಂಚದ ಪ್ರತಿಯೊಂದು ಮೂಲೆಯನ್ನು ಆವರಿಸುವ ದಿನ ದೂರವಿಲ್ಲ. ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಈ ಭವ್ಯವಾದ ಭವಿಷ್ಯವಾಣಿಯನ್ನು ನೀಡಿದ್ದನು, ಅಂದರೆ "ನಾನು ನಿಮ್ಮ ಉಪದೇಶವನ್ನು ಭೂಮಿಯ ಅಂಚಿನವರೆಗೆ ತಲುಪಿಸುತ್ತೇನೆ", 1898 ರಲ್ಲಿ ಜಮಾಅತ್ತಿನ ಸಂಖ್ಯೆ ಕೇವಲ ಹತ್ತು ಸಾವಿರವಾಗಿತ್ತು. ಇಂದು ಅದು ಕೋಟಿಗಳನ್ನು ತಲುಪಿದೆ ಅಲ್ಹಮ್ದುಲಿಲ್ಲಾಹ್. ಜಮಾಅತ್ತಿನ ಸಂಖ್ಯೆ ಕೇವಲ ಮುನ್ನೂರ ಹದಿನೆಂಟು ಎಂದು ಅಂಜುಮನ್ ಹಿಮಾಯತೆ ಇಸ್ಲಾಂ ಲಾಹೋರ್‌ನ ಆರೋಪಕ್ಕೆ ಪ್ರತಿಕ್ರಿಯೆಯಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು 1898 ರಲ್ಲಿ ಬರೆಯಲಾದ ತನ್ನ ಪುಸ್ತಕ "ಅಲ್–ಬಲಾಗ್" ನಲ್ಲಿ ಹೀಗೆ ಹೇಳುತ್ತಾರೆ:

"ಮಿರ್ಜಾ ಸಾಹಿಬ್ ತನ್ನ ಅನುಯಾಯಿಗಳ ಸಂಖ್ಯೆಯನ್ನು ಮುನ್ನೂರ ಹದಿನೆಂಟಕ್ಕಿಂತ ಹೆಚ್ಚು ಎಂದು ಹೇಳಲು ಸಾಧ್ಯವಿಲ್ಲ ಎಂದು ಹೇಳುವುದು ಸುಳ್ಳಾಗಿದೆ. ಈ ಸಂಖ್ಯೆಯು ಆ ಸಂದರ್ಭದಲ್ಲಿ ತಮ್ಮ ಮನಸ್ಸಿಗೆ

*(ಉಳಿದ ಭಾಗ ಪುಟ ಸಂಖ್ಯೆ 27ರಲ್ಲಿ ಮುಂದುವರಿಸಲಾಗಿದೆ)*

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿ ಎಲ್ಲಾ ಧರ್ಮಗಳ ಮೇಲೆ ರಸೂಲುಲ್ಲಾಹ್(ಸ) ರವರ ಧರ್ಮ ಪ್ರಾಬಲ್ಯ ಸಾಧಿಸುತ್ತದೆ, ಆದರೆ ಅದು ಯಾರ ಮೂಲಕ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೂಲಕ.**

**ಇದು ಎಂತಹ ವಚನ ಆಗಿದೆ ಎಂದರೆ, ಇದನ್ನು ಓದಿದ ನಂತರ ಓರ್ವ ಅಹ್ಮದಿಯ ಹೃದಯ ಬಡಿತವನ್ನು ನಿಲ್ಲಿಸಬಹುದು ಎಂದು ನಾನು ಭಾವಿಸುವುದಿಲ್ಲ.**
**ಮನುಷ್ಯನಿಗೆ ಮಹಾನ್ ಸಂತೋಷ ಲಭಿಸಿದಾಗ, ಅವನ ಹೃದಯವು ಜಿಗಿಯಲು ಪ್ರಾರಂಭಿಸುತ್ತದೆ**
**ಈ ವಚನದಲ್ಲಿ ನಮ್ಮ ಅಹ್ಮದ್(ಅ) ಮತ್ತು ಅಹ್ಮದೀಯರ ಉಲ್ಲೇಖವಿರುವುದರಿಂದ, ಪ್ರಾಕೃತಿಕ ಸ್ವಭಾವದ ಕಾರಣದಿಂದ ನಾವು ಸಂತೋಷ ಪಡಲು ಅನುಮತಿ ಇದೆ.**

يُرِيْدُوْنَ لِيُطْفِـُٔوْا نُوْرَ اللّٰهِ بِاَفْوَاهِهِمْ وَاللّٰهُ مُتِمُّ نُوْرِهٖ وَلَوْ كَرِهَ الْكٰفِرُوْنَ ۝

**ಯುರೀದೂನ ಲಿಯುತ್ಫಿಊ ನೂರಲ್ಲಾಹಿ ಬಿಅಫ್ವಾಇಹಿಮ್ ವಲ್ಲಾಹು ಮುತಿಮ್ಮು ಬೂರಿಹೀ ವಲೌ ಕರಿಹಲ್ ಕಾಫಿರೂನ್** (ಸೂರತುಸ್ಸಫ್, ಆಯತ್ 9)

ಅನುವಾದ: ಅವರು ತಮ್ಮ ಬಾಯಿಯಿಂದ ಅಲ್ಲಾಹನ ಬೆಳಕನ್ನು ನಂದಿಸಲು ಬಯಸುತ್ತಾರೆ ಮತ್ತು ಅಲ್ಲಾಹನು ತನ್ನ ಬೆಳಕನ್ನು ಪೂರ್ಣಗೊಳಿಸುತ್ತಾನೆ ಮತ್ತು ನಂಬಿಕೆ ದ್ರೋಹಿಗಳು (ಜನರು) ಅದನ್ನು ಎಷ್ಟು ಇಷ್ಟಪಡದಿದ್ದರೂ ಅದನ್ನು ಬಿಟ್ಟುಬಿಡುತ್ತಾನೆ.

ಸಯ್ಯದ್‌ನಾ ಹಝ್ರತ್ ಮುಸ್ಲೆಹ್ ಮೌಊದ್ ಅಲೈಹಿಸ್ಸಲಾಮ್ ಈ ವಚನದ ಬಗ್ಗೆ ಹೇಳುತ್ತಾರೆ:

ಇದು ಎಂತಹ ವಚನವಾಗಿದೆ ಎಂದರೆ, ಇದನ್ನು ಓದಿದ ನಂತರ ಓರ್ವ ಅಹ್ಮದೀಯ ಹೃದಯ ಬಡಿತವನ್ನು ನಿಲ್ಲಿಸಬಹುದು ಎಂದು ನಾನು ಭಾವಿಸುವುದಿಲ್ಲ. ಒಬ್ಬ ಮನುಷ್ಯನಿಗೆ ಮಹಾನ್ ಸಂತೋಷ ಲಭಿಸಿದಾಗ, ಅವನ ಹೃದಯವು ಜಿಗಿಯಲು ಪ್ರಾರಂಭಿಸುತ್ತದೆ. ಅದೇ ರೀತಿ ಸಂಕಟದ ಸಂದರ್ಭದಲ್ಲೂ ಅದೇ ಸಂಭವಿಸುತ್ತದೆ ಮತ್ತು ಇದು ಪ್ರಾಕೃತಿಕ ಸ್ವಭಾವವಾಗಿದೆ, ಇದರಿಂದ ಯಾರಿಗೂ ವಿನಾಯಿತಿ ನೀಡಲಾಗುವುದಿಲ್ಲ. ಈ ವಚನದಲ್ಲಿ ಅಹ್ಮದ್(ಅ) ಮತ್ತು ಅಹ್ಮದೀಯರ ಉಲ್ಲೇಖವಿರುವುದರಿಂದ, ಪ್ರಾಕೃತಿಕ ಸ್ವಭಾವದ ಕಾರಣದಿಂದ ನಾವು ಸಂತೋಷವಾಗಿರುವುದು ಪ್ರಾಕೃತಿಕ ವಿಷಯವಾಗಿದೆ. ಅವರು ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಈ ವಚನಕ್ಕೆ ಸಂಬಂಧಿಸಿದಂತೆ ಅಂತಹ ಪುರಾವೆಗಳನ್ನು ನನಗೆ ವಿವರಿಸಿದ್ದಾನೆ, ಯಾರಾದರೂ ನ್ಯಾಯಯುತವಾಗಿ ವರ್ತಿಸಿದರೆ, ಅವರು ನಮ್ಮ ದಾವೆಗಳ ಸತ್ಯದ ಬಗ್ಗೆ ಸ್ವಲ್ಪವೂ ಅನುಮಾನಿಸುವುದಿಲ್ಲ ಮತ್ತು ಆ ಪುರಾವೆಗಳ ಸತ್ಯವನ್ನು ಅವರು ಎಂದಿಗೂ ನಿರಾಕರಿಸಲಾಗುವುದಿಲ್ಲ.

**(ಅಲ್-ಫಝ್ಲ್, ಏಪ್ರಿಲ್ 18, 1914, ಪುಟ-5)**

ಸಯ್ಯದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ವಚನ ಅಲ್-ಸಫ್‌ನ ಮೇಲಿನ ಆಯತ್‌ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಜನರು ತಮ್ಮ ಬಾಯಿಂದ ಅಲ್ಲಾಹನ ಬೆಳಕನ್ನು ನಂದಿಸುವ ಉದ್ದೇಶ ಹೊಂದಿದ್ದಾರೆ, ಆದರೆ ಕಪಟವಿಶ್ವಾಸಿಗರು ಎಷ್ಟು ಕೆಟ್ಟವರು ಎಂದು ತಿಳಿದಿದ್ದರೂ ಅಲ್ಲಾಹನು ತನ್ನ ಬೆಳಕನ್ನು ಹರಡುತ್ತಾನೆ. ಇದು ಸ್ಪಷ್ಟವಾಗಿ ಈ ಯುಗಕ್ಕೆ ಸಂಬಂಧಿಸಿದೆ. ರಸೂಲುಲ್ಲಾಹ್(ಸ) ರವರ ಕಾಲದಲ್ಲಿ, ಜನರು ತಮ್ಮ ಬಾಯಿಯಿಂದ ಇಸ್ಲಾಂ ಧರ್ಮವನ್ನು ತಡೆಯಲು ಬಯಸುತ್ತಿರಲಿಲ್ಲ ಆದರೆ ಅದನ್ನು ಖಡ್ಗ ಮತ್ತು ಕತ್ತಿಗಳಿಂದ ಮಾಡುತ್ತಿದ್ದರು. ಆ ಸಮಯದಲ್ಲಿ, ಮುಸ್ಲಿಮರನ್ನು ನಾಶಮಾಡಲು ಕತ್ತಿಯನ್ನು ಎತ್ತಲಾಯಿತು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದಲ್ಲಿ, ಜನರು ಅದನ್ನು ನಂದಿಸಲು ಪ್ರಯತ್ನಿಸಿದರು ಮತ್ತು ವಿಫಲರಾಗಿದ್ದಾರೆ. ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿಯವರೂ ಕೂಡ 'ಕುಫರ್'ನ ಫತ್ವಾ ಹೊರಡಿಸಿದರೆ ಈ ಸರಪಳಿ ನಾಶವಾಗುತ್ತದೆ ಎಂದು ಯೋಚಿಸಿದರು, ಆದರೆ ಅವರು ಏನು ಮಾಡಬಹುದು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿರುದ್ಧ ಉಪನ್ಯಾಸಗಳು, ಕರಪತ್ರಗಳು ಮತ್ತು ನಿಯತಕಾಲಿಕೆಗಳ ಸರಣಿಯನ್ನು ಪ್ರಕಟಿಸಲಾಯಿತು, ಆದರೆ ಅಲ್ಲಾಹನು ಪ್ರತಿ ಅಂಶದಲ್ಲೂ ನಿರಾಕರಿಸಿದವರನ್ನು ಅವಮಾನಿಸಿದನು. **(ಅಲ್-ಫಝ್ಲ್, ಏಪ್ರಿಲ್ 20, 1914, ಪುಟ5)**

هُوَ الَّذِيْٓ اَرْسَلَ رَسُوْلَهٗ بِالْهُدٰى وَدِيْنِ الْحَقِّ لِيُظْهِرَهٗ عَلَى الدِّيْنِ كُلِّهٖ ۙ وَلَوْ كَرِهَ الْمُشْرِكُوْنَ

**ಹುವಲ್ಲಝಿ ಅರ್‌ಸಲ ರಸೂಲಹೂ ಬಿಲ್ ಹುದಾ ವ ದೀನಿಲ್ ಹಖ್ಖಿ ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ; ವಲೌ ಕರಿಹಲ್ ಮುಶ್ರಿಕೂನ್.** (ಸೂರತುಸ್ಸಫ್ ಆಯತ್ 10)

ಅನುವಾದ: ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಅವನು ತನ್ನ ಸಂದೇಶವಾಹಕನನ್ನು ಸತ್ಯದರ್ಶನ ಮತ್ತು ಸತ್ಯಧರ್ಮದೊಂದಿಗೆ ನಿಯೋಜಿಸಿದ್ದಾನೆ. ಬಹು ದೇವಾರಾಧಕರು ಅದನ್ನು ದ್ವೇಶಿಸಿದರೂ ಸರಿ.

ಸಯ್ಯದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಈ ಆಯತ್‌ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಎಲ್ಲಾ ವ್ಯಾಖ್ಯಾನಕಾರರು ಇಲ್ಲಿಗೆ ಬಂದು ಹೇಳುವುದೇನೆಂದರೆ ಎಲ್ಲಾ ಧರ್ಮಗಳನ್ನು ತೆರೆಯುವ ಮಸೀಹರ ಕಾಲವಾಗಿದೆ ಮತ್ತು ಇದು ಸಂಪೂರ್ಣವಾಗಿ ಸರಿಯಾಗಿದೆ, ಏಕೆಂದರೆ ರಸೂಲುಲ್ಲಾಹ್(ಸ) ರವರ ಸಮಯದಲ್ಲಿ ಕೇವಲ ಎರಡು ಅಥವಾ ಮೂರು ಧರ್ಮಗಳು ಮಾತ್ರ ಇದ್ದವು. ಆದರೆ ಇಂದು ಸಾವಿರಾರು ಧರ್ಮಗಳು ಹುಟ್ಟಿಕೊಂಡು ಅಸ್ತಿತ್ವದಲ್ಲಿವೆ. ಎನ್‌ಸೈಕ್ಲೋಪೀಡಿಯಾ ಆಫ್ ರಿಲಿಜಿಯನ್ಸ್‌ನಲ್ಲಿ ಸಾವಿರಾರು ಧರ್ಮಗಳನ್ನು ದಾಖಲಿಸಲಾಗುತ್ತಿದೆ. ಈ ಆಯತ್‌ನಲ್ಲಿ, ಲಿಯುಝ್‌ಹಿರಹೂ ಎಂದು ಇರಿಸಲಾಗಿದೆ. ಅಂದರೆ, ಆ ಸಮಯದಲ್ಲಿ, ಎಲ್ಲಾ ಧರ್ಮಗಳ ಮೇಲೆ ರಸೂಲುಲ್ಲಾಹ್(ಸ) ರವರು ಪ್ರಾಬಲ್ಯ ಸಾಧಿಸುತ್ತಾರೆ, ಆದರೆ ಅದು ಯಾರ ಮೂಲಕ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೂಲಕ. ನಂತರ ಸರ್ವಶಕ್ತನಾದ ಅಲ್ಲಾಹನು ನನಗೆ ಮತ್ತೊಂದು ಪುರಾವೆಯನ್ನು ವಿವರಿಸಿದ್ದಾನೆ ಅದೇನೆಂದರೆ ಈ ಆಯತ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಸಂಬಂಧಿಸಿದ್ದು ಹೇಗೆಂದರೆ ಈ ಆಯತ್ ಪವಿತ್ರ ಖುರ್‌ಆನ್‌ನಲ್ಲಿ ಮೂರು ಸ್ಥಳಗಳಲ್ಲಿ ಕಾಣಿಸಿಕೊಂಡಿದೆ ಮತ್ತು ಎಲ್ಲಾ ಮೂರು ಸ್ಥಳಗಳು ಮಸೀಹರೊಂದಿಗೆ ಉಲ್ಲೇಖಿಸಲಾಗಿದೆ. (1) ಸೂರಾ ತೌಬ ರುಕು-5 (2) ಸೂರಾ ಫತಾಹ್ ರುಕು-4 (3) ಮತ್ತು ಈ ಸ್ಥಳದಲ್ಲಿ (ಸೂತರುಸ್ಸಫ್ ಆಯತ್ 10).

ಈ ಮೂರೂ ಸ್ಥಳಗಳಲ್ಲಿ ಮಸೀಹರನ್ನು ಉಲ್ಲೇಖಿಸಲಾಗಿದೆ. ಎರಡು ಸ್ಥಳಗಳಲ್ಲಿ ಸ್ಪಷ್ಟವಾದ ಹೆಸರಿದೆ ಮತ್ತು ಸುರಾ ಫತಾಹ್‌ದಲ್ಲಿ ಇಂಜೀಲ್‌ನ ಹೆಸರನ್ನು ಬರೆಯಲಾಗಿದೆ. ಅದಕ್ಕೆ ಕಾರಣವೇನೆಂದರೆ ಮಸೀಹರು ಮತ್ತೆ ಆಗಮಿಸಬೇಕಾಗಿತ್ತು ಮತ್ತು ಈ ಘಟನೆಗಳು ಅವರಿಗೆ ಸಂಭವಿಸಬೇಕಾಗಿತ್ತು, ಇಲ್ಲದಿದ್ದರೆ ಈ ಆಯತ್‌ಅನ್ನು ವಿಭಿನ್ನವಾಗಿ ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಿಕೊಂಡಿರುವುದಕ್ಕೆ ಯಾವುದೇ ಕಾರಣವಿರಲಿಲ್ಲ. ಮತ್ತು ಪ್ರತಿಯೊಂದು ಕಡೆ ಮಸೀಹರ ಉಲ್ಲೇಖವು ಅವರೊಂದಿಗೆ ಮಾಡುವುದಕ್ಕೆ ಕಾರಣವಿರಲಿಲ್ಲ. (ಅಲ್-ಫಝ್ಲ್, ಏಪ್ರಿಲ್ 20, 1914, ಪುಟ-5)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

**"**ದೈವಜ್ಞಾನವು ಹಾಗೂ ಜ್ಞಾನವನ್ನು ಸೌಂದರ್ಯದ ಶೈಲಿಯಲ್ಲಿ ಸೇರಿಸಲಾಗಿದೆ ಮತ್ತು ಪವಿತ್ರ ಖುರ್‌ಅನ್‌ನ ಆಯತ್ **ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ** ನಲ್ಲಿ ಈ ದೈವಜ್ಞಾನಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಸಂಪೂರ್ಣವಾಗಿ ನೀಡಲಾಗುವುದು ಎಂದು ವಾಗ್ದಾನ ನೀಡಲಾಯಿತು. ಏಕೆಂದರೆ ಎಲ್ಲಾ ಧರ್ಮಗಳ ಮೇಲಿನ ಪ್ರಾಬಲ್ಯದ ಮೂಲವು ಸತ್ಯದ ಜ್ಞಾನ ಮತ್ತು ಸ್ಪಷ್ಟವಾದ ಪುರಾವೆಗಳು ಮತ್ತು ಆಯತ್‌ಗಳು ಆಗಿವೆ, ಮತ್ತು ಧರ್ಮದ ಪ್ರಭುತ್ವವು ಅವುಗಳ ಮೇಲೆ ಅವಲಂಬಿತವಾಗಿದೆ. (ಅರ್ಬಈನ್ ಸಂಖ್ಯೆ-4, ಪುಟ 14 ಅಡಿಟಿಪ್ಪಣಿ)

ನಾನು ಈ ಖುರ್‌ಆನ್‌ನ ಆಯತ್‌ನಿಂದ ಪ್ರೇರಿತನಾಗಿ ಸುಮಾರು ಇಪ್ಪತ್ತು ವರ್ಷಗಳು ಕಳೆದಿವೆ ಮತ್ತು ಅದು: **ಹುವಲ್ ಲ್ಲಝೀ ಅರ್ಸಲ ರಸೂಲಹೂ ಬಿಲ್ ಹುದಾ ವದೀನಿಲ್ ಹಖ್ಖಿ ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ** (ಆ ಅಲ್ಲಾಹನು ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಅವನು ತನ್ನ ಸಂದೇಶವಾಹಕನನ್ನು ಸತ್ಯದರ್ಶನ ಮತ್ತು ಸತ್ಯಧರ್ಮದೊಂದಿಗೆ ನಿಯೋಜಿಸಿದ್ದಾನೆ.) ಮತ್ತು ನನಗೆ ಈ ಇಲ್‌ಹಾಮ್‌ನ ಅರ್ಥವನ್ನು ವಿವರಿಸಲಾಗಿದೆ. ನನ್ನ ಕೈಗಳ ಮೂಲಕ ಎಲ್ಲಾ ಧರ್ಮಗಳ ಮೇಲೆ ಇಸ್ಲಾಂ ಧರ್ಮವನ್ನು ಪ್ರಾಬಲ್ಯ ಸಾಧಿಸಲು ನಾನು ಸರ್ವಶಕ್ತನಾದ ಅಲ್ಲಾಹನಿಂದ

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

**ಅಲ್ಲಾಹನ ದಯೆಯಿಂದ ನಾನೇ ಈ ಹೋರಾಟದಲ್ಲಿ ಜಯಶಾಲಿಯಾಗುವೆನೆಂದೂ ಪೂರ್ಣ ಭರವಸೆಯಿಂದಲೂ ದೃಢನಂಬಿಕೆಯಿಂದಲೂ ಘೋಷಿಸುತ್ತೇನೆ. ನಾನು ದೂರಗಾಮಿ ದೃಷ್ಟಿಯಿಂದ ನೋಡುವಾಗ ನಾನು ಲೋಕವನ್ನು ನನ್ನ ಸತ್ಯದ ಪಾದಗಳಡಿಯಲ್ಲಿ ಕಾಣುತ್ತಿದ್ದೇನೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಾನು ಸತ್ಯವಂತನೆಂದೂ ಅಲ್ಲಾಹನ ದಯೆಯಿಂದ ನಾನೇ ಈ ಹೋರಾಟದಲ್ಲಿ ಜಯಶಾಲಿಯಾಗುವೆನೆಂದೂ ಪೂರ್ಣ ಭರವಸೆಯಿಂದಲೂ ದೃಢನಂಬಿಕೆಯಿಂದಲೂ ಘೋಷಿಸುತ್ತೇನೆ. ನಾನು ದೂರಗಾಮಿ ದೃಷ್ಟಿಯಿಂದ ನೋಡುವಾಗ ನಾನು ಲೋಕವನ್ನು ನನ್ನ ಸತ್ಯದ ಪಾದಗಳಡಿಯಲ್ಲಿ ಕಾಣುತ್ತಿದ್ದೇನೆ. ನಾನು ಮಹತ್ತರವಾದ ಜಯಗಳಿಸುವ ಕಾಲವು ಸಮೀಪವಾಗಿದೆ. ಏಕೆಂದರೆ ನನ್ನ ನಾಲಿಗೆಗೆ ಬೆಂಬಲವಾಗಿ ಇನ್ನೊಂದು ನಾಲಿಗೆ ಮಾತನಾಡುತ್ತಿದೆ. ನನ್ನ ಕೈಯನ್ನು ಬಲಪಡಿಸಲು ಇನ್ನೊಂದು ಕೈ ಚಲಿಸುತ್ತಿದೆ. ಇದನ್ನೆಲ್ಲ ಲೋಕ ನೋಡುತ್ತಾ ಇಲ್ಲ; ಆದರೆ ನಾನು ನೋಡುತ್ತಿರುವೆನು. ನನ್ನೊಳಗೆ ಒಂದು ದೈವಿಕ ಚೇತನ ಮಾತನಾಡುತ್ತಿದೆ. ಅದು ನನ್ನ ಶಬ್ದ ಶಬ್ದಗಳಿಗೂ ಅಕ್ಷರ ಅಕ್ಷರಗಳಿಗೂ ಜೀವ ನೀಡುತ್ತಿದೆ. ಆಕಾಶದಲ್ಲಿ ಒಂದು ಉತ್ಸಾಹ ಮತ್ತು ಉತ್ತೇಜಕ ಸ್ಥಿತಿಯುಂಟಾಗಿದೆ. ಅದು ಈ ಒಂದು ಮುಷ್ಟಿ ಮಣ್ಣನ್ನು ಒಂದು ಬೊಂಬೆಯನ್ನಾಗಿ ಮಾಡಿ ನಿಲ್ಲಿಸಿದೆ. ಪಾಪಗಳಿಗೆ ಪಶ್ಚಾತ್ತಾಪಗೊಂಡು ದೇವನ ಕಡೆಗೆ ಮರಳುವ ಬಾಗಿಲು ಮುಚ್ಚಲ್ಪಡದ ಪ್ರತಿಯೊಬ್ಬನು ಬೇಗನೆ ತಿಳಿದುಕೊಳ್ಳುವನು - ನಾನು ನನ್ನಿಷ್ಟದ ಪ್ರಕಾರ ವಾದಿಸಿದವನಲ್ಲ ಎಂದು. ಸತ್ಯವಂತನನ್ನು ಗುರುತಿಸಲಾರದ ಕಣ್ಣುಗಳು ದೃಷ್ಟಿಯನ್ನು ಹೊಂದಿವೆಯೋ? ಈ ದೈವಿಕ ಕರೆಯನ್ನು ಲಕ್ಷಿಸದವನು ಸಜೀವವಾಗಿ ಇರುವನೆಂದು ಗ್ರಹಿಸಲ್ಪಡುವನೇ? **(ಇಝಾಲ ಔಹಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 403)**

"ಸರ್ವಶಕ್ತನಾದ ಅಲ್ಲಾಹನು ನನಗೆ ಹಿರಿಮೆಯನ್ನು ನೀಡುತ್ತಾನೆ ಮತ್ತು ನನ್ನ ಪ್ರೀತಿಯನ್ನು ಹೃದಯಗಳಲ್ಲಿ ಇರಿಸುತ್ತಾನೆ ಮತ್ತು ಪ್ರಪಂಚದಾದ್ಯಂತ ನನ್ನ ಸರಪಳಿಯನ್ನು (ಜಮಾಅತ್ತನ್ನು) ಹರಡಿಸುತ್ತಾನೆ. ಮತ್ತು ನನ್ನ ಪಂಗಡವು ಎಲ್ಲಾ ಪಂಗಡಗಳ ಮೇಲೆ ಮೇಲುಗೈ ಸಾಧಿಸುತ್ತದೆ ಎಂದು ನನಗೆ ಪದೇ ಪದೇ ತಿಳಿಸಿದ್ದಾನೆ. ಮತ್ತು ನನ್ನ ಪಂಗಡದ ಜನರು ಜ್ಞಾನ ಮತ್ತು ದೈವಜ್ಞಾನದಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತಾರೆ, ಅವರು ತಮ್ಮ ಸತ್ಯಾಂಶದ ಪ್ರಕಾಶದಿಂದ, ತಮ್ಮ ಪುರಾವೆಗಳಿಂದ ಮತ್ತು ದೃಷ್ಟಾಂತಗಳ ಬೆಳಕಿನಿಂದ ಪ್ರತಿಯೊಬ್ಬರ ಬಾಯಿಯನ್ನು ಮುಚ್ಚುತ್ತಾರೆ ಮತ್ತು ಪ್ರತಿಯೊಂದು ಜನಾಂಗವೂ ಈ ಚಿಲುಮೆಯಿಂದ ನೀರನ್ನು ಕುಡಿಯುತ್ತದೆ. ಈ ಸರಪಳಿಯು (ಜಮಾಅತ್) ಭೂಮಿಯನ್ನು ಆವರಿಸುವವರೆಗೆ ಬಲವಾಗಿ ಬೆಳೆಯುತ್ತದೆ ಮತ್ತು ಪ್ರವರ್ಧಮಾನಕ್ಕೆ ಬರುತ್ತದೆ. ಅನೇಕ ಅಡೆತಡೆಗಳು, ಸಂಕಷ್ಟಗಳು ಎದುರಾಗುತ್ತವೆ ಆದರೆ ಅಲ್ಲಾಹನು ಅವೆಲ್ಲವನ್ನು ಮಧ್ಯದಿಂದ ಎಬ್ಬಿಸಿ ತನ್ನ ವಾಗ್ದಾನವನ್ನು ಪೂರೈಸುತ್ತಾನೆ. ಮತ್ತು ಅಲ್ಲಾಹನು ನನಗೆ ಹೇಳಿರುವನು, ನಾನು ನಿನಗೆ ಎಷ್ಟು ಅನುಗ್ರಹ ನೀಡುವೆನೆಂದರೆ ಅರಸರು ನಿನ್ನ ವಸ್ತ್ರಗಳಿಂದ ಅನುಗ್ರಹವನ್ನು ಹುಡುಕುವರು.

ಕೇಳಿರಿ!! ಈ ಅಲ್ಲಾಹನ ಮಾತುಗಳನ್ನು ನೆನಪಿನಲ್ಲಿಡಿ ಮತ್ತು ಈ ಭವಿಷ್ಯವಾಣಿಗಳನ್ನು ತಮ್ಮ ಪೆಟ್ಟಿಗೆಗಳಲ್ಲಿ ಸಂರಕ್ಷಿಸಿ ಇರಿಸಿಕೊಳ್ಳಿರಿ ಏಕೆಂದರೆ ಇದು ಸರ್ವಶಕ್ತನಾದ ಅಲ್ಲಾಹನ ಮಾತುಗಳಾಗಿವೆ, ಒಂದಲ್ಲ ಒಂದು ದಿವಸ ಇದು ಪೂರ್ಣಗೊಳ್ಳುತ್ತದೆ. ನಾನು ನನ್ನಲ್ಲಿ ಯಾವುದೇ ಸದ್ಗುಣವನ್ನು ಕಾಣುವುದಿಲ್ಲ. ಮತ್ತು ನಾನು ಮಾಡಬೇಕಾದುದನ್ನು ನಾನು ಮಾಡಲಿಲ್ಲ. **(ತಜಲ್ಲಿಯಾತೆ ಇಲಾಹಿಯ್ಯ, ರೂಹಾನಿ ಖಝಾಇನ್ ಸಂಪುಟ-20, ಪುಟ-408-410)**

ಕೇಳಿರಿ!! ಈ ಕಲಾಮ್ ಅನ್ನು ಬಹಿರಂಗಪಡಿಸಿದವನು ಹೇಳುವುದೇನೆಂದರೆ. ಅವನು ನನ್ನನ್ನು ಉದ್ದೇಶಿಸಿ ನಾನು ನಿನಗೆ ನನ್ನ ತೇಜಸ್ಸನ್ನು ತೋರಿಸುತ್ತೇನೆ ಮತ್ತು ನನ್ನ ಶಕ್ತಿಯನ್ನು ತೋರಿಸುತ್ತೇನೆ. ಲೋಕಕ್ಕೆ ಓರ್ವ ಮುನ್ನೆಚ್ಚರಿಕೆ ನೀಡುವವನು ಆಗಮಿಸಿದ್ದನು, ಆದರೆ ಲೋಕವು ಅವನನ್ನು ಸ್ವೀಕರಿಸಲಿಲ್ಲ ಆದರೆ ಅಲ್ಲಾಹನು ಆತನನ್ನು ಸ್ವೀಕರಿಸುವನು ಮತ್ತು ದೊಡ್ಡ ಮತ್ತು ಬಲವಾದ ಹೊಡೆತಗಳಿಂದ ಆತನ ಸತ್ಯವನ್ನು ವ್ಯಕ್ತಪಡಿಸುವನು.

ಆದ್ದರಿಂದ, ಈ ಯುಗವು ಹಾದು ಹೋಗದಿರುವುದು ಮತ್ತು ದೇವರ ಆ ಎಲ್ಲಾ ವಾಗ್ದಾನಗಳನ್ನು ಪೂರೈಸುವವರೆಗೆ ನಾವು ಇಹಲೋಕವನ್ನು ತೊರೆಯದಿರುವುದು ಅವಶ್ಯಕ. **(ನುಝೂಲುಲ್ ಮಸೀಹ್, ರೂಹಾನಿ ಖಝಾಇನ್, ಸಂಪುಟ-18, ಪುಟ-463-467)**

"ಸರ್ವಶಕ್ತನಾದ ಅಲ್ಲಾಹನು ಇನ್ನೂ ತನ್ನ ಅನುಮೋದನೆಗಳನ್ನು ಮತ್ತು ದೈವ ಚಿಹ್ನೆಗಳನ್ನು ಪೂರ್ಣಗೊಳಿಸಿಲ್ಲ. ಮತ್ತು ಅವನು ನನ್ನ ಸತ್ಯವನ್ನು ಜಗತ್ತಿಗೆ ಬಹಿರಂಗಪಡಿಸುವವರೆಗೂ ಅವನು ನಿಲ್ಲುವುದಿಲ್ಲ ಎಂದು ನಾನು ಅವನ ಮೇಲೆ ಪ್ರಮಾಣ ಮಾಡುತ್ತೇನೆ. ಆದ್ದರಿಂದ ಓ ಎಲ್ಲಾ ಜನರೇ! ನನ್ನ ಧ್ವನಿಯನ್ನು ಕೇಳುವವರೇ. ಅಲ್ಲಾಹನಿಗೆ ಭಯಪಡಿರಿ ಮತ್ತು ಆತನು ನಿಷ್ಕರ್ಷಿಸಿರುವಂತಹ ಎಲ್ಲೆಗಳನ್ನು ಉಲ್ಲಂಘಿಸಬೇಡಿ. ಈ ಯೋಜನೆಯು ಮನುಷ್ಯನದ್ದಾಗಿರುತ್ತಿದ್ದರೆ, ಅಲ್ಲಾಹನು ನನ್ನನ್ನು ನಿಶ್ವರಗೊಳಿಸುತ್ತಿದ್ದನು ಮತ್ತು ಈ ಇಡೀ ವ್ಯವಹಾರವನ್ನು ಕುರುಹು ಇಲ್ಲದೆ ಉಳಿಯುತ್ತಿತ್ತು. ಆದರೆ ಅಲ್ಲಾಹನ ಸಹಾಯವು ನನಗೆ ಹೇಗೆ ಬರುತ್ತಿದೆ ಎಂಬುದನ್ನು ನೀವು ನೋಡಿದ್ದೀರಿ ಮತ್ತು ಲೆಕ್ಕಕ್ಕೆ ಮೀರಿದ ಹಲವಾರು ಚಿಹ್ನೆಗಳು ಬಹಿರಂಗಗೊಂಡಿವೆ. ನನ್ನೊಂದಿಗೆ ಮುಬಾಹಲದಲ್ಲಿ (ಪ್ರಾರ್ಥನ ಸಮರದಲ್ಲಿ) ತೊಡಗಿ ನಾಶವಾದ ಶತ್ರುಗಳು ಎಷ್ಟು ಇದ್ದಾರೆ ನೋಡಿ. ಓ ಅಲ್ಲಾಹನ ದಾಸರೇ!! ಸರ್ವಶಕ್ತನಾದ ಅಲ್ಲಾಹನು ಈ ರೀತಿಯ ಸುಳ್ಳುಗಾರರೊಂದಿಗೆ ವ್ಯವಹರಿಸುತ್ತಾನೆಯೇ ಎಂದು ಯೋಚಿಸಿ? **(ತತಿಮ್ಮ ಹಖೀಖತುಲ್ ವಹಿ, ರೂಹಾನಿ ಖಝಾಇನ್, ಸಂಪುಟ-22, ಪುಟ-554)**

### ಇಸ್ಲಾಂನಲ್ಲಿ ವಿಜಯ ಮತ್ತು ಬೆಂಬಲದ ಸಮಯ ಮತ್ತೆ ಮರಳಿ ಬಂದಿದೆ (ಹಝ್ರತ್ ಖಲೀಫತುಲ್ ಮಸೀಹ್ ಅಲ್ ಅವ್ವಲ್(ರ))

ಹಝ್ರತ್ ಖಲೀಫತುಲ್ ಮಾಸಿಹ್ ಅಲ್-ಅವ್ವಲ್(ರ) ಹೇಳುತ್ತಾರೆ:

"ಇಸ್ಲಾಂ ಧರ್ಮವು ತುಂಬಾ ದುರ್ಬಲವಾಗಿರುವ ಈ ಯುಗದಲ್ಲಿಯೂ, ಸರ್ವಶಕ್ತನಾದ ಅಲ್ಲಾಹನು ತನ್ನ ದೂತನೊಬ್ಬರ ಮೂಲಕ ಈ ಶುಭವಾರ್ತೆಯ ಸುದ್ದಿಯನ್ನು ಪುನರುಚ್ಚರಿಸಿದ್ದಾನೆ ಮತ್ತು ಇಸ್ಲಾಂನ ಮೇಲೆ ವಿಜಯ ಮತ್ತು ಬೆಂಬಲದ ಸಮಯ ಮತ್ತೆ ಮರಳಿ ಬಂದಿದೆ ಮತ್ತು ಜನರು ಸೈನ್ಯದ ರೀತಿಯಲ್ಲಿ ಇಸ್ಲಾಂ ಧರ್ಮವನ್ನು ಪ್ರವೇಶಿಸುತ್ತಾರೆ. ತದನಂತರ ಅದೇ ಆಧ್ಯಾತ್ಮಿಕತೆ ಮುಸಲ್ಮಾನರಲ್ಲಿ ತುಂಬುತ್ತಾರೆ. ಅಹಂಕಾರವಿಲ್ಲದವರು ಮತ್ತು ಅಲ್ಲಾಹನ ಕೆಲಸವನ್ನು ಗೌರವಿಸುವವರು ಧನ್ಯರು, ಆದ್ದರಿಂದ ಅವರು ಗೌರವಿಸಲ್ಪಡುತ್ತಾರೆ." **(ಹಖೀಖತುಲ್ ಫುರ್ಕಾನ್, ಸಂಪುಟ-4, ಪುಟ-532)**

### ಅಹ್ಮದಿಯ್ಯತ್ ಪ್ರಪಂಚದ ಮೇಲೆ ಪ್ರಾಬಲ್ಯ ಸಾಧಿಸುತ್ತದೆ ಮತ್ತು ಖಂಡಿತವಾಗಿಯೂ ಪ್ರಾಬಲ್ಯವನ್ನು ಸಾದಿಸುತ್ತದೆ (ಹಝ್ರತ್ ಖಲೀಫತುಲ್ ಮಸೀಹ್ ಉಸ್ಸಾನಿ(ರ))

ಒಂದು ಸಂದರ್ಭದಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಉಸ್ಸಾನಿ(ರ) ಮಾನ್ಯ ಬಶೀರ್ ಅಹ್ಮದ್ ಆರ್ಚರ್ಡ್ ಸಾಹಿಬ್ ಅವರನ್ನು ಉದ್ದೇಶಿಸಿ ತಮ್ಮ ಭಾಷಣದಲ್ಲಿ ಹೇಳಿದರು: ಈ ಸಮಯದಲ್ಲಿ ನೀವು ಖಂಡಿತವಾಗಿಯೂ ಅಪರಿಚಿತರಾಗಿದ್ದೀರಿ ಆದರೆ ಸಮೂದಾಯಗಳು ನಿಮ್ಮ ಹೆಸರಿನ ಬಗ್ಗೆ ಹೆಮ್ಮೆಪಡುವ ಮತ್ತು ನಿಮ್ಮ ಸಾಧನೆಗಳನ್ನು ಪ್ರಶಂಸಿಸುವ ಸಮಯವು ಬರುತ್ತದೆ. ಆದ್ದರಿಂದ ನಿಮ್ಮ ಕಾರ್ಯಗಳನ್ನು ಲಘುವಾಗಿ ಪರಿಗಣಿಸಬೇಡಿ ಮತ್ತು ಈ ಕಾರ್ಯಗಳು ನನ್ನದು ಆದರೆ ಅವು ಇಡೀ ಬ್ರಿಟಿಷ್ ರಾಷ್ಟಕ್ಕೆ ಸೇರಿವೆ ಎಂದು ಭಾವಿಸಬೇಡಿ. ನಂತರ ಬರುವವರು ನಿಮ್ಮ ಪ್ರತಿಯೊಂದು ನಡೆಯನ್ನೂ ನಕಲು ಮಾಡುತ್ತಾರೆ ಮತ್ತು ನಿಮ್ಮ ಪ್ರತಿ ಮಾತನ್ನೂ ಅನುಸರಿಸುತ್ತಾರೆ.

ಈ ಯುಗದಲ್ಲಿ, ಅಹ್ಮದಿಯತ್ ಪ್ರಪಂಚದ ಮೇಲೆ ಪ್ರಾಬಲ್ಯ ಸಾಧಿಸುತ್ತದೆ ಮತ್ತು ಖಂಡಿತವಾಗಿಯೂ ಪ್ರಾಬಲ್ಯವನ್ನು ಸಾಧಿಸುತ್ತದೆ ಮತ್ತು ಯಾವುದೇ ಶಕ್ತಿಯು ಅದನ್ನು ತಡೆಯಲು ಸಾಧ್ಯವಿಲ್ಲ, ಆಗ ನಿಮ್ಮ ಹಿರಿಮೆ ಜನರ ಹೃದಯದಲ್ಲಿ ಹೆಚ್ಚಾಗುತ್ತದೆ, ಮಹಾನ್ ಪ್ರಧಾನ ಮಂತ್ರಿಗಿಂತ ಹೆಚ್ಚು." **(ಅಲ್-ಫಝಲ್, ಮೇ 6, 1947)**

### ಎಲ್ಲಾ ರಾಷ್ಟಗಳು ಹಾಗೂ ಸಮೂದಾಯಗಳು ರಸೂಲುಲ್ಲಾಹ್(ಸ) ಅವರ ಪ್ರೀತಿಯಿಂದ ತುಂಬಿರುತ್ತವೆ. (ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ))

ಹಝ್ರತ್ ಖಲೀಫತುಲ್ ಮಾಸಿಹ್ ಉಸ್ಸಾಲಿಸ್(ರಹ) ಹೇಳುತ್ತಾರೆ:

"ಈ ಸಮಯದಲ್ಲಿ ಸೈತಾನನು ದಜ್ಜಲ್ ರೂಪದಲ್ಲಿ ಸತ್ಯದ ವಿರುದ್ಧ ಹೋರಾಡುತ್ತಿದ್ದಾನೆ ಮತ್ತು ಅಹ್ಮದಿಯಾ ಜಮಾಅತ್ ಹೋರಾಡುತ್ತಿರುವ ಆಧ್ಯಾತ್ಮಿಕ ಯುದ್ಧವು ಸೈತಾನನ ವಿರುದ್ಧವಾಗಿದೆ. ಇದನ್ನು ದೈವಿಕ ಗ್ರಂಥಗಳಲ್ಲಿ ಸತ್ಯ ಮತ್ತು ಸುಳ್ಳಿನ ಅಂತಿಮ ಯುದ್ಧವೆಂದು ವಿವರಿಸಲಾಗಿದೆ ಮತ್ತು ಅದರ ವಿರುದ್ಧ ವಿಜಯ ಸಾದಿಸಿದ ನಂತರ ಇಸ್ಲಾಂ ಇಡೀ ಪ್ರಪಂಚದ ಮೇಲೆ

***(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)***

## "ನಾನು ನಿನ್ನ ಉಪದೇಶವನ್ನು ಭೂಮಿಯ ಕೊನೆಯವರೆಗೆ ಸಾಗಿಸುತ್ತೇನೆ" ದೈವವಾಣಿಯ ಹಿನ್ನೆಲೆ ಮತ್ತು ಭೂಮಿಯ ತುದಿಗಳಿಗೆ ಸಾಗಿಸುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಂದೇಶದ ಅದ್ಭುತ ದರ್ಶನಗಳು

(ಅಬ್ದುಸ್ಸಮಿ ಖಾನ್, ಪ್ರೊಫೆಸರ್, ಜಾಮಿಯಾ ಅಹ್ಮದಿಯಾ ಘಾನಾ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ದೈವವಾಣಿಗಳ ಸಂಗ್ರಹ "ತಝ್ಕಿರಹ್"ದಿಂದ ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅಲೈಹಿಸ್ಸಲಾಮ್ ಅವರಿಗೆ ದೈವಿಕ ಸಹಾಯ ಮತ್ತು ಪ್ರಪಂಚದ ಪ್ರಾಬಲ್ಯದ ಅನೇಕ ಸುದ್ದಿಗಳನ್ನು ನೀಡಿದ್ದಾನೆ ಮತ್ತು ಅವುಗಳನ್ನು ಹಲವು ಬಣ್ಣಗಳಲ್ಲಿ ಪುನರಾವರ್ತಿಸಿದ್ದಾನೆ ಎಂದು ತಿಳಿದುಬಂದಿದೆ. ಈ ದೈವವಾಣಿಗಳಲ್ಲಿ ಒಂದು "ನಾನು ನಿನ್ನ ಉಪದೇಶವನ್ನು ಭೂಮಿಯ ಅಂಚುಗಳಿಗೆ ಸಾಗಿಸುತ್ತೇನೆ." ಎಂದು ಇದೆ. ತಮ್ಮ ಈ ದೈವವಾಣಿಯು 1898ರಂದು ಅಂದರೆ ಇಂದಿನಿಂದ 124 ವರ್ಷಗಳ ಹಿಂದಿನದು. ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯತೆಯನ್ನು ಸಾಬೀತುಪಡಿಸಲು ಈ ದೈವವಾಣಿ ಮಾತ್ರ ಸಾಕು. ಈ ದೈವವಾಣಿಗೆ ಸಮಾನವಾದ ದೈವವಾಣಿಗಳು ಮತ್ತು ಇತರ ದೈವವಾಣಿಗಳಲ್ಲಿ ಕಂಡುಬರುವ ಹತ್ತಿರದ ಪದಗಳು:

* ನಾನು ನಿನಗೆ ಭೂಮಿಯ ಕಟ್ಟಕಡೆಯವರೆಗೂ ಗೌರವವನ್ನು ನೀಡುವೆನು. (ತಝ್ಕಿರಹ್, ಪುಟ-149, ಖಾದಿಯಾನ್ 2008)

* ಅಲ್ಲಾಹನು...... ನಿನ್ನ ಆಮಂತ್ರಣವನ್ನು ಭೂಮಿಯ ಕಟ್ಟಕಡೆಯವರೆಗೂ ಸಾಗಿಸುತ್ತಾನೆ. (ಇಶ್ತಿಹಾರ್ 20 ಫೆಬ್ರವರಿ 1886 ಮತ್ತು ತಝ್ಕಿರಹ್ ಪುಟ-112)

* ಅಲ್ಲಾಹನು ನಿನ್ನ ಹೆಸರನ್ನು ವೃದ್ಧಿಸಲು ಬಯಸಿದ್ದಾನೆ ಮತ್ತು ಜಗತ್ತಿನಲ್ಲಿ ನಿನ್ನ ಹೆಸರನ್ನು ಆಕಾಶದಲ್ಲಿ ಪ್ರಕಾಶಮಾನಗೊಳಿಸಲು ಉದ್ದೇಶಿಸಿದ್ದಾನೆ. (ತಝ್ಕಿರಹ್, ಪುಟ-282)

* ಅವನು ನಿನ್ನ ಸರಪಳಿಯನ್ನು ಮತ್ತು ನಿನ್ನ ಜಮಾಅತ್ತನ್ನು ಭೂಮಿಯ ಮೇಲೆ ಹರಡುತ್ತಾನೆ, ಅದಕ್ಕೆ ಅನುಗ್ರಹ ನೀಡುತ್ತಾನೆ, ಅದನ್ನು ಹೆಚ್ಚಿಸುತ್ತಾನೆ ಮತ್ತು ಭೂಮಿಯ ಮೇಲೆ ಅದರ ಗೌರವವನ್ನು ಸ್ಥಾಪಿಸುತ್ತಾನೆ. (ತುಹ್‌ಫತುನ್ನದ್‌ವಃ, ರೂಹಾನಿ ಖಝಾಇನ್, ಸಂಪುಟ-19, ಪುಟ-97)

* ಅರೇಬಿಕ್ ಭಾಷೆಯಲ್ಲಿ, **"ವಅದನೀ ಇನ್ನಿ ಸಯನ್ಸುರುನೀ ಹತ್ತ ಯಬ್ಲಗಲ್ ಅಮ್ರಿ ಮಶಾರಿಖಿಲ್ ಅರ್ಝಿ ವ ಮಗಾರಿಬುಹಾ"** (ತಝ್ಕಿರಹ್, ಪುಟ 260)

ಅಂದರೆ, ಅವನು ನನ್ನ ಪ್ರಕರಣವು ಭೂಮಿಯ ಪ್ರತಿ ಪೂರ್ವ ಮತ್ತು ಪಶ್ಚಿಮಕ್ಕೆ ತಲುಪುವವರೆಗೆ ಸಹಾಯ ಮಾಡುವುದಾಗಿ ಅಲ್ಲಾಹನು ನನಗೆ ಭರವಸೆ ನೀಡಿದ್ದಾನೆ.

* ಆಂಗ್ಲ ಭಾಷೆಯಲ್ಲಿ ಇದು: I Shall give you a large party of Islam ಅಂದರೆ ನಾನು ನಿನಗೆ ಇಸ್ಲಾಮಿನ ದೊಡ್ಡ ಸೈನ್ಯವನ್ನು ನೀಡುತ್ತೇನೆ. (ತಝ್ಕಿರಹ್, ಪುಟ 80)

(1) ಈ ದೈವವಾಣಿಯ ಸಮಯದಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ವಿರೋಧದ ಪರಿಸ್ಥಿತಿ ಏನಾಗಿತ್ತು?

(2) ದೈವವಾಣಿಯ ಸಮಯದಲ್ಲಿ ಅವರ ಸಂದೇಶವು ಎಲ್ಲಿಗೆ ತಲುಪಿತ್ತು?

(3) ಭೂಮಿಯ ಅಂಚುಗಳ ಅರ್ಥವೇನು?

(4) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ (ತಬ್ಲೀಗ್) ಉಪದೇಶವು ಭೂಮಿಯ ತುದಿಗಳನ್ನು ತಲುಪುವ ಪವಾಡ ದೃಶ್ಯಗಳು.

### ದೈವವಾಣಿಯ ಹಿನ್ನೆಲೆ

ದೈವವಾಣಿಯ ಹಿನ್ನೆಲೆಯನ್ನು ಪರಿಶೀಲಿಸಲು, ನಾವು 1894 ರಿಂದ 1897 ರವರೆಗಿನ 4 ವರ್ಷಗಳ ಹಿಂದಿನ ಪರಿಸ್ಥಿತಿಯನ್ನು ನೋಡುತ್ತೇವೆ. ಉಮ್ಮತೆ ಮುಹಮ್ಮದಿಯ ಕಾಯುತ್ತಿದ್ದ ಮಹದಿಯ ಚಿಹ್ನೆಗಳಲ್ಲಿ ಒಂದು ಗ್ರಹಣದ ಚಿಹ್ನೆಯಾಗಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಇದು ಮಾರ್ಚ್, ಏಪ್ರಿಲ್ 1894ರಲ್ಲಿ ಕಾಣಿಸಿಕೊಂಡಿತು. ಕೆಲವು ಶುದ್ಧ ಆತ್ಮಗಳು ಅದನ್ನು ನೋಡಿದರು ಮತ್ತು ಹುಝೂರ್ ಅಲೈಹಿಸ್ಸಲಾಮ್ ಅವರನ್ನು ಒಪ್ಪಿಕೊಂಡರು, ಆದರೆ ಸಾಮಾನ್ಯವಾಗಿ ಮುಸ್ಲಿಂ ಸಮುದಾಯವು ಈ ಚಿಹ್ನೆಯನ್ನು ತಿರಸ್ಕರಿಸಿತು. ವಿದ್ವಾಂಸರು ವಿವಿಧ ಕಾರಣಗಳನ್ನು ಕಂಡುಹಿಡಿದರು. ಅವರು ಹದೀಸ್ ಅನ್ನು ಹದೀಸ್ ಎಂದು ಸ್ವೀಕರಿಸಲು ನಿರಾಕರಿಸಿದರು. ವರದಿಗಳನ್ನು ಸುಳ್ಳು ಎಂದು ಹೇಳಿದರು ಮತ್ತು ಪ್ರಕೃತಿಯ ನಿಯಮವನ್ನು ಬೇರುಸಹಿತ ಕಿತ್ತುಹಾಕಲು ಸಾಕಾಗುವ ಸೂರ್ಯ ಮತ್ತು ಚಂದ್ರಗ್ರಹಣಗಳ ಪ್ರಸ್ತಾಪಿತ ದಿನಾಂಕಗಳನ್ನು ನಿಗದಿ ಪಡಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅವರಿಗೆ ಪ್ರತಿಕ್ರಿಯೆಯಾಗಿ ಅನೇಕ ವಾದಗಳನ್ನು ಮಂಡಿಸಿದರು, ಅನೇಕ ಪುಸ್ತಕಗಳನ್ನು ಬರೆದರು ಮತ್ತು ಅನೇಕ ಸವಾಲುಗಳನ್ನು ನೀಡಿದರು, ಆದರೆ ನಂಬುವವರು ಬಹಳ ಕಡಿಮೆ ಮತ್ತು ನಿರಾಕರಿಸಿದವರು ಸಾವಿರಾರು ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿದ್ದರು.

1890ರಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈಸ ಮಸೀಹರ ಮರಣವನ್ನು ಘೋಷಿಸಿದರು, ಇದರಿಂದಾಗಿ ಮುಸ್ಲಿಮರು ಸಾಮಾನ್ಯವಾಗಿ ಗೊಂದಲಕ್ಕೊಳಗಾಗಿದ್ದರು, ಆದರೆ 1895 ರಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರು ಈಸ ಮಸೀಹರ ಸಮಾಧಿಯು ಕಾಶ್ಮೀರದ ಶ್ರೀನಗರದಲ್ಲಿದೆ ಎಂದು ಸಾಬೀತುಪಡಿಸಿದರು. ಈ ಘೋಷಣೆಯು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಹೃದಯವನ್ನು ಮುಟ್ಟಿತು ಮತ್ತು ಎರಡೂ ಸಮುದಾಯಗಳು ಸಿಟ್ಟಿನಿಂದ ಜ್ವಾಲೆಯಂತಾದರು.

1896 ರಲ್ಲಿ, ಹಝ್ರತ್ ಮಸೀಹ್(ಅ) ಅವರು ಕಾಬುಲ್‌ನ ಅಮೀರ್ ಅಬ್ದುರ್ರಹ್ಮಾನ್ ಅವರ ಹೆಸರಿಗೆ ಒಂದು ಪತ್ರವನ್ನು ಬರೆದರು. ಅದನ್ನು ಹಝ್ರತ್ ಮೌಲ್ವಿ ಅಬ್ದುಲ್ ರಹಮಾನ್ ಸಾಹಿಬ್ ಶಹೀದ್ ತೆಗೆದುಕೊಂಡು ಹೋದರು. ಅದಕ್ಕೆ 'ಈಂ ಜಾ ಬಯಾ' ಅದೇನೆಂದರೆ ಕಾಬೂಲ್ ಗೆ ಬಂದು ದಾವೆ ಮಾಡಿದರೆ ಗೊತ್ತಾಗುತ್ತದೆ ಎಂದು ಉತ್ತರಿಸಿದನು. ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಬಟಾಲ್ವಿ ತದನಂತರ ಕಾಬೂಲ್‌ಗೆ ಹೋದರು ಮತ್ತು ಅವರು ಅಮೀರ್ ಅನ್ನು ಪ್ರಚೋದಿಸಿ ಹಿಂತಿರುಗಿ ಬಂದು ಮಿರ್ಝಾ ಸಾಹಿಬ್ ಕಾಬೂಲ್‌ಗೆ ಹೋದರೆ ಅವರು ಜೀವಂತವಾಗಿ ಹಿಂತಿರುಗಲು ಸಾಧ್ಯವಿಲ್ಲ ಎಂದು ಹೇಳಿದರು. (ತಾರೀಖೆ ಅಹ್ಮದೀಯತ್, ಸಂಪುಟ-1, ಪುಟ-548) ಅದರ ನಂತರ, ಅಮೀರ್ ಹಝ್ರತ್ ಮೌಲ್ವಿ ಅಬ್ದುಲ್ ರಹಮಾನ್ ಸಾಹಿಬ್(ರ) ಅವರನ್ನು ಶಹೀದ್ ಮಾಡಿದನು. 1903 ರಲ್ಲಿ ಹಝ್ರತ್ ಸಾಹಿಬ್ಜಾದಾ ಅಬ್ದುಲ್ ಲತೀಫ್ ಸಾಹಿಬ್(ರ) ಅವರನ್ನೂ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ನಂಬಿದ ಅಪರಾಧಕ್ಕಾಗಿ ಕಲ್ಲೆಸೆದು (ಸಂಗ್ಸಾರ್) ಕೊಂದರು.

1896ರಲ್ಲಿ, ಹುಝೂರ್ ಅಲೈಹಿಸ್ಸಲಾಮ್ ಅವರು ಭಾರತದ ಎಲ್ಲಾ ವಿದ್ವಾಂಸರನ್ನು ಮತ್ತು ಪೀಠಾಧಿಪತಿಗಳಿಗೆ ಮುಬಾಹಿಲ (ಪ್ರಾರ್ಥನ ಸಮರ) ಮಾಡಲು ಪಂಥಾಹ್ವಾನಕ್ಕೆ ಕರೆದರು, ಇದರ ಪರಿಣಾಮವಾಗಿ ಅವರ ಭಕ್ತರಲ್ಲಿ ದ್ವೇಷದ ಅಲೆಯು ಇನ್ನಷ್ಟು ಹೆಚ್ಚಾಯಿತು. ವಾಸ್ತವವೆಂದರೆ 1906 ರ ಹೊತ್ತಿಗೆ ಈ ವಿರೋಧಿ ವಿದ್ವಾಂಸರಲ್ಲಿ ಹೆಚ್ಚಿನವರು ನಿರ್ಮೂಲನೆಗೊಂಡಿದ್ದರು ಮತ್ತು ಜೀವಂತವಾಗಿರುವವರು ಯಾವುದಾದರೊಂದು ವಿಪತ್ತಿಗೆ ಸಿಲುಕಿದ್ದರು. (ತಾರೀಖೆ ಅಹ್ಮದೀಯತ್, ಸಂಪುಟ-1, ಪುಟ-551)

ಪಾದ್ರಿ ಅಬ್ದುಲ್ಲಾ ಅಥಮ್‌ನೊಂದಿಗೆ ಹಝ್ರತ್ ಮಸೀಹ್(ಅ) ಅವರ ಚರ್ಚೆಯು (ಜಂಗೆ ಮುಖದ್ದಸ್) 1893 ರಲ್ಲಿ ನಡೆಯಿತು, ಅದರ ಕೊನೆಯಲ್ಲಿ ಹುಝೂರ್(ಅ) ಅವರು ಅಬ್ದುಲ್ಲಾ ಅಥಮ್‌ನ ಮರಣದ ಬಗ್ಗೆ ಭವಿಷ್ಯವಾಣಿಯನ್ನು ನುಡಿದರು. ಆದರೆ ಅವನು ತನ್ನ ಮನಸ್ಸಿನಲ್ಲಿ ಮರಳಿ ಅಲ್ಲಾಹನ ತಕ್ಷಣದ ಕೋಪದಿಂದ ತಪ್ಪಿಸಿಕೊಂಡನು, ಆದರೆ ಸತ್ಯವನ್ನು ಮರೆಮಾಚುವ ಅಪರಾಧದಲ್ಲಿ ಸಿಲುಕಿಕೊಂಡನು. ಜುಲೈ 27, 1896 ರಂದು ಅದು ಅಂತಿಮವಾಗಿ ಹಾವಿಯಾದಲ್ಲಿ ಬಿದ್ದನು. ಈ ಘಟನೆಯು ಕ್ರಿಶ್ಚಿಯನ್ ಜಗತ್ತಿನ ಬಿಸಿ ಮತ್ತು ದ್ವೇಷವನ್ನು ಹೆಚ್ಚಿಸಿತು ಮತ್ತು ಅಂತಿಮವಾಗಿ, ಆಗಸ್ಟ್ 1897ರಲ್ಲಿ, ಪಾದ್ರಿ ಮಾರ್ಟಿನ್ ಕ್ಲಾರ್ಕ್ ಈ ಸಾವಿಗೆ ಪ್ರತೀಕಾರವಾಗಿ ಹುಝೂರ್(ಅ) ಅವರ ವಿರುದ್ಧ ನರಹತ್ಯೆಯ ಪ್ರಕರಣವನ್ನು ದಾಖಲಿಸಿದನು.

1897ರಲ್ಲಿ, ಟರ್ಕಿಯ ಸುಲ್ತಾನ್‌ನ ಉಪ ರಾಯಭಾರಿಯಾದ ಹುಸೇನ್ ಕಾಮಿ ಖಾದಿಯಾನ್‌ಗೆ ಬಂದನು. ಟರ್ಕಿಯ ಆಪಾದಿತ ಉಸ್ಮಾನಿಯ ಖಿಲಾಫತ್‌ಗಾಗಿ ಬ್ರಿಟಿಷರ ವಿರುದ್ಧ ಹುಝೂರ್ ಅಲೈಹಿಸ್ಸಲಾಮ್ ಅವರ ಬೆಂಬಲವನ್ನು ಪಡೆಯಲು ಅವನು ಬಯಸಿದ್ದನು. ಆದರೆ ಟರ್ಕಿಯ ಸಾಮ್ರಾಜ್ಯದ ಸ್ಥಿತಿಯು ಉತ್ತಮವಾಗಿರಲಿಲ್ಲ ಮತ್ತು ಈ

ಪರಿಸ್ಥಿತಿಗಳೊಂದಿಗೆ ಅಂತ್ಯವು ಉತ್ತಮವಾಗಿಲ್ಲ ಎಂದು ಹುಝೂರ್ ಅಲೈಹಿಸ್ಸಲಾಮ್ ಅವರಿಗೆ ದೈವದರ್ಶನದಲ್ಲಿ ತಿಳಿಸಲಾಯಿತು. ಇದಾದ ನಂತರ ಅವನು ಹಿಂತಿರುಗಿ ಪತ್ರಿಕೆಯಲ್ಲಿ ಹುಝೂರ್(ಅ) ರವರ ವಿರುದ್ಧ ಕೋಪಗೊಂಡ ಲೇಖನವನ್ನು ಪ್ರಕಟಿಸಿದನು. ಮತ್ತು ಅದರ ಬಗ್ಗೆ ಸಾಕಷ್ಟು ಚರ್ಚಿಸಿದನು. ಈ ರೀತಿಯಾಗಿ, ಹುಝೂರ್ ಅಲೈಹಿಸ್ಸಲಾಮ್ ಅವರು ಪ್ರಬಲವಾದ ಉಸ್ಮಾನಿಯ ಸಾಮ್ರಾಜ್ಯದ ವಿರುದ್ಧ ಮುಸ್ಲಿಮರ ದ್ವೇಷವನ್ನು ಕಟ್ಟಿಕೊಂಡಂತೆ ಆಯಿತು.

ಹುಝೂರ್(ಅ) ಅವರು 1893ರಲ್ಲಿ 6 ವರ್ಷಗಳಲ್ಲಿ ರಸೂಲುಲ್ಲಾಹ್(ಸ) ಅವರ ವೈರಿಯಾದ ಲೆಖ್‌ರಾಮ್ ಅವನ ವಿನಾಶದ ಭವಿಷ್ಯವಾಣಿಯನ್ನು ನುಡಿದರು. 6 ಮಾರ್ಚ್ 1897ರಂದು ಈ ಭವಿಷ್ಯವಾಣಿಯು ಮಹಾ ವೈಭವದಿಂದ ನೆರವೇರಿದಾಗ, ಹಿಂದೂಗಳು ಮತ್ತು ಆರ್ಯರು ಅವರ ಶತ್ರುಗಳಾದರು. ಮಸೀಹ್(ಅ) ಅವನನ್ನು ಕೊಂದಿರುವುದಾಗಿ ಆರೋಪಿಸಿದರು. ಅವರ ಮನೆಯನ್ನು ಶೋಧಿಸಲಾಯಿತು ಮತ್ತು ಹುಡುಕಾಟ ನಡೆಸಿದ ಪೊಲೀಸ್ ಅಧಿಕಾರಿ ಮಿರ್ಝಾ ಯಾವಾಗಲೂ ಉಳಿಯುತ್ತಾನೆ ಈಗ ಅವನು ನನ್ನ ಕೈಯನ್ನು ನೋಡುತ್ತಾನೆ ಎಂದು ಹೇಳಿದರು. ಅವರನ್ನು ಕೊಲ್ಲಲು ಸಂಚು ರೂಪಿಸಲಾಯಿತು ಮತ್ತು ಕೊಲೆಗಾರರಿಗೆ ಬಹುಮಾನವನ್ನು ನಿಗದಿಪಡಿಸಲಾಯಿತು. ಲೇಖ್‌ರಾಮ್‌ನ ಹತ್ಯೆಯಲ್ಲಿ ಮಿರ್ಝಾ ಸಾಹಿಬ್ ಭಾಗಿಯಾಗಿದ್ದಾರೆ ಎಂದು ಪ್ರಮಾಣ ಮಾಡಲು ನಾನು ಸಿದ್ಧನಿದ್ದೇನೆ ಎಂದು ಮೌಲ್ವಿ ಬಟಾಲ್ವಿ ಸಾಹಿಬ್ ಬರೆದರು. ಈ ನಿಟ್ಟಿನಲ್ಲಿ ಬಂಧಿಸುವ ಪ್ರಯತ್ನವೂ ನಡೆಯಿತು. (ತಾರೀಖೆ ಅಹ್ಮದೀಯತ್, ಸಂಪುಟ–1, ಪುಟ–598)

1898ರ ಆರಂಭದಲ್ಲಿ, ಮೌಲ್ವಿ ಮುಲ್ಲಾ ಮುಹಮ್ಮದ್ ಬಕ್ಷ್ ಜಾಫರ್ ಝಟ್ಲಿಯು ಹುಝೂರ್ ಅಲೈಹಿಸ್ಸಲಾಮ್ ಅವರು ನಿಧನ ಹೊಂದಿದ್ದಾರೆ ಎಂದು ಸುಳ್ಳು ಜಾಹೀರಾತನ್ನು ಪ್ರಕಟಿಸಿದನು. (ತಾರೀಖೆ ಅಹ್ಮದೀಯತ್, ಸಂಪುಟ–2, ಪುಟ–9) 1898ರ ಮಧ್ಯಕಾಲದಲ್ಲಿ, ಪಂಜಾಬ್ ಸರ್ಕಾರವು ಆದಾಯ ತೆರಿಗೆಯನ್ನು ಪಾವತಿಸದ ಮತ್ತು ಸಾರ್ವಜನಿಕ ಖಜಾನೆಯ ಹಾನಿಗಾಗಿ ಹುಝೂರ್ ಅಲೈಹಿಸ್ಸಲಾಮ್ ಅವರ ವಿರುದ್ಧ ಪ್ರಕರಣವನ್ನು ದಾಖಲಿಸಿತು. 1898ರ ಕೊನೆಯಲ್ಲಿ, ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಅವರ ಮಾಹಿತಿಯ ಮೇರೆಗೆ, ಹುಝೂರ್ ಅಲೈಹಿಸ್ಸಲಾಮ್ ಅವರ ವಿರುದ್ಧ ಪ್ರಕರಣವನ್ನು ದಾಖಲಿಸಲಾಯಿತು ಮತ್ತು ಮೌಲ್ವಿ ಸಾಹಿಬ್ ಅವರು ಮಿರ್ಝಾ ಸಾಹಿಬ್ ನನ್ನನ್ನು ಕೊಲ್ಲುತ್ತಾರೆ ಎಂದು ಹೇಳಿದರು.

ಬರಾಹೀನೆ ಅಹ್ಮದಿಯಾದ ಆರಂಭಿಕ ಸಂಪುಟಗಳ ಪ್ರಕಟಣೆಯ ನಂತರ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೇಲೆ ಕಾಫಿರ್ ಫತ್ವವನ್ನು ವಿಧಿಸಲಾಯಿತು ಎಂಬುದನ್ನು ನೆನಪಿನಲ್ಲಿಡಬೇಕು. (ಆಲಮಿ ಫಿತ್ನ ತಕ್ಫೀರ್ ಕೆ ಮುತಲ್ಲಿಕ್ ರಸೂಲುಲ್ಲಾಹ್(ಸ) ಕೀ ಪೇಶ್ಗೋಯಿಯಾನ್, ದೋಸ್ತ್ ಮುಹಮ್ಮದ್ ಶಾಹಿದ್, ಪುಟ–16, ಡೆನ್ಮಾರ್ಕ್) ಅದರ ನಂತರ, 1890 ರಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಭಾರತದಾದ್ಯಂತ ಪ್ರವಾಸ ಮಾಡಿ 200 ವಿದ್ವಾಂಸರಿಂದ ಕುಫರ್‌ನ ಫತ್ವಾಗಳನ್ನು ಪಡೆದರು ಮತ್ತು ಕೆಟ್ಟ ನಿಂದನೆಗಳನ್ನು ನೀಡಿದರು. (ಹಯಾತ್ ತಯ್ಯಬ, ಪುಟ–102 ಶೇಖ್ ಅಬ್ದುಲ್ ಖಾದಿರ್)

ಈ ಘಟನೆಗಳು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನ ಮತ್ತು ಗೌರವವು ಗಂಭೀರ ಅಪಾಯದಲ್ಲಿತ್ತು ಮತ್ತು ವಿರೋಧಿಗಳು ಎಲ್ಲಾ ಕಡೆಯಿಂದ ಮುತ್ತಿಗೆ ಹಾಕಿದ್ದರು ಎಂದು ಕೂಗಿ ಕೂಗಿ ತಿಳಿಸುತ್ತಿದೆ. ಇಂತಹ ಸಂದರ್ಭಗಳಲ್ಲಿ, ಶತ್ರುಗಳ ದುಷ್ಟರಿಂದ ಪಾರಾಗುವೆನೆಂದು, ಎದುರಾಳಿಗಳನ್ನು ಸೋಲಿಸುವೆನೆಂದು ಮತ್ತು ತಾನ್ನನ್ನು ಭೂಮಿಯ ಕೊನೆಯವರೆಗೂ ಗೌರವಿಸಲಾಗುವುದು ಮತ್ತು ಸ್ವೀಕರಿಸಲಾಗುವುದು ಎಂದು ಭಾವಿಸುವುದು, ಇದು ಜಗತ್ತಿನ ದೃಷ್ಟಿಯಲ್ಲಿ ಹುಚ್ಚುತನವಲ್ಲ. ತನ್ನ ಖೌಮಿನ ಜನರ ಹಿಂಸೆಯಿಂದ ಬೇಸತ್ತು ದೇವರ ದೊಡ್ಡ ದೂತನನ್ನು ಹಿಂಬಾಲಿಸುವವನಿಗೆ ಕಿಸ್ರದ ಕಂಕಣವನ್ನು ನಿಮ್ಮ ಕೈಗಳಿಗೆ ಧರಿಸಲಾಗುವುದು ಎಂದು ಹೇಳುವಂತಿದೆಯಲ್ಲವೇ?

**ಸಂದೇಶ ಎಲ್ಲಿಯವರೆಗೆ ತಲುಪಿತ್ತು?**

ಈ ದೈವವಾಣಿಯ ಸಮಯದಲ್ಲಿ, ಜಮಾಅತ್ತಿನ ಹೆಸರಿನ ಬಗ್ಗೆಯೂ ಯಾರು ತಿಳಿದಿರಲಿಲ್ಲ. ಮತ್ತು ಅದು ಅದರ ಶೈಶವಾವಸ್ಥೆಯಲ್ಲಿತ್ತು. ಆದ್ದರಿಂದ ಭಾರತದಲ್ಲಿ ಅಹ್ಮದಿಯರು ಅಸ್ತಿತ್ವದಲ್ಲಿದ್ದರು ಆದರೆ ಜಮಾಅತ್ ವ್ಯವಸ್ಥಿತ ರೂಪದಲ್ಲಿ ಇರಲಿಲ್ಲ. ಅಹಮದಿಯರೂ ಆರ್ಥಿಕ ತ್ಯಾಗ ಮಾಡುತ್ತಿದ್ದರು, ಆದರೆ ದಾನದ ನಿಯಮಿತ ವ್ಯವಸ್ಥೆ ಇರಲಿಲ್ಲ. ಹುಝೂರ್ ಅಲೈಹಿಸ್ಸಲಾಮ್ ಅವರು ಅಗತ್ಯವಿರುವಂತೆ ಯೋಜನೆಗಳನ್ನು ಮಾಡುತ್ತಿದ್ದರು ಅದಕ್ಕೆ ಜಮಾಅತ್ತಿನ ಸ್ನೇಹಿತರು ಲಬ್ಬೈಕ್ ಎಂದು ಹೇಳುತ್ತಿದ್ದರು. ಯಾವ ಬೋಧಕ, ಮಾರ್ಗದರ್ಶಕನೂ ಇರಲಿಲ್ಲ. ಯಾವುದೇ ಪತ್ರಿಕೆಯೂ ಇರಲಿಲ್ಲ. ಅಲ್–ಹಕಮ್ ಪತ್ರಿಕೆಯು 1897 ರ ಕೊನೆಯಲ್ಲಿ ಅಮೃತಸರದಿಂದ ವಾರಪತ್ರಿಕೆಯಾಗಿ ಪ್ರಕಟವಾಯಿತು ಮತ್ತು ರಿವ್ಯೂ ಆಫ್ ರಿಲಿಜಯನ್ಸ್ 1902 ರಲ್ಲಿ ಪ್ರಕಟವಾಯಿತು.

ಭಾರತದ ಹೊರಗೆ, ಬ್ರಿಟನ್‌ನಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರ ಉಲ್ಲೇಖವು ಹೆಚ್ಚು ಇರುತ್ತದೆ ಏಕೆಂದರೆ ಬ್ರಿಟಿಷರು ಭಾರತವನ್ನು ಆಳಿದರು ಮತ್ತು ಭಾರತದ ಎಲ್ಲಾ ಸುದ್ದಿಗಳು ಅಲ್ಲಿಗೆ ತಲುಪಿದವು. ಮೇ 1897 ರಲ್ಲಿ, ಹುಝೂರ್ ಅಲೈಹಿಸ್ಸಲಾಮ್ ಅವರು ಇಂಗ್ಲೆಂಡಿನ ರಾಣಿ ವಿಕ್ಟೋರಿಯಾ ಅವರಿಗೆ ತೊಹ್‌ಫ ಖೈಸರಿಯಾ ಎಂಬ ಹೆಸರಿನಲ್ಲಿ ಉಪದೇಶ ಪತ್ರವನ್ನು ಕಳುಹಿಸಿದರು, ಆದರೆ ಅದಕ್ಕೆ ಯಾವುದೇ ನಿರ್ದಿಷ್ಟ ಪ್ರತಿಕ್ರಿಯೆ ಇರಲಿಲ್ಲ.

ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ ಲಐಹಿಸ್ಸಲಾಮ್ ಅವರನ್ನು ನೇಮಿಸಿದ ತಕ್ಷಣ, ಜಾಹೀರಾತುಗಳ (ಇಶ್ತಿಹಾರ್) ಮೂಲಕ ಸಾರ್ವತ್ರಿಕ ಚಿಹ್ನೆಯನ್ನು ಘೋಷಿಸಿದರು ಮತ್ತು ತಮ್ಮ ಸಂದೇಶದೊಂದಿಗೆ ವಿಶ್ವದ ಮಹಾನ್ ನಾಯಕರು ಮತ್ತು ಧಾರ್ಮಿಕ ಮುಖಂಡರಿಗೆ ತಿಳಿಸಿದರು. ಹುಝೂರ್ ಅಲೈಹಿಸ್ಸಲಾಮ್ ಹೇಳಿದರು:

"ಈ ದಾವೆಯು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಲಕ್ಷಾಂತರ ವಿರೋಧಿಗಳ ಮುಂದೆ ಈ ದಾವೆಯನ್ನು ತೋರಿಸಲು ಸುಮಾರು ಮೂವತ್ತು ಸಾವಿರ ಜಾಹೀರಾತುಗಳನ್ನು ವಿತರಿಸಲಾಯಿತು ಮತ್ತು ಎಂಟು ಸಾವಿರ ಇಂಗ್ಲಿಷ್ ಜಾಹೀರಾತುಗಳು ಮತ್ತು ಪತ್ರಗಳನ್ನು ಇಂಗ್ಲಿಷ್ನಲ್ಲಿ ಭಾರತದ ಎಲ್ಲಾ ಪಾದರಿಯರಿಗೆ, ಪಂಡಿತರಿಗೆ ಮತ್ತು ಯಹೂದಿಯರ ಬಳಿಗೆ ಕಳುಹಿಸಲಾಯಿತು. ನಂತರ ಅವರು ತೃಪ್ತರಾಗಲಿಲ್ಲ, ಅದನ್ನು ಇಂಗ್ಲೆಂಡ್ ಮತ್ತು ಜರ್ಮನಿ ಮತ್ತು ಫ್ರಾನ್ಸ್, ಗ್ರೀಸ್ ಮತ್ತು ರಷ್ಯಾ ಮತ್ತು ರೋಮ್ ಮತ್ತು ಯುರೋಪಿನ ಇತರ ದೇಶಗಳಿಗೆ ಮಹಾನ್ ಪಾದರಿಗಳ ಹೆಸರಿಗೆ ಮತ್ತು ರಾಜಕುಮಾರ ಹೆಸರಿರಿಗೆ ಮತ್ತು ಮಂತ್ರಿಗಳ ಹೆಸರಿನಲ್ಲಿ ಕಳುಹಿಸಲಾಯಿತು. ಹೀಗೆ ಅವರಲ್ಲಿ ಪ್ರಿನ್ಸ್ ಆಫ್ ವೇಲ್ಸ್ ಇಂಗ್ಲೆಂಡ್ ಮತ್ತು ಭಾರತದ ಕ್ರೌನ್ ಪ್ರಿನ್ಸ್, ಮತ್ತು ಗ್ಲಾಡ್‌ಸ್ಟೋನ್ ಪ್ರಧಾನ ಮಂತ್ರಿ ಮತ್ತು ಬಿಸ್ಮಾರ್ಕ್ ಜರ್ಮನಿಯ ರಾಜಕುಮಾರ. ಈ ಎಲ್ಲ ಸಜ್ಜನರ ರಸೀದಿಗಳು ತುಂಬಿದ ಪೆಟ್ಟಿಗೆ ಇದೆ. (ಮಾಕ್ತೂಬಾತೆ ಅಹ್ಮದ್, ಸಂಪುಟ–1, ಪುಟ–649)

ಹುಝೂರ್ ಅಲೈಹಿಸ್ಸಲಾಮ್ ಅವರ ದಾವೆಯು ಪ್ರಪಂಚದ ಎಲ್ಲಾ ಪ್ರಸಿದ್ಧ ನಾಯಕರಿಗೆ ತಲುಪಿತ್ತು ಎಂದು ಇದು ತೋರಿಸುತ್ತದೆ ಆದರೆ ಅವರಲ್ಲಿ ಯಾರೂ ಅದನ್ನು ಸ್ವೀಕರಿಸುವ ಬಯಕೆಯನ್ನು ತೋರಿಸಲಿಲ್ಲ ಮತ್ತು ಹುಝೂರ್(ಅ) ಅವರ ಸಂದೇಶವು ಅವರ ಎಲ್ಲಾ ರಾಷ್ಟ್ರಗಳನ್ನು ತಲುಪಿತು ಎಂದು ಹೇಳಲಾಗುವುದಿಲ್ಲ. ಏಕೆಂದರೆ ಈ ಎಲ್ಲಾ ರಾಷ್ಟ್ರಗಳ ಭಾಷೆಗಳನ್ನು ಪ್ರವೇಶಿಸಲು ಒಂದು ದೊಡ್ಡ ವ್ಯವಸ್ಥೆಯ ಅಗತ್ಯವಿತ್ತು.

**ಪ್ರಪಂಚದ ಅಂಚುಗಳ ಅರ್ಥವೇನು?**

**"Verdend Ende"**

**The End of the Earth**

ಅಂದರೆ, "ವಿಶ್ವದ ಕೊನೆಯ ಭಾಗ" ನಾರ್ವೇ

ಭೂಮಿಯು ಸಾಮಾನ್ಯವಾಗಿ ದುಂಡಾಗಿರುತ್ತದೆ ಮತ್ತು ದುಂಡಗಿನ ವಸ್ತುವಿಗೆ ಅಂಚುಗಳಿಲ್ಲ. ಆದ್ದರಿಂದ, ಈ ದೈವವಾಣಿಯಲ್ಲಿ, ಪ್ರಪಂಚದ ಅಂಚುಗಳು ಎಂದರೆ ಎಲ್ಲೆಡೆ ಎಂಬ ಅರ್ಥವಾಗಬಹುದು, ಅಂದರೆ, ನಿನ್ನ ತಬ್ಲೀಗ್ (ಉಪದೇಶವು) ಭೂಮಿಯ ತುತ್ತತುದಿಗಳನ್ನು ತಲುಪುತ್ತದೆ.

ಪ್ರಪಂಚದ ಅಂಚು ಎಂದು ಕರೆಯಲ್ಪಡುವ ಪ್ರಸಿದ್ಧ ಸ್ಥಳಗಳು ವಸಾಹತುಗಳು ಕೊನೆಗೊಳ್ಳುವ ಮತ್ತು ಸಮುದ್ರ ಪ್ರದೇಶವು ಪ್ರಾರಂಭವಾಗುತ್ತದೆ.

ನಾರ್ವೇಯ ನಗರವಾದ ಶುನ್‌ನ ಉತ್ತರದ ಸ್ಥಳವನ್ನು ಪ್ರಪಂಚದ ಅಂತ್ಯ ಎಂದು ಕರೆಯಲಾಗುತ್ತದೆ.

ಫಿನ್ಲ್ಯಾಂಡ್, ಉತ್ತರ ಧ್ರುವದ ಬಳಿ ಇರುವ ದೇಶವನ್ನು ವಿಶ್ವದ ಕೊನೆಯ ಸ್ಥಳ ಎಂದು ಕರೆಯಲಾಗುತ್ತದೆ. ಅಂತೆಯೇ, ಅಮೆರಿಕ, ರಷ್ಯಾ ಮತ್ತು ಕೆನಡಾದ ಉತ್ತರ ಪ್ರದೇಶಗಳನ್ನು ಸಹ ಕೊನೆಯ ಅಂಚು ಎಂದು ಕರೆಯಲಾಗುತ್ತದೆ. ಅಲ್ಲದೆ, ದಕ್ಷಿಣ ಧ್ರುವ ಮತ್ತು ಅಂಟಾರ್ಟಿಕಾವನ್ನು ಪ್ರಪಂಚದ ಕೊನೆಯ ಅಂಚು ಎಂದು ಪರಿಗಣಿಸಲಾಗಿದೆ. ವೈಜ್ಞಾನಿಕ ಸಂಶೋಧನೆ ಮಾಡುವ ಕೆಲವು ವಿಜ್ಞಾನಿಗಳು ಮಾತ್ರ ಅಲ್ಲಿ ವಾಸಿಸುತ್ತಿದ್ದಾರೆ.

ಫಿಜಿಯಲ್ಲಿ ದಿನಾಂಕ ರೇಖೆಯು ಹಾದುಹೋಗುತ್ತದೆ ಮತ್ತು

ಪ್ರಪಂಚವನ್ನು ಎರಡು ಭಾಗಗಳಾಗಿ ವಿಭಜಿಸುತ್ತದೆ, ಇದನ್ನು ಅಂಚು ಎಂದು ಕರೆಯುತ್ತಾರೆ.

ಪ್ರಪಂಚದಲ್ಲಿ ಮೊದಲು ಸೂರ್ಯ ಹುಟ್ಟುವುದು ಜಪಾನ್‌ನಲ್ಲಿ ಎಂದು ಹೇಳಲಾಗುತ್ತದೆ.

ಪೆಸಿಫಿಕ್ ರಾಷ್ಟ್ರವಾದ ಸಮೋವಾ ಡಿಸೆಂಬರ್ 2021 ರಲ್ಲಿ ತನ್ನ ಪ್ರಮಾಣಿತ ಸಮಯವನ್ನು ಬದಲಾಯಿಸಿತು ಮತ್ತು ಹೀಗಾಗಿ ರಾಜ್ಯವು ವಿಶ್ವದ ಮೊದಲ ಸೂರ್ಯೋದಯವನ್ನು ನೋಡುತ್ತದೆ.

ನೀವು ಉತ್ತರದಿಂದ ದಕ್ಷಿಣಕ್ಕೆ ಮತ್ತು ಪೂರ್ವದಿಂದ ಪಶ್ಚಿಮಕ್ಕೆ ನಕ್ಷೆಯನ್ನು ನೋಡಿದರೆ, ಕರಾವಳಿಯಲ್ಲಿರುವ ಎಲ್ಲಾ ದೇಶಗಳು ಮತ್ತು ಪ್ರದೇಶಗಳನ್ನು ಭೂಮಿಯ ಅಂಚು ಎಂದು ಕರೆಯಬಹುದು. ಹಝ್ರತ್ ಮಸೀಹ್ ಮೌಊದ್ ಲಐಹಿಸ್ಸಲಾಮ್ ಅವರ ಸಂದೇಶವು ಅವರಲ್ಲಿ ಬಹುಪಾಲು ಜನರನ್ನು ತಲುಪಿದೆ. ಈ ಬೆಳಕಿನಿಂದ ಇನ್ನೂ ಬೆಳಗದ ಕೆಲವು ದ್ವೀಪಗಳು ಇರಬಹುದು, ಕೆಲವೇ ವರ್ಷಗಳಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರ ಸಂದೇಶವೂ ಅಲ್ಲಿಗೆ ತಲುಪುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

**ಸಂದೇಶ ತಲುಪುವ ಬಗ್ಗೆ ಅಸಾಮಾನ್ಯ ದೃಶ್ಯಗಳು**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ನಾನು ನಿನ್ನ ಉಪದೇಶವನ್ನು ಭೂಮಿಯ ಅಂಚುಗಳಿಗೆ ಸಾಗಿಸುತ್ತೇನೆ ಎಂದು ವಾಗ್ದಾನ ನೀಡಿದಾಗ, ಸರ್ವಶಕ್ತನಾದ ಅಲ್ಲಾಹನ ವಿಶೇಷ ಬೆಂಬಲ ಮತ್ತು ದೈವಿಕ ಸಹಾಯವು ನಿಮ್ಮೊಂದಿಗಿರುತ್ತದೆ ಎಂದು ಸೂಚಿಸಿರಬೇಕು. ಅಲ್ಲಾಹನ ಸುನ್ನತ್‌ನ ಪ್ರಕಾರ, ಭವಿಷ್ಯವಾಣಿಗಳನ್ನು ಈಡೇರಿಸಲು, ದೈವಿಕ ಜಮಾಅತ್ತಿನ ಕಠಿಣ ಪರಿಶ್ರಮ ಮತ್ತು ಪ್ರಯತ್ನವೂ ಅಗತ್ಯವಾಗಿರುತ್ತದೆ. ಅದರಂತೆ ಜೀವ, ಸಂಪತ್ತು, ಸಮಯ, ಗೌರವ, ಮಕ್ಕಳನ್ನು ತ್ಯಾಗ ಮಾಡುವ ಮೂಲಕ ಅಹ್ಮದಿಯಾ ಜಮಾಅತ್ ಈ ಪವಿತ್ರ ಸಂದೇಶವನ್ನು ಭೂಮಿಯ ಅಂತ್ಯದವರೆಗೆ ಸಾಗಿಸುತ್ತಿದೆ. ಈ ಮಾರ್ಗದಲ್ಲಿ ಶಹಾದತ್‌ಗಳು (ಹುತಾತ್ಮತೆಗಳನ್ನು) ಕೂಡ ಸಂಭವಿಸಿದೆ, ಬಹಳಷ್ಟು ಮಂದಿ ನೋವನ್ನು ಅನುಭವಿಸಿದ್ದಾರೆ, ಹೆಂಡತಿ ಮತ್ತು ಮಕ್ಕಳನ್ನು ತೊರೆದಿದ್ದಾರೆ, ಹಸಿವು ಮತ್ತು ಬಾಯಾರಿಕೆಗಳನ್ನು ಸಹಿಸಿಕೊಂಡಿದ್ದಾರೆ, ಗಾಯಗಳನ್ನು ಅನುಭವಿಸಿದ್ದಾರೆ, ಸೆರೆವಾಸದ ಕಷ್ಟಗಳನ್ನು ಅನುಭವಿಸಿದ್ದಾರೆ ಆದರೆ ಇದು ಯಾವುದೇ ಅವರನ್ನು ಹಿಮ್ಮಡಿಸಲಿಲ್ಲ. ಮತ್ತು ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ತ್ಯಾಗದ ಅತ್ಯುತ್ತಮ ಪ್ರತಿಫಲವನ್ನು ನೀಡಿದನು. ಅದರ ನಂಬಿಕೆ ವರ್ಧಕ ಅಂಶವೆಂದರೆ ಜಮಾಅತ್‌ನ ಸಂದೇಶವು ಯಾವುದೇ ವಿಶೇಷ ಪ್ರಯತ್ನ ಮತ್ತು ಶ್ರಮವಿಲ್ಲದೆ ಅಂತಹ ಅನೇಕ ಸ್ಥಳಗಳನ್ನು ತಲುಪಿದೆ, ಕೇವಲ ಅಲ್ಲಾಹನ ವಿಷೇಶ ವಿಧಿ ಹಾಗೂ ಅನುಗ್ರಹದಿಂದ ಈ ದೇಶಗಳಲ್ಲಿ ಅಹ್ಮದೀಯತ್ತಿನ ಗಿಡ ನೆಡಲಾಗಿದೆ. ಉದಾಹರಣೆಗೆ,

* ಘಾನಾದಲ್ಲಿ ಆರಂಭಿಕ (ತಬ್ಲೀಗ್‌ಗಾಗಿ) ಉಪದೇಶಕ್ಕಾಗಿ ಯಾವುದೇ ಔಪಚಾರಿಕ ಯೋಜನೆ ಇರಲಿಲ್ಲ. ಘಾನಾದ ಅಕ್ರಾಪೊ ಪಟ್ಟಣದ ಮುಸ್ಲಿಂ ಯೂಸುಫ್ ನ್ಯಾರ್ಕೊ ಸಾಹಿಬ್ ಅವರು 1920 ರಲ್ಲಿ ಬಿಳಿಯ ವ್ಯಕ್ತಿಯೊಂದಿಗೆ ನಮಾಝ್ ನಿರ್ವಹಿಸುತ್ತಿರುವಾಗಿ ಕನಸು ಕಂಡರು. ನೈಜೀರಿಯಾದ ನಿವಾಸಿಯಾಗಿದ್ದ ಮಾನ್ಯ ಅಬ್ದುಲ್ ರೆಹಮಾನ್ ಪೆಡ್ರೊ ಸಾಹಿಬ್ ಅವರೊಂದಿಗೆ ಅವರು ತಮ್ಮ ಕನಸನ್ನು ಪ್ರಸ್ತಾಪಿಸಿದರು. ಭಾರತದಲ್ಲಿ ಪ್ರಧಾನ ಕಛೇರಿ ಮತ್ತು ಲಂಡನ್‌ನಲ್ಲಿ ಶಾಖೆಯನ್ನು ಹೊಂದಿರುವ ಮುಸ್ಲಿಂ ಮಿಷನ್ ಬಗ್ಗೆ ನಾನು ಓದಿದ್ದೇನೆ ಎಂದು ಅಬ್ದುಲ್ ರೆಹ್ಮಾನ್ ಸಾಹಿಬ್ ಅವರಿಗೆ ತಿಳಿಸಿದರು. ಯೂಸುಫ್ ಸಾಹಿಬ್ ತನ್ನ ಕನಸನ್ನು ಮುಖ್ಯಸ್ಥ ಮೆಹದಿ ಅಪಾ ಅವರಿಗೆ ವರದಿ ಮಾಡಿದಾಗ, ಅವರು ಮುಸ್ಲಿಮರ ಸಭೆಯನ್ನು ಆಯೋಜಿಸಿದರು, ಅದರಲ್ಲಿ ಅವರಿಗೆ (ಮುಬಲ್ಲಿಗ್) ಬೋಧಕರನ್ನು ಕಳುಹಿಸಲು ಅಹ್ಮದೀಯತ್ ಕೇಂದ್ರಕ್ಕೆ ಪತ್ರ ಬರೆಯಲು ನಿರ್ಧರಿಸಲಾಯಿತು. ಮೊದಲ ಘಾನಿಯನ್ ಅಹ್ಮದಿ ಮುಖ್ಯಸ್ಥ ಮೆಹದಿ ಅಪಾ ಅವರು ಕೇಪ್ ಕೋಷ್ಟ್‌ನ ಸೀರಿಯಾದ ಮುಸ್ಲಿಂ ಉದ್ಯಮಿಯೊಬ್ಬರನ್ನು ಸಂಪರ್ಕಿಸಿದರು. ಆ ಸಮಯದಲ್ಲಿ ಲಂಡನ್‌ನಲ್ಲಿದ್ದ ಡಾ. ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಮತ್ತು ಅವರೊಂದಿಗೆ ಪತ್ರವ್ಯವಹಾರ ಮಾಡಿ ಸ್ವಲ್ಪ ಹಣವನ್ನು ಸಂಗ್ರಹಿಸಿ ಲಂಡನ್ ಮಿಷನ್‌ಗೆ ಬಿಳಿ ಬೋಧಕರನ್ನು ಕಳುಹಿಸಲು ಸಂಗ್ರಹಿಸಿ ಕಳುಹಿಸಿದರು. ಆದ್ದರಿಂದ, ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಆದೇಶದ ಮೇರೆಗೆ, 1921 ರ ಮಾರ್ಚ್‌ನಲ್ಲಿ ಹಝ್ರತ್ ಮೌಲಾನಾ ಅಬ್ದುಲ್ ರಹೀಮ್ ನೈಯರ್ ಸಾಹಿಬ್(ರ) ಅವರು ಲಂಡನ್‌ನಿಂದ ಘಾನಾಗೆ ಆಗಮಿಸಿದರು.

* ಗ್ಯಾಂಬಿಯಾ ಮಿಷನ್ ಕೂಡ ಅದೇ ರೀತಿಯಲ್ಲಿ ಸ್ಥಾಪಿಸಲಾಯಿತು. ಗ್ಯಾಂಬಿಯಾದ ಹುಡುಗಿಯೊಬ್ಬಳು ಉನ್ನತ ಶಿಕ್ಷಣಕ್ಕಾಗಿ ಸೆರಾ ಲಿಯೋನ್‌ಗೆ ಹೋಗಿದ್ದಳು. ಅಲ್ಲಿ ಅವಳು ಅಂಗಡಿಯೊಂದರಲ್ಲಿ ನಮಾಝ್‌ನ ಪುಸ್ತಕವನ್ನು ಕಂಡುಕೊಂಡಳು, ಅದರಲ್ಲಿ ಅರೇಬಿಕ್ ಭಾಷೆಯೊಂದಿಗೆ ಇಂಗ್ಲಿಷ್ ಅನುವಾದವಿತ್ತು. ಆ ಹುಡುಗಿ ತನ್ನ ದೇಶದಲ್ಲಿ ಅಂತಹ ಪುಸ್ತಕವನ್ನು ನೋಡಿರಲಿಲ್ಲ. ಅವಳು ಆ ಪುಸ್ತಕವನ್ನು ಖರೀದಿಸಿ ಅದನ್ನು ಗ್ಯಾಂಬಿಯಾದಲ್ಲಿದ್ದ ತಮ್ಮ ಸಂಬಂಧಿಕರಿಗೆ ಕಳುಹಿಸಿದರು. ಈ ಪುಸ್ತಕವನ್ನು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ಅವರು ಪ್ರಕಟಿಸಿದ್ದರು. ಓರ್ವ ಯುವಕ ಶ್ರೀ. ಬಾರಾ ಇಂಜಾಯ್ ಎಂಬವರು ಖಾದಿಯನ್‌ನಲ್ಲಿರುವ ಜಮಾಅತ್ತನ್ನು ಸಂಪರ್ಕಿಸಿದರು ಮತ್ತು ಹೆಚ್ಚಿನ ಧಾರ್ಮಿಕ ಪುಸ್ತಕಗಳಿಗಾಗಿ ವಿನಂತಿಸಿದರು. ಜಮಾಅತ್ ಅವರಿಗೆ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಿತು ಮತ್ತು ತಮ್ಮ ಹತ್ತಿರದ ದೇಶವಾದ ನೈಜೀರಿಯಾದಲ್ಲಿ ನಮ್ಮ ಮಿಷನ್ ಇದೆ ಅಲ್ಲಿ ಸಂಪರ್ಕಿಸುವ ಮೂಲಕ ನೀವು ಹೆಚ್ಚಿನ ಸಾಹಿತ್ಯ ಮತ್ತು ಮಾಹಿತಿಯನ್ನು ಪಡೆಯಬಹುದು ಎಂದು ಅವರಿಗೆ ತಿಳಿಸಲಾಯಿತು. ಆ ಸಮಯದಲ್ಲಿ, ಮಾನ್ಯ ನಸೀಮ್ ಸಫಿ ಸಾಹಿಬ್ ನೈಜೀರಿಯಾದ ಮಿಶಿನರಿ ಇಂಚಾರ್ಜ್ ಆಗಿದ್ದರು. ಮೊದಲಿಗೆ, ನೈಜೀರಿಯಾದ ಮುಅಲ್ಲಿಮ್ ಮಾನ್ಯ ಹಮ್ಜಾ ಸುನ್ನಿ ಅಲ್ಲು ಸಾಹಿಬ್ ಗ್ಯಾಂಬಿಯಾಕ್ಕೆ ಬಂದು ಸುಮಾರು ಒಂದು ವರ್ಷ ಬಂಜುಲ್‌ನಲ್ಲಿ ತಬ್ಲೀಗ್ ಮಾಡುತ್ತಿದ್ದರು. ಅವರ ನಂತರ, ಘಾನಾದ ಸ್ಥಳೀಯ ಮುಅಲ್ಲಿಮ್ ಆದ ಮಾನ್ಯ ಸಯೀದ್ ಜಿಬ್ರೀಲ್ ಕೆಲವು ತಿಂಗಳುಗಳ ಕಾಲ ಅಲ್ಲಿದ್ದರು, ಆ ಸಮಯದಲ್ಲಿ ಗ್ಯಾಂಬಿಯಾದಲ್ಲಿ ಯಾವುದೇ ಸ್ತಿರವಾದ ಜಮಾಅತ್ ಸ್ಥಾಪನೆಯಾಗಿರದ ಕಾರಣ, ಮಾನ್ಯ ಸಯೀದ್ ಸಾಹಿಬ್ ತನ್ನ ಕುತ್ತಿಗೆಯಲ್ಲಿ ಅಹ್ಮದೀಯತ್ ಎಂದು ಬರೆದ ಚೀಲವನ್ನು ಇಟ್ಟುಕೊಂಡು ತಿರುಗಾಡುತ್ತಿದ್ದರು. ಅಹ್ಮದಿಯ್ಯತ್‌ನ ಸಂದೇಶವನ್ನು ಜನರಿಗೆ ತಲುಪಿಸುತ್ತಲೇ ಇದ್ದರು. ಹೀಗೆ ಜಮಾಅತೆ ಅಹ್ಮದೀಯದ ಕೇಂದ್ರದೊಂದಿಗೆ ಪತ್ರವ್ಯವಹಾರದ ಮೂಲಕ ಉತ್ತಮ ವಿಶೇಷ ಸಂಬಂಧವನ್ನು ಸ್ಥಾಪಿಸಲಾಯಿತು ಮತ್ತು ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಅಲ್ಲಿಂದ ನಿಯಮಿತವಾಗಿ ಬರಲಾರಂಭಿಸಿದವು. (ಅರ್ಝೆ ಬಿಲಾಲ್, ಮುನವ್ವರ್ ಅಹ್ಮದ್ ಖುರ್ಷೀದ್ ಮುಬಲ್ಲಿಗ್ ಸಿಲ್‌ಸಿಲ)

* 4 ಜನ ಇಂಡೋನೇಷಿಯಾದ ಯುವಕರು 1923 ರಲ್ಲಿ ಧಾರ್ಮಿಕ ಶಿಕ್ಷಣಕ್ಕಾಗಿ ಭಾರತಕ್ಕೆ ಆಗಮಿಸಿದ್ದರು. ಅವರು ಖಾದಿಯನ್‌ಗೆ ಬಂದು ಧಾರ್ಮಿಕ ಶಿಕ್ಷಣಕ್ಕಾಗಿ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರನ್ನು ವಿನಂತಿಸಿಕೊಂಡರು. ಏತನ್ಮಧ್ಯೆ, ಅವರು ಅಹ್ಮದೀಯತ್ತನ್ನು ಸ್ವೀಕರಿಸಿಕೊಂಡರು ಮತ್ತು ಅಲ್ಲಿಂದ ತಮ್ಮ ದೇಶದಲ್ಲಿ (ತಬ್ಲೀಗ್) ಉಪದೇಶವನ್ನು ಪ್ರಾರಂಭಿಸಿದರು.

* ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಅವರ (ತಬ್ಲೀಗಿ) ಉಪದೇಶ ಪತ್ರಗಳ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವಿತಾವಧಿಯಲ್ಲಿ ಇಸ್ಲಾಂ ಧರ್ಮದ ಸಂದೇಶವು ಜಪಾನ್‌ಗೆ ತಲುಪಿತ್ತು, ಆದರೆ ನಿಯಮಿತ ಮಿಷನ್ ಅನ್ನು 1935 ರಲ್ಲಿ ಸೂಫಿ ಅಬ್ದುಲ್ ಖಾದಿರ್ ನಿಯಾಜ್ ಸಾಹಿಬ್ ಸ್ಥಾಪಿಸಿದರು.

* ದೂರದ ಪೌರಸ್ತ್ಯ ದೇಶಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವಿತಾವಧಿಯಲ್ಲಿ ಅಹ್ಮದೀಯ್ಯತ್ ಸ್ವೀಕರಿಸಿದ ಕೆಲವು ಪವಿತ್ರ ಆತ್ಮಗಳ ಹೆಸರು ಹೀಗಿವೆ: ಹಾಂಗ್ ಕಾಂಗ್ ಮತ್ತು ಚೀನಾದಲ್ಲಿ ಹಝ್ರತ್ ಖಾರಿ ಗುಲಾಮ್ ಮುಜ್ತಾಬಿ ಸಾಹಿಬ್(ರ) ಮತ್ತು ಖಾರಿ ಗುಲಾಮ್ ಹಮ್ ಸಾಹಿಬ್(ರ) ಆಸ್ಟ್ರೇಲಿಯಾದಲ್ಲಿ ಹಝ್ರತ್ ಸೂಫಿ ಹಸನ್ ಮೂಸಾ ಸಾಹಿಬ್(ರ) ಸೆಪ್ಟೆಂಬರ್ 1903 ರಲ್ಲಿ ಬೈಅತ್ ಮಾಡಿದರು. ನ್ಯೂಜಿಲೆಂಡ್‌ನ ಹಝ್ರತ್ ಪ್ರೊ. ಕ್ಲೆಮೆಂಟ್ ರೇಗ್ ಸಾಹಿಬ್ ಅವರು ಮೇ 1908 ರಲ್ಲಿ ಹುಝೂರ್ ಅಲೈಹಿಸ್ಸಲಾಮ್ ಅವರನ್ನು ಭೇಟಿ ಮಾಡಿದರು ಮತ್ತು ಹಿಂದಿರುಗಿ ಬೈಅತ್ ಮಾಡಿದರು. ಫಿಜಿಯ ಮೊದಲ ಅಹ್ಮದಿ ಹಾಜಿ ಮುಹಮ್ಮದ್ ರಂಜಾನ್ ಸಾಹಿಬ್ ಅವರು 1959 ರಲ್ಲಿ ಜಮಾಅತ್‌ಗೆ ಸೇರಿದರು.

* ಚೀನಾದ ನಮ್ಮ ಮೊದಲ ಮುಬಲ್ಲಿಗ್ ಸೂಫಿ ಅಬ್ದುಲ್ ಗಫೂರ್ ಸಾಹಿಬ್ 1935 ರಲ್ಲಿ ಚೀನಾಕ್ಕೆ ಬಂದರು ಆದರೆ ಅಹ್ಮದೀಯ್ಯತ್‌ನ ಸಂದೇಶವು 1924 ರಲ್ಲಿ ತಲುಪಿತು ಮತ್ತು ಅನೇಕ ಅಹ್ಮದಿಯರು ಇದ್ದರು ಎಂದು ತಿಳಿದಿದೆ ಆದರೆ ಅವರು ಕೇಂದ್ರದೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿರಲಿಲ್ಲ. (ಖುತ್ಬಾತೆ ಮಹ್ಮೂದ್, ಸಂಪುಟ-8, ಪುಟ-312)

* ಅಮೆರಿಕವನ್ನು ಹೊಸ ಜಗತ್ತು ಎಂದೂ ಕರೆಯಲಾಗುತ್ತದೆ ಮತ್ತು ಒಂದರ್ಥದಲ್ಲಿ ಅದು ಪ್ರಪಂಚದ ಅಂಚು ಕೂಡ ಆಗಿದೆ.

ಅಮೆರಿಕಾದಲ್ಲಿ, ಹುಝೂರ್ ಅಲೈಹಿಸ್ಸಲಾಮ್ ಅವರ ಪತ್ರವ್ಯವಹಾರದ ಪರಿಣಾಮವಾಗಿ ಅಲೆಕ್ಸಾಂಡರ್ ಮುಸ್ಲಿಂ ಆದರು ಮತ್ತು ಅವರ ಮೂಲಕವೇ ಶ್ರೀ ಆಂಡರ್ಸನ್ ಅವರು 1904 ರಲ್ಲಿ ಅಹ್ಮದಿಯಾದರು, ಅವರ ಹೆಸರನ್ನು ಹುಝೂರ್ ಅಲೈಹಿಸ್ಸಲಾಮ್ ಅವರು ಅಹ್ಮದ್ ಎಂದು ಬದಲಾಯಿಸಿದರು.

* ರಷ್ಯಾದ ಉತ್ತರ ಧ್ರುವದ ಪ್ರದೇಶಗಳನ್ನು ಪ್ರಪಂಚದ ಅಂಚು ಎಂದೂ ಕರೆಯುತ್ತಾರೆ. ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಅವರ ಮೂಲಕ ರಷ್ಯಾದ ಚಿಂತಕ ಮತ್ತು ಶ್ರೇಷ್ಠ ಕಾದಂಬರಿಕಾರ ಟಾಲ್‌ಸ್ಟಾಯ್ ಅವರೊಂದಿಗೆ ಪತ್ರವ್ಯವಹಾರವನ್ನು ಮುಂದುವರೆಸಿದರು ಮತ್ತು 'ಇಸ್ಲಾಮ್ ಧರ್ಮದ ತತ್ವಜ್ಞಾನ'ದ ಅನುವಾದವನ್ನು ಅವರಿಗೆ ಕಳುಹಿಸಿದಾಗ, ಅವರು ಅದರ ಬಗ್ಗೆ ಸುಂದರವಾದ ಕಾಮೆಂಟ್ ಮಾಡಿದರು.

ಇವು ಕೇವಲ ಕೆಲವು ಉದಾಹರಣೆಗಳಾಗಿವೆ ಮತ್ತು ಈ ವಾಗ್ದಾನವು ಎಲ್ಲಾ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಪೂರೈಸಲ್ಪಟ್ಟ ದೇವರಿಂದ ಬಂದಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ಒದಗಿಸುತ್ತದೆ. ದೇವರ ಇಚ್ಛೆ ಮಾತ್ರ ಗೋಚರಿಸುವ ಇಂತಹ ಸಾಕಷ್ಟು ಘಟನೆಗಳಿವೆ. ಇದು ಕೇವಲ ದೈವವಾಣಿಯಲ್ಲ. ಇದು ಭವ್ಯವಾದ ವಾಗ್ದಾನವಾಗಿದ್ದು, ಅದರ ನೆರವೇರಿಕೆಯ ಕಥೆಗಳು ಭೂಮಿಯ ಅಂಚು ಅಂಚಿನವರಿಗೆ ಹರಡಿಕೊಂಡಿವೆ. ಭೂಮಿಯ ಪ್ರತಿಯೊಂದು ಪ್ರದೇಶದಲ್ಲೂ ತನ್ನ ತೇಜಸ್ಸನ್ನು ತೋರಿಸುವ ಭವಿಷ್ಯವಾಣಿ ಇದೆ. ದೈವಿಕ ಸಹಾಯ ಮತ್ತು ಬೆಂಬಲದಿಂದ ತುಂಬಿದ ಇತಿಹಾಸವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸತ್ಯಾಸತ್ಯತೆಯ ಸ್ಪಷ್ಟ ಪುರಾವೆಗಳಿವೆ, ಇದನ್ನು ವಿಶ್ವ ಇಂದು ಸಾಕ್ಷಿ ಹೇಳುತ್ತಿದೆ. ಪ್ರಕಾಶದಿಂದ ಬರೆಯಲಾದ ಲೇಖನವೊಂದನ್ನು ಪ್ರಪಂಚದ ಮೇಲೆ ಕೆತ್ತಲಾಗಿದೆ. ಅರಬ್ ಸಲಹೆಗಾರರು ಹಾಗೂ ಸೀರಿಯಾದ ಭಕ್ತರು ಕೂಡ ಈಗ ಅವರ ಮೇಲೆ ದರೂದನ್ನು ಕಳುಹಿಸುತ್ತಿದ್ದಾರೆ ಮತ್ತು ಅರಬ್‌ದೇಶವನ್ನುಳಿದ ಇತರ ರಾಷ್ಟ್ರಗಳ ಜನರು ಸಹ ಅವರ ಇಂಗಿತಕ್ಕಾಗಿ ತಮ್ಮ ಪ್ರಾಣವನ್ನು ತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ಅವರ ಧ್ವಜವು ಪ್ರಪಂಚದ 213 ದೇಶಗಳಲ್ಲಿ ಆರೋಹಣವಾಗುತ್ತಿದೆ. ಮತ್ತು ಪ್ರತಿ ಧ್ವಜವು ಅವರ ದೈವವಾಣಿಯನ್ನು ನೆನಪಿಸುತ್ತದೆ.

ಖಾದಿಯನ್‌ನ ಸಣ್ಣ ವಸಾಹತು ಎಲ್ಲಿದೆ ಹಾಗೂ ಖಾದಿಯಾನ್‌ನ ಕೆಲವು ಜನರು ಮತ್ತು ಸಮುದ್ರಗಳಿಂದ ಸುತ್ತುವರಿದ ಪ್ರಪಂಚದ ದೂರದ ದ್ವೀಪಗಳು ಎಲ್ಲಿವೆ. ಬೆಳೆಗಳಿಂದ ಆವೃತವಾಗಿರುವ ಹಚ್ಚ ಹಸಿರಿನ ಪ್ರದೇಶಗಳಿವೆ. ನೀರು ಮತ್ತು ಮಂಜುಗಡ್ಡೆಯಿಂದ ಆವೃತವಾಗಿರುವ ಉತ್ತರ ಧ್ರುವ ಮತ್ತು ದಕ್ಷಿಣ ಧ್ರುವಗಳಿವೆ. ತೈಲ ಸಮೃದ್ಧವಾಗಿರುವ ಮರುಭೂಮಿಗಳಿವೆ. ಅದು ಹಳೇ ಲೋಕವೇ ಆಗಿರಲಿ ಅಥವಾ ಹೊಸ ಪ್ರಪಂಚವೇ ಆಗಿರಲಿ. ಅದು ಜನನಿಬಿಡವಾಗಿರಬಹುದು ಅಥವಾ ಆಸ್ಟ್ರೇಲಿಯಾ ಮತ್ತು ಕೆನಡಾದಂತಹ ಕರಾವಳಿ ಮತ್ತು ಮರಳು ಪ್ರದೇಶವಾಗಿರಬಹುದು. ಎಲ್ಲೆಡೆ ಖಾದಿಯಾನ್ ಮತ್ತು ಅದರ ಪವಿತ್ರ ಪ್ರವಾದಿಯ ಹೆಸರು ಪ್ರತಿಧ್ವನಿಸುತ್ತದೆ ಮತ್ತು ಈ ಗ್ರಹದಲ್ಲಿ ಮನುಷ್ಯ ಇರುವವರೆಗೂ ಪ್ರತಿಧ್ವನಿಸುತ್ತಲೇ ಇರುತ್ತದೆ. ಮತ್ತು **ಅಶ್ರಖತಿಲ್ ಅರ್ಝು ಬಿನೂರಬ್ಬಿಹಾ** (ಅಝ್ಝುಮರ್: 70) ಇಡೀ ಭೂಮಿಯು ತನ್ನ ಭಗವಂತನ ಬೆಳಕಿನಿಂದ ಪ್ರಕಾಶಿಸಲ್ಪಡುತ್ತದೆ. ಇನ್‌ಶಾಅಲ್ಲಾಹ್

**(ರೋಝ್ನಾಮ ಅಲ್–ಫಝ್ಲ್ ಲಂಡನ್ ಪತ್ರಿಕೆಯ ಕೃಪೆ)**

---

*(ಪುಟ ಸಂಖ್ಯೆ **02**ರ ಉಳಿದ ಭಾಗ)*

ಕಳುಹಿಸಲ್ಪಟ್ಟಿದ್ದೇನೆ. ಪವಿತ್ರ ಖುರ್‌ಆನ್‌ನಲ್ಲಿ ಇದು ಒಂದು ದೊಡ್ಡ ಭವಿಷ್ಯವಾಣಿಯಾಗಿದೆ ಎಂದು ಈ ಸ್ಥಳದಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ಅದರ ಪ್ರಕಾರ ವಿದ್ವಾಂಸರು ಮತ್ತು ಸಂಶೋಧಕರು ಇದನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕೈಯಲ್ಲಿ ಪೂರ್ಣಗೊಳ್ಳುತ್ತದೆ ಎಂದು ಒಪ್ಪಿಕೊಳ್ಳುತ್ತಾರೆ. ಆದ್ದರಿಂದ, ಅನೇಕ ಸಂತರು ಮತ್ತು ವಿದ್ವಾಂಸರು ನನಗಿಂತ ಮುಂಚೆ ಹಾದು ಹೋದವರಲ್ಲಿ ಯಾರೂ ಈ ಭವಿಷ್ಯವಾಣಿಯನ್ನು ಸ್ವತಃ ತಮ್ಮ ಉದಾಹರಣೆಯಾಗಿ ಬಳಸಲಿಲ್ಲ, ಅಥವಾ ಮೇಲಿನ ಆಯತ್ ತಮ್ಮ ಪರವಾಗಿ ಪ್ರೇರೇಪಿಸಲ್ಪಟ್ಟಿದೆ ಎಂದು ದಾವೆ ಮಾಡಲಿಲ್ಲ. ಆದರೆ ನನ್ನ ಸಮಯ ಬಂದಾಗ, ಈ ಇಲ್‌ಹಾಮ್ (ದೈವವಾಣಿ) ಆಯಿತು. ನಾನು ಈ ಆಯತ್‌ಗೆ ಉದಾಹರಣೆ ಮತ್ತು ನನ್ನ ಕೈಯಿಂದ ಮತ್ತು ನನ್ನ ಸಮಯದಲ್ಲಿ ಇಸ್ಲಾಂ ಧರ್ಮದ ಶ್ರೇಷ್ಠತೆಯು ಇತರ ಧರ್ಮಗಳ ಮೇಲೆ ಸಾಬೀತಾಗುತ್ತದೆ ಎಂದು ನನಗೆ ತಿಳಿಸಲಾಯಿತು.

(ತಿರ್‌ಯಾಖುಲ್ ಖುಲೂಬ್, ಪುಟ–47)

ಸರ್ವಶಕ್ತನದ ಅಲ್ಲಾಹನು ಮಸೀಹ್ ಮೌಊದರ ಕುರುಹು ಪವಿತ್ರ ಖುರ್‌ಆನ್‌ನಲ್ಲಿ **ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ** ಎಂದು ವಿವರಿಸಿರುವುದು ಆ ಕುರುಹು ನನ್ನ ಕೈಯಿಂದ ನೆರವೇರಿತು. (ತಿರ್‌ಯಾಖುಲ್ ಖುಲೂಬ್, ಪುಟ–53)

ಜೀವಂತ ಧರ್ಮವು ದೈವಿಕ ಕುರುಹನ್ನು ಹೊಂದಿರುವ ಧರ್ಮವಾಗಿದೆ. ಮತ್ತು ಪರಿಪೂರ್ಣ ವ್ಯತ್ಯಸ್ತ ಪ್ರಕಾಶವು ಅದರ ಶಿರದ ಮೇಲೆ ಪ್ರಕಾಶಮಾನವಾಗುತ್ತದೆ, ಆದ್ದರಿಂದ ಅದು ಇಸ್ಲಾಂ ಆಗಿದೆ. ಇದರಲ್ಲಿ ನನ್ನೊಂದಿಗೆ ಸ್ಪರ್ಧಿಸುವ ಕ್ರಿಶ್ಚಿಯನ್ನರಲ್ಲಿ, ಸಿಖ್ಖರಲ್ಲಿ ಅಥವಾ ಹಿಂದೂಗಳಲ್ಲಿ ಯಾರಾದರೂ ಇದ್ದಾರೆಯೇ? ಹಾಗಾಗಿ ನನ್ನ ವಿರುದ್ಧ ಯಾವುದೇ ಹೆಜ್ಜೆ ಇಡಲು ಅವಕಾಶವಿಲ್ಲ ಎಂಬುದಕ್ಕೆ ಇದು ಸಾಕಷ್ಟು ಪುರಾವೆಯಾಗಿದೆ. ಈಗ ನೀವು ಹೇಗೆ ಬೇಕಾದರೂ ಸಮಾಧಾನ ಮಾಡಿಕೊಳ್ಳಿ, ನನ್ನ ನೋಟವು ಬರಾಹೀನೆ ಅಹ್ಮದೀಯಾದಲ್ಲಿ ಪವಿತ್ರ ಖುರ್‌ಆನ್‌ನ ಮೂಲಕ್ಕೆ ಅನುಗುಣವಾಗಿದ್ದ ಭವಿಷ್ಯವಾಣಿಯನ್ನು ಪೂರೈಸಿದೆ, ಮತ್ತು ಅದು **ಹುವಲ್ಲಝೀ ಅರ್ಸಲ ರಸೂಲಹೂ ಬಿಲ್ ಹುದಾ ವದೀನಿಲ್ ಹಖ್ಖಿ ಲಿಯುಝ್‌ಹಿರಹೂ ಅಲದ್ದೀನಿ ಕುಲ್ಲಿಹೀ**. ಎಂದಾಗಿದೆ. (ತಿರ್‌ಯಕುಲ್ ಖುಲೂಬ್, ಪುಟ–54)

**(ತಫ್ಸೀರ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಸಂಪುಟ–6, ಪುಟ–117, ಆವೃತ್ತಿ 2004, ಖಾದಿಯಾನ್)**

...*...*...*...

---

*(ಪುಟ ಸಂಖ್ಯೆ **03**ರ ಉಳಿದ ಭಾಗ)*

ಮೇಲುಗೈ ಸಾಧಿಸುತ್ತದೆ. ಮತ್ತು ಅಲ್ಲಾಹನ ಏಕದೇವೋಪಾಸನೆಯು ಎಲ್ಲಾ ಮಾನವಕುಲದಲ್ಲಿ ಹರಡುತ್ತದೆ ಮತ್ತು ಪ್ರಪಂಚದ ಎಲ್ಲಾ ರಾಷ್ಟ್ರಗಳು ಮತ್ತು ಸಮೂದಾಯಗಳು ರಸೂಲುಲ್ಲಾಹ್(ಸ) ಅವರ ಪ್ರೀತಿಯಿಂದ ತುಂಬಿರುತ್ತವೆ."

**(ಖತ್ಬಾತ್ ನಾಸಿರ್, ಸಂಪುಟ–1, ಪುಟ–82)**

**ರಸೂಲುಲ್ಲಾಹ್(ಸ) ಅವರ ಧ್ವಜವನ್ನು ಪ್ರಪಂಚದಾದ್ಯಂತ ಆರೋಹಿಸಲಾಗುತ್ತದೆ ಮತ್ತು ಇಸ್ಲಾಮ್ ಧರ್ಮದ ಶತ್ರುಗಳ ಎಲ್ಲಾ ಕನಸುಗಳು ವಿಫಲಗೊಳ್ಳುತ್ತವೆ. (ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರಹ))**

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ) ಹೇಳುತ್ತಾರೆ:

"ನಮ್ಮನ್ನು ಅಳಿಸಿ ಹಾಕಲು ಬಯಸುವವರು. ಇದು ಎಂದಿಗೂ ನನಸಾಗದವರ ಕನಸುಗಳಾಗಿವೆ. ನನ್ನ ಯಜಮಾನ ಹಝ್ರತ್ ಮುಹಮ್ಮದ್(ಸ) ರವರು ಕಂಡ ಕನಸ್ಸುಗಳೇ ನನಸಾಗುತ್ತವೆ, ಅದು ರಸೂಲುಲ್ಲಾಹ್(ಸ) ಅವರ ಪರಿಪೂರ್ಣ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕನಸಾಗಿತ್ತು. ಪ್ರವಾದಿ ಮುಹಮ್ಮದ್(ಸ) ಅವರ ಧ್ವಜವು ಪ್ರಪಂಚದಾದ್ಯಂತ ಹಾರುತ್ತದೆ ಮತ್ತು ಇಸ್ಲಾಂನ ಶತ್ರುಗಳ ಎಲ್ಲಾ ಕನಸುಗಳು ವಿಫಲವಾಗುತ್ತವೆ, ಈಡೇರುವುದಿಲ್ಲ, ಮತ್ತು ನಿಷ್ಪ್ರಯೋಜಕವಾಗಿ ಹೊರಬರುತ್ತವೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಧ್ವಜವು ಪ್ರತಿ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಎಲ್ಲೆಡೆ ಹಾರಿಸಲಾಗುತ್ತದೆ. ಅಂದರೆ, ವಾಸ್ತವವಾಗಿ ಹಝ್ರತ್ ಮುಹಮ್ಮದ್(ಸ) ಅವರ ಧ್ವಜವಾಗಿರುವ ಅದೇ ಧ್ವಜವು ಇಸ್ಲಾಮಿನ ಎಲ್ಲಾ ಶತ್ರುಗಳ ಪ್ರತಿ ಕನಸನ್ನು ಶೂನ್ಯವಾಗಿಸುತ್ತದೆ." **(ಅಲ್–ಫಝ್ಲ್, ಜೂನ್ 9, 1983)**

**ಪ್ರವಾದಿ ಮುಹಮ್ಮದ್(ಸ) ಅವರ ಧ್ವಜವು ಪೂರ್ಣ ಶಕ್ತಿಯೊಂದಿಗೆ ಜಗತ್ತಿನಲ್ಲಿ ಆರೋಹಿಸಲಾಗುತ್ತದೆ (ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ)).**

ಹಝ್ರತ್ ಖಲೀಫತುಲ್ ಮಾಸೀಹ್ ಖಾಮಿಸ್ (ಅತಬಿಅ) ಹೇಳುತ್ತಾರೆ:

"ಇಂದು, ಧರ್ಮದ ಪುನರುಜ್ಜೀವನಕ್ಕಾಗಿ, ಇಸ್ಲಾಮಿನ ಕಳೆದುಹೋದ ವೈಭವವನ್ನು ಮರಳಿ ತರಲು, ಪವಿತ್ರ ಪ್ರವಾದಿ ಮುಹಮ್ಮದ್(ಸ) ರ ರಕ್ಷಣೆಗೆ ನಿಲ್ಲಲು ಅಲ್ಲಾಹನು ಸ್ಥಾಪಿಸಿದ ಜರಿವುಲ್ಲಾಹ್‌ನನ್ನು ಅನುಸರಿಸುವ ಮೂಲಕ ಮತ್ತು ಅವರು ನೀಡಿದ ಪುರಾವೆಗಳು ಮತ್ತು ಸಾಕ್ಷ್ಯಾಧಾರಗಳಿಂದ ಸರ್ವಶಕ್ತನಾದ ಅಲ್ಲಾಹನು ಅವರಿಗೆ ತಿಳಿಸಿದ ಪುರಾವೆಗಳೊಂದಿಗೆ ಮತ್ತು ಅವರ ಬೋಧನೆಗಳನ್ನು ಅನುಸರಿಸುವ ಮೂಲಕ, ಇಸ್ಲಾಂ ಧರ್ಮದ ಧ್ವಜ ಮತ್ತು ಪವಿತ್ರ ಪ್ರವಾದಿ ಮುಹಮ್ಮದ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಧ್ವಜವು ಪ್ರಪಂಚದಲ್ಲಿ ಸಂಪೂರ್ಣ ವೈಭವದಿಂದ ಆರೋಹಣಗೊಳ್ಳುವುದು. ಇನ್‌ಶಾಅಲ್ಲಾಹ್. ಮತ್ತು ಹಾರುತ್ತಲೇ ಇರುವುದು."

**(ಅಲ್–ಫಝ್ಲ್ ಇಂಟರ್‌ನ್ಯಾಶನಲ್, ಮಾರ್ಚ್ 17, 2006)**

**Love for All, Hatred for None**
**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

# ಯುರೋಪಿನಲ್ಲಿ ಅಹ್ಮದೀಯ ಜಮಾಅತ್ತಿನ ಅಭಿವೃದ್ಧಿ

## (ಜಾವಿದ್ ಇಕ್ಬಾಲ್ ನಾಸಿರ್ ಮುಬಲ್ಲಿಗ್ ಸಿಲ್ಸಿಲಾ ಜರ್ಮನಿ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ತಂದ ಸಂದೇಶವನ್ನು, ಅವರ ಇಚ್ಛೆಯ ಪ್ರಕಾರ, ಅವರ ನಂತರದ ಉತ್ತರಾಧಿಕಾರಿಗಳು ಮತ್ತು ಖಲೀಫರು ದೇವನ ಸೃಷ್ಟಿಗಳಿಗೆ ತಲುಪಿಸುತ್ತಿದ್ದಾರೆ ಮತ್ತು ಪುನರುತ್ಥಾನದ ದಿನದವರೆಗೆ ಅದನ್ನು ತಲುಪಿಸುತ್ತಾರೆ. ಇನ್ಶಾಅಲ್ಲಾಹ್.

ಈ ದ್ವಿತೀಯ ದೈವಿಕ ಶಕ್ತಿಯು ಯುರೋಪ್ ಖಂಡದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ (ವಾಗ್ದತ್ತ ಮಹದಿ) ಅವರ ಧ್ಯೇಯವನ್ನು ಪೂರೈಸಲು ಹೆಚ್ಚಿನ ಪ್ರಯತ್ನಗಳನ್ನು ಮಾಡುತ್ತಾ ಇದೆ. ಮತ್ತು ಈ ಪ್ರದೇಶದಲ್ಲಿ ಎಲ್ಲಾ ವಿಧಿ, ವಿಧಾನಗಳನ್ನು ಅಳವಡಿಸಿಕೊಂಡಿತು. ಕೆಲವೆಡೆ ಮುಬಲ್ಲಿಘ್‌ರನ್ನು ಕಳುಹಿಸಲಾಯಿತು ಮತ್ತು ಕೆಲವು ಸ್ಥಳಗಳಲ್ಲಿ ಮಸೀದಿಗಳ ನಿರ್ಮಾಣ ಪ್ರಾರಂಭವಾಯಿತು. ಕೆಲವು ಸ್ಥಳಗಳಲ್ಲಿ ಮಿಷನ್ ಹೌಸ್‌ಗಾಗಿ ಪ್ಲಾಟ್ಗಳನ್ನು ಖರೀದಿಸಲಾಗಿದೆ. ಮತ್ತು ಕೆಲವು ಸ್ಥಳಗಳಲ್ಲಿ ಈ ಉದ್ದೇಶಕ್ಕಾಗಿ, ನಿರ್ಮಿಸಲಾದ ಮನೆಗಳನ್ನು ಖರೀದಿಸಲಾಯಿತು. ಅಹ್ಮದಿ ಸದಸ್ಯರ ತರಬೇತಿ ಮತ್ತು ಶಿಕ್ಷಣಕ್ಕಾಗಿ ಪ್ರಶ್ನೋತ್ತರ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿತ್ತು. ಅಲ್ಲಿ ಸತ್ಯದ ಸಂದೇಶವನ್ನು ಹರಡಲು ಅವರು ವಿವಿಧ ಸ್ಥಳಗಳಿಗೆ ಭೇಟಿ ನೀಡಿದರು. ಆಧ್ಯಾತ್ಮಿಕ ಬೆಳವಣಿಗೆಗಾಗಿ ವಾರ್ಷಿಕ ಸಭೆಗಳನ್ನು (ಜಲ್ಸಾ) ಆಯೋಜಿಸಲಾಯಿತು. ದೈಹಿಕ ಶಕ್ತಿಯನ್ನು ಬಲಪಡಿಸಲು ಕ್ರೀಡಾ ಕೂಟಗಳನ್ನು ಉತ್ತೇಜಿಸಲಾಯಿತು.

ಕೆಲವು ಸ್ಥಳಗಳಲ್ಲಿ, ತಬ್ಲೀಗ್ ಮತ್ತು ದಾವತ್-ಎ-ಇಲಲ್ಲಾಹ್‌ದ ಸದಸ್ಯರಿಗೆ ವಿವಿದ ಆದೇಶಗಳನ್ನು ನೀಡಲಾಯಿತು. ಮತ್ತು ದೇಶದಲ್ಲಿ ವ್ಯಾಪಕವಾಗಿ ಸಾಹಿತ್ಯವನ್ನು ಪ್ರಕಟಿಸಲು ಸಲಹೆ ನೀಡಲಾಯಿತು. ಒಂದೆಡೆ, ಪವಿತ್ರ ಖುರ್ ಆನ್‌ಅನ್ನು ಸ್ಥಳೀಯ ಭಾಷೆಗೆ ಭಾಷಾಂತರಿಸಲು ಈ ದೇಶಗಳಲ್ಲಿ ಭಾಷಾಶಾಸ್ತ್ರಜ್ಞರ ಸಹಾಯವನ್ನು ತೆಗೆದುಕೊಳ್ಳಲಾಯಿತು ಮತ್ತೊಂದೆಡೆ ಯುರೋಪಿಯನ್ ದೇಶಗಳ ಭಾಷೆಗಳನ್ನು ಕಲಿಯಲು ಬೋಧಕರಿಗೆ ವಿಶೇಷ ಸೂಚನೆಗಳನ್ನು ನೀಡಲಾಯಿತು. ಸರ್ವಶಕ್ತನಾದ ಅಲ್ಲಾಹನ ಒಂದು ದೊಡ್ಡ ಅನುಗ್ರಹವೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ನಾಲ್ಕನೇ ಖಲೀಫ ರವರ ಮೂಲಕ ಮುಸ್ಲಿಮ್ ಟೀವಿಯ ಆರಂಭಕ್ಕೆ ಜಗತ್ತು ಸಾಕ್ಷಿಯಾಯಿತು ಮತ್ತು ಅದರ ಚಾನಲ್‌ಗಳನ್ನು ಯುರೋಪಿನಲ್ಲಿ ಐದನೇ ಖಲೀಫ(ಅತಬಿಅ) ರವರು ಪ್ರಾರಂಭಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ರವರು ಹೇಳುತ್ತಾರೆ," ಇಸ್ಲಾಂ ಧರ್ಮದ ನಿಜವಾದ ಸಂದೇಶವು M T A ಮೂಲಕ ಪ್ರಪಂಚದ ಎಲ್ಲಾ ದೇಶಗಳನ್ನು ತಲುಪುತ್ತಿದೆ. ಮೊದಲು ಒಂದು ಭಾಷೆ ಮತ್ತು ಒಂದು ಚಾನಲ್ ಇತ್ತು. ಪ್ರಸ್ತುತ M T A ಯ ಎಂಟು ವಿಭಿನ್ನ ಚಾನಲ್‌ಗಳು ಪ್ರಪಂಚದಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರಪಂಚದ ವಿವಿಧ ದೇಶಗಳು M T A ಸ್ಟುಡಿಯೋ ಹೊಂದಿದೆ. ಅಲ್ಲಿಂದ

M T A ಕಾರ್ಯಕ್ರಮಗಳು ಮುಂದುವರಿಯುತ್ತವೆ. ಈಗ ಸ್ಟುಡಿಯೋಗಳು ಒಂದೇ ಸ್ಥಳದಲ್ಲಿ ಅಲ್ಲ, ವಿವಿಧೆಡೆಯೂ ಇದೆ, ಆಫ್ರಿಕಾದ ಅನೇಕ ಸ್ಥಳಗಳಲ್ಲಿ ಅಂದರೆ ಆಫ್ರಿಕಾ, ಉತ್ತರ ಅಮೇರಿಕಾ ಮತ್ತು ಯುರೋಪಿನ ಅನೇಕ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ನಮ್ಮ ಸಂಪನ್ಮೂಲಗಳನ್ನು ನೋಡಿದರೆ ಅದು ಸಾಧ್ಯವಿಲ್ಲ. ಇಸ್ಲಾಮಿನ ನಿಜವಾದ ಸಂದೇಶ ಸಾಮಾಜಿಕ ಜಾಲತಾಣಗಳ ಮೂಲಕವೂ ತಲುಪುತ್ತಿದೆ. (ಶುಕ್ರವಾರ ಮೇ 28, 2021, ಅಪ್ಜಲ್ ಪ್ರಕಟಿತ, ಜೂನ್ 18, 2021, ಪುಟಗಳು 8-9)

ಯುರೋಪಿನ ಭೂಮಿಗೂ ಈ ಶ್ರೇಷ್ಠತೆ ಮತ್ತು ಹೆಮ್ಮೆ ಇದೆ. ಅಲ್ಲಿಂದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರೊಂದಿಗೆ ವರ್ಚುವಲ್ ಸಭೆಯನ್ನು ಜಗತ್ತು ನೋಡುತ್ತಿದೆ.

ಈ ಬಗ್ಗೆ ಹುಝೂರ್ ರವರು ಹೀಗೆ ಹೇಳುತ್ತಾರೆ. ಅಲ್ಲಾಹನು ಖಲೀಫರ ಜೊತೆ ಸಂಬಂಧವನ್ನು ಸ್ಥಾಪಿಸುವ ಹೊಸ ಮಾರ್ಗವನ್ನು ತೋರಿಸಿಕೊಟ್ಟಿದ್ದಾನೆ. ಕೋವಿಡ್ ಕಾಯಿಲೆಯ ಕಾರಣದಿಂದ

ಆನ್ ಲೈನ್ ಸಭೆಗಳು (Online) (Virtual ) ವರ್ಚುವಲ್ ಸಭೆಗಳು ಮುಂಚೂಣಿಗೆ ಬಂದಿದೆ. ಈ ಮಾಧ್ಯಮದ ಮೂಲಕ ಸಭೆಗಳನ್ನೂ ನಡೆಸಲಾಗುತ್ತಿದೆ. ಕಾಲದ ಖಲೀಫರಿಂದ ಜನರು ನೇರ ಮಾರ್ಗದರ್ಶನವನ್ನು ತೆಗೆದುಕೊಳ್ಳುತ್ತಿದ್ದಾರೆ. ನಾನು ಇಲ್ಲಿ ಲಂಡನ್‌ನಿಂದ, ಆಫ್ರಿಕಾದ ಯಾವುದೇ ದೇಶದಿಂದ, ಇಂಡೋನೇಷ್ಯಾದ ಸಭೆಗಳನ್ನು ನಡೆಸುತ್ತಿದ್ದೇನೆ. ಕೆಲವೊಮ್ಮೆ ಆಸ್ಟ್ರೇಲಿಯಾದೊಂದಿಗೆ, ಕೆಲವೊಮ್ಮೆ ಯುನೈಟೆಡ್ ಸ್ಟೇಟ್ಸ್ ನೊಂದಿಗೆ, ಇವೆಲ್ಲವೂ ದೇವನ ಬೆಂಬಲದ ಸಂಕೇತಗಳಾಗಿವೆ.

ಆದ್ದರಿಂದ ಅಲ್ಲಾಹನು ತನ್ನ ಅನುಗ್ರಹಗಳ ದರ್ಶನಗಳನ್ನು ತೋರಿಸುತ್ತಿದ್ದಾನೆ ಮತ್ತು ನಮಗೆ ಖಿಲಾಫತ್ತಿನ ಅನುಗ್ರಹವನ್ನು ನೀಡಿದ್ದಾನೆ. ಆದ್ದರಿಂದ ನಾವು ನಮ್ಮ ಕರ್ತವ್ಯಗಳನ್ನು ಪಾಲಿಸಬೇಕೆಂಬುದನ್ನು ನಾವು ಎಂದಿಗೂ ಮರೆಯಬಾರದು.

ಖುತ್ಬಾ ಜುಮಾ ಮೇ 28, 2021 ರಂದು ಪ್ರಕಟಿಸಲಾಗಿದೆ, ಅಲ್-ಫಜ್ಲ್ ಇಂಟರ್ನ್ಯಾಷನಲ್, ಜೂನ್ 18, 2021, ಪುಟ 9 ಅನ್ನು ಪ್ರಕಟಿಸಲಾಗಿದೆ)

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ರವರ ಕಾಲದಲ್ಲಿ ಜರ್ಮನ್ ಜಮಾಅತ್ತಿಗೆ 100 ಮಸೀದಿಗಳನ್ನು ನಿರ್ಮಿಸುವ ದೊಡ್ಡ ಗುರಿಯನ್ನು ನೀಡಿಲಾಗಿತ್ತು ಆದರೆ ಅದು ಹಝ್ರತ್ ಖಲೀಫತ್ ಮಸೀಹ್ ಖಾಮಿಸ್(ರ) ಅವರ ಅನುಗ್ರಹೀತ ಸಮಯದಲ್ಲಿ ಈಡೇರುತ್ತದೆ. ಯುರೋಪ್‌ನಲ್ಲಿ ಕಬಡ್ಡಿ ಮ್ಯಾಚ್‌ಗಳನ್ನು ಆಡಿಸಲಾಯಿತು ಮತ್ತು ವೀಕ್ಷಿಸಲಾಯಿತು. ಈ ಶುಭ ಯುಗದಲ್ಲಿ. ಕ್ರಿಕೆಟ್ ಆಟಗಾರರು ತಮ್ಮ ಆಸಕ್ತಿಯನ್ನು ತೋರ್ಪಡಿಸಿದರು, ಈ ಎರಡನೇ ದೈವಿಕ ಶಕ್ತಿಯ ನೆರಳಿನಲ್ಲಿ, ಮಜ್ಲಿಸ್‌ನ ಸಮಾಲೋಚನೆ ಯುರೋಪಿನಲ್ಲಿ ಪ್ರಾರಂಭವಾಯಿತು,

ನಂತರ ಯುರೋಪಿನಲ್ಲಿ ಖಿಲಾಫತ್ತಿನ ಅನುಗ್ರಹದ ನೆರಳಿನಲ್ಲಿ, ನಿರಾಶ್ರಿತರು ಆಶ್ರಯ ಪಡೆದರು. ಆದ್ದರಿಂದ ಈ ರೀತಿಯಾಗಿ ಯುರೋಪ್ ಜಗತ್ತು ನಿರೀಕ್ಷೆಗಿಂತ ಹತ್ತಿರವಾಗುವುದನ್ನು ನೋಡಿತು. ಇದರ ಪರಿಣಾಮವಾಗಿ ಯುರೋಪಿನಲ್ಲಿ ವಿವಿಧ ಭಾಷಾ ತಜ್ಞರ ಡೆಸ್ಕನ್ನು ರಚಿಸಲಾಯಿತು. ನಂತರ ಅವರ ಕೈಗಳಿಂದ. ಪವಿತ್ರ ಖುರ್‌ಆನಿನ ಅನುವಾದ ಮತ್ತು ಐದು ದೇಶಗಳ ಭಾಷೆಗಳಲ್ಲಿ ಅದರ ಪ್ರಕಟಣೆಯ ಸಾಧನೆಯೂ ಈ ಹಿರಿಯರ ಮೇಲ್ವಿಚಾರಣೆಯಲ್ಲಿ ನಡೆಯಿತು. ಆ ಸಮಯದಲ್ಲಿ ಯುರೋಪ್ ಖಂಡದ ಭೂಮಿ ಪ್ರಾರ್ಥನೆಗಳನ್ನು ಸ್ವೀಕರಿಸುವ ಹಲವಾರು ಪ್ರಕರಣಗಳಿಗೆ ಸಾಕ್ಷಿಯಾಯಿತು. ಯುರೋಪ್ ಅಥವಾ ವಿಶ್ವದ ಯಾವುದೇ ದೇಶದಲ್ಲಿ ಅನ್ಯಾಯ ನಡೆಯುತ್ತಿದ್ದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್(ಅ) ರವರ ಖಲೀಫ ತಮ್ಮ ಧರ್ಮೋಪದೇಶ ಮತ್ತು ಭಾಷಣಗಳಲ್ಲಿ ಅದನ್ನು ಬಹಿರಂಗವಾಗಿ ಪ್ರಸ್ತಾಪಿಸಿದರು ಮತ್ತು ಅದರ ವಿರುದ್ಧ ಧ್ವನಿ ಎತ್ತಿದರು. ಇದಕ್ಕೆ ಸ್ಪಷ್ಟ ಉದಾಹರಣೆಯೆಂದರೆ ಬೋಸ್ನಿಯಾದಲ್ಲಿ ನಡೆದ ದೌರ್ಜನ್ಯ. ಮೂರನೇ ಯುದ್ಧದ ಕುರುಹುಗಳು ಕಂಡಾಗ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅ ಬ ಅ) ರವರು ಕೆಲವು ಯುರೋಪಿಯನ್ ರಾಷ್ಟ್ರಗಳ ಸಂಸತ್ ಭವನಕ್ಕೆ ತೆರಳಿ ಭಾಷಣ ಮಾಡಿ ಅದರ ನಷ್ಟವನ್ನು ಜಗತ್ತಿಗೆ ತಿಳಿಸಿದರು. ಆದ್ದರಿಂದ, ಹುಜೂರ್ ರವರು ಅಕ್ಟೋಬರ್ 22, 2008 ರಂದು ಬ್ರಿಟಿಷ್ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ತಮ್ಮ ಭಾಷಣದಲ್ಲಿ ಹೇಳಿದರು:

ಈ ಶತಮಾನದಲ್ಲಿ ಎರಡು ಮಹಾಯುದ್ಧಗಳು ನಡೆದಿವೆ. ಅದರ ಕಾರಣಗಳು ಏನೇ ಇರಲಿ, ನಾವು ಸೂಕ್ಷ್ಮವಾಗಿ ಗಮನಿಸಿದರೆ, ಒಂದು ಕಾರಣವು ಹೆಚ್ಚು ಎದ್ದು ಕಾಣುತ್ತದೆ ಮೊದಲನೆಯದಾಗಿ, ನ್ಯಾಯವನ್ನು ಸರಿಯಾಗಿ ಸ್ಥಾಪಿಸಲಾಗಿರಲಿಲ್ಲ. ತದನಂತರ ಆರಿದ ಬೆಂಕಿಯಂತೆ ತೋರುತ್ತಿದ್ದ ಕಿಡಿಯು ವಾಸ್ತವವಾಗಿ ಹೊಗೆಯಾಡುತ್ತಿರುವ ಬೆಂಕಿಯ ಕೆನ್ನಾಲಿಗೆಯಾಗಿದ್ದು ಅದು ಅಂತಿಮವಾಗಿ ಇಡೀ ಜಗತ್ತನ್ನು ಎರಡನೇ ಬಾರಿಗೆ ಆವರಿಸಿದ ಜ್ವಾಲೆಯನ್ನು ಎಬ್ಬಿಸಿತು. ಆತಂಕವು ಇಂದಿಗೂ ಬೆಳೆಯುತ್ತಿದೆ. ಶಾಂತಿಯನ್ನು ಸ್ಥಾಪಿಸಲು ಕೈಗೊಳ್ಳುತ್ತಿರುವ ಯುದ್ಧಗಳು ಮತ್ತು ಇತರ ಕ್ರಮಗಳು ಮತ್ತೊಂದು ಮಹಾಯುದ್ಧಕ್ಕೆ ನಾಂದಿಯಾಗುತ್ತಿವೆ. ಪ್ರಸ್ತುತ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಈ ಪರಿಸ್ಥಿತಿಯಲ್ಲಿ ಇನ್ನಷ್ಟು ಹದಗೆಡಿಸುತ್ತಿವೆ. ಪವಿತ್ರ ಖುರ್‌ಆನ್ ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲು ಕೆಲವು ಸುವರ್ಣ ತತ್ವಗಳನ್ನು ನೀಡಿದೆ. ವಿಸ್ತರಣೆಯ ಮಹತ್ವಾಕಾಂಕ್ಷೆಗಳಿಂದಾಗಿ ಹಗೆತನ ಹೆಚ್ಚುತ್ತದೆ ಎಂಬುದು ಸಾಬೀತಾಗಿರುವ ಸತ್ಯ.

ಕೆಲವೊಮ್ಮೆ ಇದು ನೈಸರ್ಗಿಕ ಸಂಪನ್ಮೂಲಗಳನ್ನು ವಶಪಡಿಸಿಕೊಳ್ಳುವ ಮೂಲಕ ವ್ಯಕ್ತವಾಗುತ್ತದೆ ಮತ್ತು ಕೆಲವೊಮ್ಮೆ ಇತರರ ಮೇಲೆ ತನ್ನ ಶ್ರೇಷ್ಠತೆಯನ್ನು ಹೇರುವ ರೂಪದಲ್ಲಿ ಕಂಡುಬರುತ್ತದೆ. ತಮ್ಮ ಹಿತಾಸಕ್ತಿಗಾಗಿ

ಜನರ ಹಕ್ಕುಗಳನ್ನು ಕಸಿದುಕೊಂಡು ತಮ್ಮ ಶ್ರೇಷ್ಠತೆಯನ್ನು ಸಾಬೀತುಪಡಿಸಲು ಬಯಸುವ ನಿರ್ದಯ ದಬ್ಬಾಳಿಕೆಯ ಆಡಳಿತಗಾರರ ಕೈಯಲ್ಲಿ ಅಥವಾ ಆಕ್ರಮಣಕಾರಿ ಸೈನ್ಯಗಳ ಕೈಯಲ್ಲಿ ಅಂತಿಮವಾಗಿ ದಬ್ಬಾಳಿಕೆಗೆ ಕಾರಣವಾಗುತ್ತದೆ. ಕೆಲವೊಮ್ಮೆ ತುಳಿತಕ್ಕೊಳಗಾದವರ ಕೂಗುಗಳ ಪರಿಣಾಮವಾಗಿ, ಹೊರಗಿನ ಪ್ರಪಂಚವು ಸಹಾಯಕ್ಕಾಗಿ ಬರುತ್ತದೆ. ಫಲಿತಾಂಶ ಏನೇ ಇರಲಿ, ಪ್ರವಾದಿ ಶ್ರೇಷ್ಠರು ನಮಗೆ ಈ ಸುವರ್ಣ ತತ್ವವನ್ನು ಕಲಿಸಿದ್ದಾರೆ: ದಬ್ಬಾಳಿಕೆಗಾರ ಮತ್ತು ತುಳಿತಕ್ಕೊಳಗಾದವರಿಗೂ ಸಹಾಯ ಮಾಡಿ. ತುಳಿತಕ್ಕೊಳಗಾದವರಿಗೆ ಸಹಾಯ ಮಾಡುವುದು ಅರ್ಥವಾಗುವಂತಹದ್ದಾಗಿದೆ, ಆದರೆ ನೀವು ದಬ್ಬಾಳಿಕೆಯವರಿಗೆ ಹೇಗೆ ಸಹಾಯ ಮಾಡಬಹುದು? ಎಂದು ಸಹಚರರು ಕೇಳಿದರು. ದಬ್ಬಾಳಿಕೆಯನ್ನು ಕೈಗಳಿಂದ ತಡೆಯುವ ಮೂಲಕ, ಇಲ್ಲದಿದ್ದರೆ, ಅವನ ದಬ್ಬಾಳಿಕೆಯು ಹೆಚ್ಚಾಗುವುದರಿಂದ ಅವನು ದೇವನ ಶಿಕ್ಷೆಗೆ ಗುರಿಯಾಗುತ್ತಾನೆ ಎಂದು ಅವರು ಹೇಳಿದರು. ಆದುದರಿಂದ ಅವನ ಮೇಲೆ ಕರುಣೆ ತೋರಿಸಿ ಅವನನ್ನು ರಕ್ಷಿಸಲು ಪ್ರಯತ್ನಿಸಿ. ಇದು ಸಮಾಜದ ಚಿಕ್ಕ ಘಟಕದಿಂದ ಅಂತಾರಾಷ್ಟ್ರೀಯ ಮಟ್ಟಕ್ಕೆ ಅನ್ವಯಿಸಬಹುದಾದ ತತ್ವವಾಗಿದೆ.... ಶಾಂತಿ ಸ್ಥಾಪನೆಗೆ ಅತ್ಯಂತ ಮುಖ್ಯವಾದ ವಿಷಯವೆಂದರೆ ನ್ಯಾಯ ಸ್ಥಾಪನೆ, ಮತ್ತು ನ್ಯಾಯದ ತತ್ವವನ್ನು ಪಾಲಿಸಿದರೂ, ಶಾಂತಿ ಸ್ಥಾಪಿಸುವ ಪ್ರಯತ್ನಗಳು ವಿಫಲವಾದರೆ, ಅಪರಾಧ ಮಾಡುವ ಪಕ್ಷದ ವಿರುದ್ಧ ಒಟ್ಟಾಗಿ ಹೋರಾಡಿ. (ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಯ ಹಾದಿ, ಪುಟಗಳು 15 ರಿಂದ 16)

ಹಝ್ರತ್ (ಅಬಅ) ರವರು ಜೂನ್ 11, 2013 ರಂದು ಬ್ರಿಟಿಷ್ ಸಂಸತ್ತಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ಸಂಸತ್ತಿನ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಭೀಕರ ವಿನಾಶದ ಬಗ್ಗೆ ಪ್ರಸ್ತಾಪಿಸಿದರು. ನಾವು ಕಳೆದ ಎರಡು ಮಹಾಯುದ್ಧಗಳ ಭೀಕರ ವಿನಾಶದ ಬಗ್ಗೆ ಚೆನ್ನಾಗಿ ತಿಳಿದಿದ್ದೇವೆ. ಕೆಲವು ದೇಶಗಳ ನೀತಿಗಳಿಂದಾಗಿ ಜಗತ್ತಿನ ದಿಗಂತದಲ್ಲಿ ಮತ್ತೊಂದು ಮಹಾಯುದ್ಧದ ಲಕ್ಷಣಗಳು ಗೋಚರಿಸುತ್ತಿವೆ. ವಿಶ್ವಯುದ್ಧವು ಭುಗಿಲೆದ್ದರೆ, ಪಾಶ್ಚಿಮಾತ್ಯ ಪ್ರಪಂಚವು ಅದರ ದೀರ್ಘಕಾಲೀನ ವಿನಾಶಕಾರಿ ಪರಿಣಾಮಗಳಿಂದ ಪ್ರಭಾವಿತವಾಗಿರುತ್ತದೆ. ಈ ವಿಪತ್ತಿನಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳೋಣ ನಮ್ಮ ಮುಂದಿನ ಪೀಳಿಗೆಯನ್ನು ಯುದ್ಧದ ಮಾರಕ ಮತ್ತು ಮಾರಣಾಂತಿಕತೆಯಿಂದ, ವಿನಾಶಕಾರಿ ಫಲಿತಾಂಶಗಳಿಂದ ಉಳಿಸಿ, ಏಕೆಂದರೆ ಈ ದೇಶದ ಯುದ್ಧವು ಪರಮಾಣು ಯುದ್ಧವಾಗಲಿದೆ ಮತ್ತು ಜಗತ್ತು ಸಾಗುತ್ತಿರುವ ದಿಕ್ಕಿಗೆ ಖಂಡಿತವಾಗಿಯೂ ಅಂತಹ ಯುದ್ಧದ ಅಪಾಯವಿದೆ. (ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಯ ಹಾದಿ 129)

ಹೀಗಾಗಿ, ಡಿಸೆಂಬರ್ 4, 2012 ರಂದು, ಹಝ್ರತ್ ಅನ್ವರ್ (ಅಬಿಅ) ಅವರು ಚೀನಾ ಸಂಸತ್ತಿನ ಬ್ರಸೆಲ್ಸ್ ತಂಡವನ್ನು ಉದ್ದೇಶಿಸಿ ಮಾತನಾಡುತ್ತಾ, ದ್ವೇಷ ಮತ್ತು ಯುದ್ಧದಿಂದ ದೂರವಿರಲು ಉತ್ತೇಜಿಸಿದರು ಮತ್ತು ಹೇಳಿದರು: "ದೌರ್ಜನ್ಯಗಳು ಕೊನೆಗೊಳ್ಳಬೇಕು ಏಕೆಂದರೆ ಅವುಗಳನ್ನು ಮುಂದುವರಿಸಲು ಅನುಮತಿಸಿದರೆ, ಜ್ವಾಲೆಗಳು ದ್ವೇಷವು ಹರಡುತ್ತದೆ." ನಾವು ಇಡೀ ಪ್ರಪಂಚವನ್ನು ಸ್ವಾಧೀನಪಡಿಸಿಕೊಳ್ಳುತ್ತೇವೆ ಮತ್ತು ನಂತರ ನಾವು ಅದನ್ನು ಕೊನೆಗೊಳಿಸುತ್ತೇವೆ ಪ್ರಪಂಚದ ಇತ್ತೀಚಿನ ಆರ್ಥಿಕ ಬಿಕ್ಕಟ್ಟಿಗಿಂತ ಅದು ಹೆಚ್ಚಾಗುತ್ತದೆ ಇದರಿಂದ ಉದ್ಭವಿಸುವ ಸಮಸ್ಯೆಗಳೂ ಮರೆತುಹೋಗಿ ಪರಿಸ್ಥಿತಿ ಮೊದಲಿಗಿಂತ ಭೀಕರವಾಗಲಿದೆ. ನಾವು ಊಹಿಸಲೂ ಸಾಧ್ಯವಾಗದಷ್ಟು ಜೀವಗಳು ಬಲಿಯಾಗುತ್ತವೆ. ಆದ್ದರಿಂದ ಎರಡನೆಯ ಮಹಾಯುದ್ಧದಲ್ಲಿ ದೊಡ್ಡ ನಷ್ಟವನ್ನು ಅನುಭವಿಸಿದ ಯುರೋಪಿಯನ್ ರಾಷ್ಟ್ರಗಳು ತಮ್ಮ ಹಿಂದಿನ ಅನುಭವದಿಂದ ಕಲಿಯಬೇಕಾದ ಮತ್ತು ಜಗತ್ತನ್ನು ವಿನಾಶದಿಂದ ರಕ್ಷಿಸುವ ಕರ್ತವ್ಯವನ್ನು ಹೊಂದಿದೆ. (ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿಯ ಹಾದಿ ಪುಟ 96)

ಹ್ಯುಮಾನಿಟಿ ಫಸ್ಟ್ (Humanity first) ಯುರೋಪಿನ ಬಡ ದೇಶಗಳಲ್ಲಿ ತನ್ನ ಸೇವೆ ಮಾಡುವ ಮೂಲಕ ಉತ್ತುಂಗವನ್ನು ತಲುಪಿದಾಗ, ಅವರ ಸಲಹೆ ಮತ್ತು ಪ್ರಾರ್ಥನೆಯೊಂದಿಗೆ ಯುರೋಪಿನ ಆಡಳಿತಗಾರರು ಸಂಸತ್ತಿನಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಅವರ ಧ್ವನಿಯನ್ನು ಆಲಿಸಿದರು. ಅದೇ ಸಮಯದಲ್ಲಿ ಆಫ್ರಿಕಾದ ರಾಜ ವಾರ್ಷಿಕ ಜಲ್ಸಾ ಸಮಾರಂಭದಲ್ಲಿ ಭಾಗವಹಿಸುವುದರ ಮೂಲಕ ಪ್ರಯೋಜನ ಪಡೆದುಕೊಂಡರು ವಿವಿಧ ದೇಶಗಳ ಜನತೆಗೆ ಖಲೀಫರ ಧ್ವನಿಯ ಭಾಷಾಂತರಗಳನ್ನು ತಲುಪಿಸಿದ ಕೀರ್ತಿಯೂ ಈ ಕಾಲಕ್ಕಿದೆ. ಜಮಾಅತ್ತಿನ ವಾರ್ಷಿಕ ಜಲ್ಸಾ ಮತ್ತು ಕಾರ್ಯಕ್ರಮಗಳಿಗೆ ವಾರ್ಷಿಕ ಜಲ್ಸಾ ಮತ್ತು ಪಕ್ಷದ ಕಾರ್ಯಕ್ರಮಗಳಿಗೆ ದೊಡ್ಡ ಪ್ಲಾಟ್‌ಗಳ ನೋಂದಣಿಯನ್ನು ಜಮಾಅತ್ತಿನ ಹೆಸರಿನಲ್ಲಿ ಮಾಡಲಾಯಿತು, ಈ ಅವಧಿಯಲ್ಲಿ ಮುಬಲ್ಲಿಗೀನ್ (ಬೋಧಕರಿ)ಗೆ ತರಬೇತಿ ನೀಡಲು ವಿಶ್ವವಿದ್ಯಾನಿಲಯ ಗಳನ್ನು ತೆರೆಯಲಾಯಿತು, ವಾಗ್ದತ್ತ ಮಸೀಹರ ಸಂದೇಶವನ್ನು ಇಂದಿನ ಖಲೀಫ ರವರ ಮೂಲಕ ಯುರೋಪಿನ ಮೂಲೆಗಳಿಗೆ ಹರಡುವ ಯೋಜನೆಗಳನ್ನು ಸಿದ್ಧಪಡಿಸಲಾಯಿತು.

ಹಝ್ರತ್ ಖಲೀಫತುಲ್ ಮಸೀಹ್ ಅವರ ಉತ್ತರಾಧಿಕಾರಿಗಳ ಮೂಲಕ ತೆಹ್ರೀಕೆ ಜದೀದ್ ಮತ್ತು ವಕ್ಫ್ ಜದೀದ್. ಯುರೋಪಿನಲ್ಲಿ ಅಂಗೀಕರಿಸಲಾಯಿತು. ಖಿಲಾಫತ್‌ನ ಧ್ವನಿಯು ವಸೀಯ್ಯತ್ ವ್ಯವಸ್ಥೆಗೆ ಹೊಸ ಜೀವವನ್ನು ನೀಡಿತು. ಮತ್ತು ವಸೀಯತ್ ಮಾಡಿದವರ ಸಂಖ್ಯೆಯಲ್ಲಿನ ಹೆಚ್ಚಳವು ಆ ಸಂಸ್ಥೆಗಳ ಪ್ರಯತ್ನದಿಂದ ಕೂಡಿದೆ. ವಕ್ಫೇನೌ ಯೋಜನೆಯ ಮರವನ್ನು ನೆಡಲಾಯಿತು. ಹೊಸ ಯೋಜನೆಯ ಸಸ್ಯ ಮತ್ತು ಅದರ ಶಾಖೆಗಳು ವಿವಿಧ ದೇಶಗಳಲ್ಲಿ ಬೆಳೆದು ಅರಳಿದವು. ಇದು ಖಿಲಾಫತಿನ ಅನುಗ್ರಹದಿಂದ ಆಗಿದೆ. ಆದರೆ ಇದು ಈ ಪ್ರದೇಶದ ಈ ಭಾಗದಲ್ಲಿ ಪ್ರಾರಂಭವಾಯಿತು. ದೊಡ್ಡ ದೊಡ್ಡ ಜಲ್ಸಾ ಸಮಾರಂಭಗಳ ದೃಶ್ಯಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಕುಳಿತು ಜಗತ್ತು ಕಂಡದ್ದು ಯುರೋಪಿನಿಂದಲೇ. 2001 ರಲ್ಲಿ ಜರ್ಮನಿಯಲ್ಲಿ ವಾರ್ಷಿಕ ಜಲ್ಸಾ ಸಮಾರಂಭ ನಡೆಯಿತು. 2001 ರಲ್ಲಿ ಗ್ರೇಟ್ ಬ್ರಿಟನ್‌ನಲ್ಲಿ (Foot & Mouth) ಕಾಲು, ಬಾಯಿ ರೋಗದ ಹರಡುವಿಕೆಯಿಂದಾಗಿ, ಗ್ರೇಟ್ ಬ್ರಿಟನ್‌ನಲ್ಲಿ ಜಲ್ಸಾವನ್ನು ನಡೆಸಲು ಸಾಧ್ಯವಾಗಲಿಲ್ಲ, ನಂತರ ಹಝ್ರತ್ ಖಲೀಫತುಲ್ ಮಸೀಹ್‌ರವರು ಜರ್ಮನಿ ರಾಷ್ಟ್ರೀಯ ಜಲ್ಸಾ ಸಮಾರಂಭವನ್ನು ನಡೆಸಲು ನಿರ್ಧರಿಸಿದರು.

ಈ ಸಂದರ್ಭದಲ್ಲಿ ಖಲೀಫತುಲ್ ಮಸೀಹ್ ರವರು ಜರ್ಮನಿಗೆ ಭೇಟಿ ನೀಡಿ ಜರ್ಮನಿಯ ಜಮಾಅತ್ತನ್ನು ಜೀವಂತಗೊಳಿಸಿದರು. ಈ ಸಭೆಯು ಮ್ಯಾನ್‌ಹೈಮ್‌ನ ಮೇ ಮಾರ್ಕೆಟ್‌ನಲ್ಲಿ ನಡೆಯಿತು ಮತ್ತು 60 ಕ್ಕೂ ಹೆಚ್ಚು ದೇಶಗಳ 48,600 ಜನರು ಇದರಲ್ಲಿ ಭಾಗವಹಿಸಿದ್ದರು. ಮೊದಲ ಬಾರಿಗೆ ಜಾಗತಿಕ ಪ್ರತಿಜ್ಞೆ ಸಮಾರಂಭವೂ ನಡೆಯಿತು. (ಅಲ್–ಫಜಲ್ ಇಂಟರ್‌ನ್ಯಾಶನಲ್ 7ನೇ ಡಿಸೆಂಬರ್ 2001, ಪುಟ 1ರಿಂದ ಆಯ್ದುಕೊಳ್ಳಲಾಗಿದೆ)

ಅಲ್ ಫಜಲ್ ಆನ್‌ಲೈನ್‌ನಲ್ಲಿ ಪ್ರಕಟವಾಗುವ ಮೂಲಕ ಪ್ರಪಂಚದ ಮನೆಗಳನ್ನು ತಲುಪುವ ಅವಕಾಶ ಒದಗಿತು. ಈ ಪವಾಡವು ಯುರೋಪಿನಲ್ಲೂ ಸಂಭವಿಸಿತು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರು ಆನ್‌ಲೈನ್‌ನಲ್ಲಿ ಅಲ್–ಫಜಲ್ ದಿನಪತ್ರಿಕೆ ಅನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಹೇಳಿದಂತೆ. ಈ ಸಂದರ್ಭದಲ್ಲಿ:ಅಲ್–ಫಜಲ್‌ನ 106 ವರ್ಷಗಳು ಪೂರ್ಣಗೊಂಡ ನಂತರ, ಅಲ್–ಫಜಲ್‌ನ ಆನ್‌ಲೈನ್ ಆವೃತ್ತಿಯು ಲಂಡನ್‌ನಿಂದ ಪ್ರಾರಂಭವಾಗುತ್ತಿದೆ ಮತ್ತು ಈ ದಿನಪತ್ರಿಕೆ ಅಲ್–ಫಜಲ್ ಅನ್ನು 106 ವರ್ಷಗಳ ಹಿಂದೆ ಹಝ್ರತ್ ಮುಸ್ಲೆಹ್ ಮಊದ್(ರ) ಅವರ ಅನುಮತಿ ಮತ್ತು ಪ್ರಾರ್ಥನೆಯೊಂದಿಗೆ 18 ಜೂನ್ 1913 ರಂದು ಪ್ರಕಟಿಸಲಾಯಿತು. ಪಾಕಿಸ್ತಾನದ ಸ್ಥಾಪನೆಯ ನಂತರ ಕೆಲವು ಕಾಲ ಲಾಹೋರ್‌ನಿಂದ ಪ್ರಕಟವಾಗುತ್ತಲೇ ಇತ್ತು. ನಂತರ ಅದು ಹಝ್ರತ್ ಮುಸ್ಲೆಹ್ ಮೌದ್(ರ) ಅವರ ನೇತೃತ್ವದಲ್ಲಿ ರಬ್ವಾದಿಂದ ಹೊರಬರಲು ಪ್ರಾರಂಭಿಸಿತು. ಲಂಡನ್‌ನ ಈ ಪುರಾತನ ಉರ್ದು ದಿನಪತ್ರಿಕೆಯ ಅಲ್ ಫಜ್ಲ್ ಆನ್‌ಲೈನ್ ಆವೃತ್ತಿಯು 13 ಡಿಸೆಂಬರ್ 2019 ರಿಂದ ಪ್ರಾರಂಭವಾಗಿದೆ. ಇಂದು, ಇನ್‌ಶಾಅಲ್ಲಾಹ್ ಇದನ್ನು ಪ್ರಾರಂಭಿಸಲಾಗುವುದು ಇದು ಪ್ರಪಂಚದಾದ್ಯಂತ ಸುಲಭವಾಗಿ ಅಂತರ್ಜಾಲದ ಮೂಲಕ alfazlonline.org ನಲ್ಲಿ ಲಭ್ಯವಿರುತ್ತದೆ. ಇದರ ವೆಬ್‌ಸೈಟ್ alfazlonline.org ಸಿದ್ಧವಾಗಿದೆ ಮತ್ತು ಅದರ ಮೊದಲ ಸಂಚಿಕೆಯೂ ಲಭ್ಯವಿದೆ. ಅದರಲ್ಲಿ ಅಲ್–ಫಝ್ಲ್‌ನ ಮಹತ್ವ ಮತ್ತು ಸರ್ವಶಕ್ತನಾದ ಅಲ್ಲಾಹನ ಉಪದೇಶಗಳು ಎಂಬ ಶೀರ್ಷಿಕೆಯಡಿಯಲ್ಲಿ ಪವಿತ್ರ ಖುರ್ ಆನಿನ ಅತ್ಯುತ್ತಮವಾದ ಮಹತ್ವ ಮತ್ತು ಉಪಯುಕ್ತತೆಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒಳಗೊಂಡಿದೆ ಮತ್ತು ಪ್ರವಾದಿ(ಸ) ಅವರ ಹದೀಸ್ ಕೂಡ ಇರುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಉಲ್ಲೇಖಗಳು ಸಹ ಇರುತ್ತವೆ. ಅಂತೆಯೇ, ಕೆಲವು ಅಹ್ಮದಿ ಪ್ರಬಂಧಕಾರರ ಪ್ರಬಂಧಗಳು ಮತ್ತು ಇತರ ಪ್ರಮುಖ ಲೇಖನಗಳು ಇವೆ. ಅಹ್ಮದಿ ಕವಿಗಳಿಂದ ಮತ್ತು ಕವಿತೆಗಳು ಕೂಡ ಇರುತ್ತವೆ. ವೆಬ್‌ಸೈಟ್ ಹೊರತುಪಡಿಸಿ, ಈ ಪತ್ರಿಕೆ ಟ್ವಿಟರ್‌ನಲ್ಲಿಯೂ ಲಭ್ಯವಿದೆ. (13 ಡಿಸೆಂಬರ್ 2019 ರಂದು ನೀಡಿದ ಶುಕ್ರವಾರದ ಧರ್ಮೋಪದೇಶವು, 3 ಜನವರಿ 2020 ರಂದು ಅಲ್–ಫಜಲ್ ಇಂಟರ್‌ನ್ಯಾಶನಲ್‌ನಿಂದ ಪ್ರಕಟಿಸಲ್ಪಟ್ಟಿದೆ,

ಪುಟ 8)

ಪ್ರಪಂಚದಾದ್ಯಂತ ತನ್ನ ಕೊಂಬೆಗಳಿಂದ, ವರ್ಣರಂಜಿತ ಹೂವುಗಳಿಂದ, ಹಣ್ಣುಗಳಿಂದ ಹರಡಿರುವ ಸಮೃದ್ಧ ಮತ್ತು ಹಸಿರು ಮರವನ್ನು ಆವರಿಸುವುದು ಮನುಷ್ಯನ ಕೆಲಸವಲ್ಲ. ಇಲ್ಲಿ ಎಲ್ಲವನ್ನೂ ಪ್ರಸ್ತಾಪಿಸುವುದು ಸಾಧ್ಯವಿಲ್ಲ. ಆದರೆ ಕೆಲವನ್ನು ಮಾತ್ರ ವಿವರವಾಗಿ ನೀಡಲಾಗಿದೆ:

**ಯುರೋಪ್ ನಲ್ಲಿ ಜಮಾಅತಿನ ಕಾರ್ಯಾಚರಣೆಗಳ ಆರಂಭ ಮತ್ತು ಖಲೀಫರ ಭೇಟಿಗಳು**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಿಳಿಸಿದಂತೆ ಖಲೀಫರ ಭೇಟಿಗಳು ಸಂಭವಿಸಿದವು ಮತ್ತು ಅವರ ನಂತರ ಎರಡನೇ ಶಕ್ತಿಯ ನೋಟವು ಅವರ ಮೊದಲ ಖಲೀಫ ಹಝ್ರತ್ ಖಲೀಫತ್ ಮಸಿಹ್ ಅಲ್-ಅವ್ವಲ್(ರ) ರವರ ರೂಪದಲ್ಲಿ ಕಾಣಿಸಿಕೊಂಡಿತು. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ, 1913ರಲ್ಲಿ ಹಝ್ರತ್ ಚೌಧರಿ ಫತೇಹ್ ಮುಹಮ್ಮದ್ ಸಿಯಾಲ್ ಸಾಹಿಬ್ ಅವರನ್ನು ಉಪದೇಶದ ಉದ್ದೇಶಕ್ಕಾಗಿ ಈ ದೇಶಕ್ಕೆ ಕಳುಹಿಸಿದಾಗ ಜಮಾಅತ್ ಅಹ್ಮದಿಯಾದ ಮೊದಲ ಮಿಷನ್ ಇಂಗ್ಲೆಂಡ್‌ನಲ್ಲಿ ಪ್ರಾರಂಭವಾಯಿತು.

ಅಲ್ಹಮ್ದುಲಿಲ್ಲಾಹ್, ಹೀಗೆ ಭಾರತ ಮತ್ತು ಯುರೋಪಿನ ಹೊರಗಿನ ಮೊದಲ ಮಿಷನ್‌ಗೆ ಅಡಿಪಾಯ ಹಾಕಲಾಯಿತು, ಅದರ ನಂತರ, ಅಲ್ಲಾಹನು ಅನುಗ್ರಹಗಳನ್ನು ವರ್ಷಿಸಲು ಪ್ರಾರಂಭಿಸಿದನು, ಅವುಗಳನ್ನು ಎಣಿಸಲು ಮತ್ತು ಅವುಗಳನ್ನು ಒಂದೇ ಲೇಖನದಲ್ಲಿ ಸಂಗ್ರಹಿಸಲು ಮತ್ತು ಬರೆಯಲು ಕಷ್ಟವಾಗುತ್ತದೆ.

ಯುರೋಪ್ ನೆಲದಲ್ಲಿ ಖಲೀಫರ ಕಾಲದಲ್ಲಿ ಪ್ರಾರಂಭವಾದ ಅಥವಾ ಅಭಿವೃದ್ಧಿಪಡಿಸಿದ ಕೆಲವು ಉಪದೇಶ ಕೇಂದ್ರಗಳು ಮತ್ತು ಮಿಷನ್ ಹೌಸ್‌ಗಳ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗುತ್ತದೆ. ಹೀಗಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜೀವಿತಾವಧಿಯಲ್ಲಿ ಸತ್ಯದ ಸಂದೇಶವು ಅಮೆರಿಕದ ಭೂಮಿಯನ್ನು ತಲುಪಿತ್ತು, ಆದರೆ 1920 ರಲ್ಲಿ, ಅಹ್ಮದಿಯಾ ಮಿಷನ್ ಅನ್ನು ಎರಡನೇ ಖಲೀಫರ ಸಮಯದಲ್ಲಿ ಅಮೆರಿಕಾದಲ್ಲಿ ಸ್ಥಾಪಿಸಲಾಯಿತು. ಅಲ್ಲಿಗೆ ಹಝ್ರತ್ ಮುಫ್ತಿ ಮೊಹಮ್ಮದ್ ಸಾದಿಕ್ ಸಾಹಿಬ್ ಧರ್ಮ ಪ್ರಚಾರಕರಾಗಿ ಭೇಟಿ ನೀಡಿದಾಗ. 1924 ರಲ್ಲಿ, ಹಝ್ರತ್ ಮುಸ್ಲೆಹ್ ಮಊದ್(ರ) ಯುರೋಪಿನ ಸ್ಮರಣೀಯ ಪ್ರವಾಸವನ್ನು ಮಾಡಿದರು ಮತ್ತು ಗ್ರೇಟ್ ಬ್ರಿಟನ್‌ಗೆ ಭೇಟಿ ನೀಡಿದರು, ಇಟಲಿ ಮತ್ತು ಫ್ರಾನ್ಸ್ ಮೂಲಕ ಹಾದುಹೋಗುತ್ತಾರೆ ಮತ್ತು ಈ ಎಲ್ಲಾ ದೇಶಗಳಿಗೆ ನೇರವಾಗಿ ಮುಹಮ್ಮದ್(ಸ) ರವರ ಮಸೀಹರ ಧ್ವನಿಯನ್ನು ತಲುಪಿಸಿದರು. ತೆಹ್ರೀಕ್-ಎ-ಜದೀದ್‌ನ ಸ್ಥಾಪನೆಯ ನಂತರ ಜಮಾಅತ್ ಅಹ್ಮದಿಯಾವು ತಬ್ಲೀಗ್‌ನ ಹೊಸ ಯುಗವನ್ನು ಪ್ರವೇಶಿಸಿತು. 1934 ರಿಂದ 1937 ರವರೆಗೆ, ಚೀನಾ, ಹಂಗೇರಿ, ಅಲ್ಬೇನಿಯಾ, ಯುಗೊಸ್ಲಾವಿಯಾ, ಇಟಲಿ ಮತ್ತು ಪೋಲೆಂಡ್‌ನಲ್ಲಿ ಜಮಾತ್ ಮಿಷನ್‌ಗಳನ್ನು ಸ್ಥಾಪಿಸಲಾಯಿತು. ಅದರ ನಂತರ, ಅಲ್ಪಾವಧಿಯಲ್ಲಿ, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಹಾಲೆಂಡ್, ಜರ್ಮನಿ ಮತ್ತು ಸ್ಕಾಟ್ಲೆಂಡ್ ಸೇರಿದಂತೆ ಹಲವಾರು ದೇಶಗಳಲ್ಲಿ ಜಮಾತಿನ ಮಿಷನ್ಗಳನ್ನು ಸ್ಥಾಪಿಸಲಾಯಿತು. ಏಪ್ರಿಲ್ 1954 ರಲ್ಲಿ, ಹಝ್ರತ್ ಮುಸ್ಲೆಹ್ ಮಊದ್(ರ) ಸ್ವಿಟ್ಜರ್ಲೆಂಡ್, ಹಾಲೆಂಡ್, ಇಟಲಿ, ಆಸ್ಟ್ರಿಯಾ, ಜರ್ಮನಿ ಮತ್ತು ಇಂಗ್ಲೆಂಡ್ ಗೆ ಮತ್ತೆ ಭೇಟಿ ನೀಡಿದರು, ಈ ಸಮಯದಲ್ಲಿ ಅವರು ಪ್ರತಿ ಸ್ಥಳದಲ್ಲಿ ಭಾಷಣ ಮತ್ತು ಜಲ್ಸಾಗಳ ಮೂಲಕ ಸಂದೇಶವನ್ನು ರವಾನಿಸಿದರು. 1956ರಲ್ಲಿ, ಹುಝೂರ್ ರವರು ಸ್ಕಾಂಡಿನೇವಿಯಾ ದೇಶಗಳಿಗೆ ಬೋಧಕರನ್ನು ಕಳುಹಿಸಿದರು ಮತ್ತು ಅವರು ಕಳುಹಿಸಿದ ಬೋಧಕರ ಮೂಲಕ ಅಹ್ಮದಿಯತ್‌ನ ಸಂದೇಶವು ಸ್ವೀಡನ್, ಡೆನ್ಮಾರ್ಕ್ ಮತ್ತು ನಾರ್ವೆಯನ್ನು ತಲುಪಿತು.

ಮೂರನೇ ಖಿಲಾಫತ್ ಅವಧಿಯಲ್ಲಿಯೂ ಅಹ್ಮದಿಯಾ ಜಮಾಅತ್ ಮುನ್ನಡೆ ಮತ್ತು ಏಳಿಗೆಯನ್ನು ಮುಂದುವರೆಸಿತು. 1973 ರಲ್ಲಿ, ಹಝ್ರತ್ ಖಲೀಫತುಲ್ ಮಸಿಹ್ III (ಯುರೋಪ್‌ಗೆ ಭೇಟಿ ನೀಡಿದ್ದರು, ಆ ಸಮಯದಲ್ಲಿ ಅವರು ಇಂಗ್ಲೆಂಡ್, ಹಾಲೆಂಡ್, ಜರ್ಮನಿ, ಸ್ವಿಟ್ಜರ್ಲೆಂಡ್, ಇಟಲಿ, ಸ್ವೀಡನ್ ಮತ್ತು ಡೆನ್ಮಾರ್ಕ್‌ಗೆ ಬೇಟಿ ನೀಡಿದ್ದರು) 1975 ರಲ್ಲಿ, ಹುಝೂರ್ ರವರು ಮತ್ತೆ ಯುರೋಪ್ ಗೆ ಭೇಟಿ ನೀಡಿದರು. 1976 ರಲ್ಲಿ, ಅವರು ಅಮೆರಿಕ ಮತ್ತು ಕೆನಡಾಕ್ಕೆ ಭೇಟಿ ನೀಡಿದರು, ಅಲ್ಲಿಂದ ಅವರು ಇಂಗ್ಲೆಂಡ್, ಸ್ವೀಡನ್, ನಾರ್ವೆ, ಡೆನ್ಮಾರ್ಕ್, ಪಶ್ಚಿಮ ಜರ್ಮನಿ, ಸ್ವಿಟ್ಜರ್ಲೆಂಡ್ ಮತ್ತು ಹಾಲೆಂಡ್‌ಗೆ ಭೇಟಿ ನೀಡಿದರು. 1980 ರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ III ಮೂರು ಖಂಡಗಳು ಮತ್ತು 13 ದೇಶಗಳಿಗೆ ಭೇಟಿ ನೀಡಿದರು. ಈ ದೇಶಗಳಲ್ಲಿ ಪಶ್ಚಿಮ ಜರ್ಮನಿ, ಸ್ವಿಟ್ಜರ್ಲೆಂಡ್, ಆಸ್ಟ್ರಿಯಾ, ಡೆನ್ಮಾರ್ಕ್, ಸ್ವೀಡನ್, ನಾರ್ವೆ, ಹಾಲೆಂಡ್, ಚೀನಾ, ನೈಜರ್ ಅಥವಾ ಘಾನಾ, ಕೆನಡಾ, ಅಮೇರಿಕಾ ಮತ್ತು ಇಂಗ್ಲೆಂಡ್ ಸೇರಿವೆ. ಈ ಭೇಟಿಯ ಸಮಯದಲ್ಲಿ, ಅಂದರೆ ಅಕ್ಟೋಬರ್ 19, 1980 ರಂದು, ಹುಝೂರ್ ರವರು ಅವರು ಸ್ಪೇನಿನಲ್ಲಿ ಮಸೀದಿ ಬಿಷಾರತ್ ಅನ್ನು ಸ್ಥಾಪಿಸಿದರು. (ಅಲ್‌ಫಝಲ್ ಇಂಟರ್ನ್ಯಾಷನಲ್ 22 ಮೇ 2020, ಪುಟ 29)

ಖಿಲಾಫತ್ ರಾಬಿಯಾ ಅವಧಿಯಲ್ಲಿ ಅಹ್ಮದೀಯಾದ ದೃಢೀಕರಣವನ್ನು ಮನವರಿಕೆ ಮಾಡಿ ಭಾಗಿಯಾದ ದೇಶಗಳೆಂದರೆ ಉಕ್ರೇನ್, ತಾತರಿಸ್ತಾನ್, ರೊಮೇನಿಯಾ, ಬಲ್ಗೇರಿಯಾ ಮೆಸಿ ಡೋನಿಯಾ, ಸ್ಲೊವೇನಿಯಾ, ಬೋಸ್ನಿಯಾ, ಜೆಕ್ ರಿಪಬ್ಲಿಕ್, ಕೊಸೊವೊ, ಮಾಲ್ಟಾ, ಅದೇ ರೀತಿಯಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಅವರ ಕಾಲದಲ್ಲಿ ಸ್ವತಃ ಪ್ರಪಂಚದ ಜನರನ್ನು ನೇರವಾಗಿ ಭೇಟಿ ಮಾಡಿದರು. ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಬುದ್ಧಗೊಳಿಸಲು ಪ್ರಯತ್ನಿಸಿದರು. ಆ ದೇಶಗಳಲ್ಲಿ ನಾರ್ವೆ, ಸ್ವೀಡನ್, ಡೆನ್ಮಾರ್ಕ್, ಜರ್ಮನಿ, ಆಸ್ಟ್ರೇಲಿಯಾ ಸ್ವಿಟ್ಜರ್ಲೆಂಡ್, ಫ್ರಾನ್ಸ್, ಲಕ್ಸೆಂಬರ್ಗ್, ಹಾಲೆಂಡ್, ಚೀನಾ, ಕೆನಡಾ, ಬೆಲ್ಜಿಯಂ ಮತ್ತು ಐರ್ಲೆಂಡ್ ಸೇರಿವೆ. ಅವುಗಳಲ್ಲಿ, ಖಲೀಫತುಲ್ ಮಸೀಹ್ ಮೊದಲ ಬಾರಿಗೆ ಪ್ರವೇಶಿಸಿದ ಕೆಲವು ದೇಶಗಳೂ ಇವೆ. ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರವರ ನೇತೃತ್ವದಲ್ಲಿ ಅಹ್ಮದಿಯಾ ಜಮಾತ್ ಪ್ರಗತಿಯಲ್ಲಿದೆ. ಅವರ ಖಿಲಾಫತ್ ಅವಧಿಯಲ್ಲಿ, ಜಿಬ್ರಾಲ್ಟರ್, ಎಸ್ಟೋನಿಯಾ, ಮಾಂಟೆನೆಗ್ರೊ, ಲಾಟ್ವಿಯಾ, ಐಸ್ಲ್ಯಾಂಡ್, ಸೆರ್ಬಿಯಾ ಲಿಥುವೇನಿಯಾ ಮತ್ತು ಯುರೋಪಿನ ಕೆಲವು ದೇಶಗಳು ಈ ಸೊಂಪಾದ ಮರದ ಕೊಂಬೆಗಳಾಗಿ ಮಾರ್ಪಟ್ಟಿವೆ ಮತ್ತು ಅದರ ಫಲಭರಿತ ಶಾಖೆಗಳಾಗಿ ಮಾರ್ಪಡುತ್ತಾ ಇದೆ. 2019 ರ ವಾರ್ಷಿಕ ಜಲ್ಸಾ ಸಮಾರಂಭದ ಸಂದರ್ಭದಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರು ಹೇಳಿದರು, ಸರ್ವಶಕ್ತನಾದ ದೇವನ ಕೃಪೆಯಿಂದ ವಿಶ್ವದ 213 ದೇಶಗಳಲ್ಲಿ ಅಹ್ಮದೀಯತ್ತಿನ ಸಸ್ಯಗಳನ್ನು ನೆಡಲಾಗಿದೆ. ಸರ್ವಶಕ್ತ ದೇವನ ದಯೆಯಿಂದ, ಕಳೆದ 35 ವರ್ಷಗಳಲ್ಲಿ 122 ದೇಶಗಳನ್ನು. ಅಲ್ಲಾಹನು ಜಮಾತ್‌ಗೆ ನೀಡಿದ್ದಾನೆ.

ಪ್ರಪಂಚದ ಪ್ರತಿಯೊಂದು ಮೂಲೆಯಲ್ಲಿ ಇಸ್ಲಾಂ ಧರ್ಮದ ನಿಜವಾದ ಬೋಧನೆಯನ್ನು ಸ್ಥಾಪಿಸುವ ಸಲುವಾಗಿ, ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದುಲ್ಲಾಹ್ ತಅಲ್ ಲಾ ಬಿ ನ ಅಜೀಜ್) ರವರ ಈ ಭೇಟಿಗಳಲ್ಲಿ ಕೆಲವು ಯುರೋಪಿಯನ್ ದೇಶಗಳಾದ ಜರ್ಮನಿ, ಫ್ರಾನ್ಸ್, ಐರ್ಲೆಂಡ್, ಹಾಲೆಂಡ್, ಬೆಲ್ಜಿಯಂ, ಡೆನ್ಮಾರ್ಕ್, ಸ್ವೀಡನ್, ನಾರ್ವೆ, ಸ್ಪೇನ್ ಮತ್ತು ಇತರ ದೇಶಗಳು ಸೇರಿವೆ. (ಅಲ್ ಫಝಲ್ ಇಂಟರ್‌ನ್ಯಾಶನಲ್, ಮೇ 22, 2020, ಪುಟ 29 ರಿಂದ ತೆಗೆಯಲಾಗಿದೆ)

**ಯುರೋಪ್ ಕಾಂಟಿನೆಂಟಲ್‌ನಲ್ಲಿ ಮಸೀದಿಗಳ ನಿರ್ಮಾಣದ ಒಂದು ನೋಟ.**

ಎರಡನೇ ಖಿಲಾಫತ್ ಅವಧಿಯಲ್ಲಿ ಸರ್ವಶಕ್ತನಾದ ದೇವನು ತನ್ನ ಮಸೀದಿಯನ್ನು ನಿರ್ಮಿಸಲು ಜಮಾತ್ ಅಹ್ಮದಿಯಾಕ್ಕೆ ಲಂಡನ್‌ನಲ್ಲಿ ಸ್ಥಳವನ್ನು ದಯಪಾಲಿಸಿದನು, ಈ ಸಂತೋಷದ ಸಂದರ್ಭದಲ್ಲಿ, ಹುಜೂರ್(ರ) ರವರು 9 ಡಿಸೆಂಬರ್ 1920 ರಂದು ಡಾಲ್‌ಹೌಸಿಯಲ್ಲಿ ಜಲ್ಸಾವನ್ನು ನಡೆಸಿದರು ಮತ್ತು ಮಸೀದಿಯನ್ನು ನಿರ್ಮಿಸಲು ಆದೇಶ ನೀಡಿದರು.

ನಿರ್ಮಾಣ ಗೊಂಡ ಮಸೀದಿಗೆ ಮಸ್ಜಿದ್ ಫಝ್ಲ್ ಎಂದು ಹೆಸರಿಸಲಾಯಿತು. ಹಝ್ರತ್ ಖಲೀಫತುಲ್ ಮಸಿಹ್ ಸಾನಿ (ರ) 22 ಆಗಸ್ಟ್ 1924 ರಂದು ಲಂಡನ್‌ಗೆ ಬಂದರು. ವೆಂಬ್ಲಿ ಸಮ್ಮೇಳನ ಮತ್ತು ಇತರ ಅನೇಕ ಉಪದೇಶ ಕಾರ್ಯಕ್ರಮಗಳನ್ನು ನಡೆಸಲಾಯಿತು ಮತ್ತು ಈ ಸಮಯದಲ್ಲಿ ಹಝ್ರತ್ ಖಲೀಫತುಲ್ ಮಸಿಹ್ ಸಾನಿ(ರ) ರವರು ಅಕ್ಟೋಬರ್ 19, 1924, ಭಾನುವಾರದಂದು ಮಸ್ಜಿದ್ ಫಝಲ್‌ನ ಅಡಿಪಾಯವನ್ನು ಹಾಕಿದರು. ಫೆಬ್ರವರಿ 22, 1957 ರಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ)ರವರು ಮಸೀದಿ ಫಝಲ್ ಉಮರ್ ಹ್ಯಾಂಬರ್ಗ್ನನ ಅಡಿಪಾಯವನ್ನು ಹಾಕಿದರು ಮತ್ತು ಅದನ್ನು ಜೂನ್ 22, 1957 ರಂದು ಉದ್ಘಾಟಿಸಲಾಯಿತು.

ಹಝ್ರತ್ ಚೌಧರಿ ಸರ್ ಜಫರುಲ್ಲಾ ಖಾನ್ ಸಾಹಿಬ್ ಅವರು ಜುಲೈ 1967 ರಂದು ಉದ್ಘಾಟಿಸಿದರು, ಹಝ್ರತ್ ಖಲೀಫತುಲ್ ಮಸೀಹ್-

ಸಾನಿ(ರ) ರವರು, ಆಗಸ್ಟ್ 20, 1976 ರಂದು ಡೆನ್ಮಾರ್ಕ್‌ನ ಕೋಪನ್ ಹೇಗನ್‌ನಲ್ಲಿ ನುಸ್ರತ್ ಜಹಾನ್ ಮಸೀದಿಯನ್ನು ಉದ್ಘಾಟಿಸಿದರು,

ಆಗಸ್ಟ್ 20, 1976 ರಂದು, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರು ಸ್ವೀಡನಿನ (Göthenburg) ಗೋಥೆನ್‌ಬರ್ಗ್‌ನಲ್ಲಿ ನಾಸಿರ್ ಮಸೀದಿಯನ್ನು ಉದ್ಘಾಟಿಸಿದರು. 1980 ರಲ್ಲಿ, ಹಝ್ರತ್ ಖಲೀಫತುಲ್ ಮಸಿಹ್ ಸಾಲಿಸ್(ರ) ನಾರ್ವೆಯ ಓಸ್ಲೋದಲ್ಲಿ ಮಸೀದಿ ನೂರ್‌ಅನ್ನು ಉದ್ಘಾಟಿಸಿದರು.

ಅಕ್ಟೋಬರ್ 2, 1980 ರಂದು, ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಇಂಗ್ಲೆಂಡ್‌ನ ಬ್ರಾಡ್‌ಫೋರ್ಡ್‌ನಲ್ಲಿ ಬೈತ್ ಅಹ್ಮದ್ ಮಸೀದಿಯನ್ನು ಉದ್ಘಾಟಿಸಿದರು.

ಹಝ್ರತ್ ಖಲೀಫತ್ ಮಸೀಹ್ ಸಾಲಿಸ್(ರ) ಅವರು ಅಕ್ಟೋಬರ್ 9, 1980 ರಂದು ಯುರೋಪಿಗೆ ಅತ್ಯಂತ ಅತ್ಯಾಧುನಿಕ ರೀತಿಯಲ್ಲಿ ಭೇಟಿ ನೀಡಿದರು ಮತ್ತು ಅದನ್ನು ಮಹಾನ್ ಸುವಾರ್ತಾಬೋಧಕರ ಭೇಟಿ ಎಂದು ಕರೆದರು.

ಅಕ್ಟೋಬರ್ 9, 1980 ರಂದು, ಅವರು ತಮ್ಮ ಯುರೋಪ್ ಭೇಟಿಯ ಸಮಯದಲ್ಲಿ ಮಸೀದಿ ಬಶಾರತ್‌ಗೆ ಶಿಲಾನ್ಯಾಸವನ್ನು ಮಾಡಿದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) 700 ವರ್ಷಗಳ ನಂತರ ನಿರ್ಮಿಸಲಾದ ಮಸೀದಿ ಬಿಷಾರತ್ ಅನ್ನು ಸ್ಪೇನಿನ ಪೆಡ್ರೊ ನಗರದಲ್ಲಿ 10 ಅಕ್ಟೋಬರ್ 1982 ರಂದು ಉದ್ಘಾಟಿಸಿದರು. ಫೆಬ್ರವರಿ 24, 1995 ರಂದು ಗ್ರೇಟ್ ಬ್ರಿಟನ್‌ನಲ್ಲಿ ಹೊಸ ಮತ್ತು ವಿಶಾಲವಾದ ಮಸೀದಿಗಾಗಿ ಐದು ಮಿಲಿಯನ್ ಪೌಂಡ್‌ಗಳ ವಾಗ್ದಾನ ಮಾಡಿದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿ (ರ) ರವರು, ಮಾರ್ಚ್ 28, 1999 ರಂದು, ಬೈತ್-ಉಲ್-ಫುತುಹ್ ಉದ್ದೇಶಿತ ಸ್ಥಳದಲ್ಲಿ ಈದ್-ಉಲ್-ಅಧಾ ಪ್ರಾರ್ಥನೆಯನ್ನು ನಡೆಸಿದರು ಮತ್ತು ಅದೇ ವರ್ಷದ ಅಕ್ಟೋಬರ್ 19 ರಂದು, ಹುಝುರ್ ರವರು ಬೈತ್-ಉಲ್-ಫುತುಹ್‌ನ ಅಡಿಪಾಯವನ್ನು ಹಾಕಿದರು. ಫೆಬ್ರವರಿ 16, 2001 ರಂದು, ಹುಝುರ್(ರ) ರವರು ಈ ಮಸೀದಿಗೆ ಇನ್ನೂ ಐದು ಮಿಲಿಯನ್ ಪೌಂಡ್‌ಗಳನ್ನು ವಾಗ್ದಾನ ಮಾಡಿದರು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅಕ್ಟೋಬರ್ 3, 2003 ರಂದು ಇದನ್ನು ಉದ್ಘಾಟಿಸಿದರು

ಈ ಮಸೀದಿಯಲ್ಲಿ ಒಂದೇ ಸಮಯದಲ್ಲಿ 10,000 ಜನರು ಪ್ರಾರ್ಥನೆ ಮಾಡಬಹುದು. ಇದು ಪಶ್ಚಿಮ ಯೂರೋಪಿನ ಅತಿ ದೊಡ್ಡ ಮಸೀದಿಯಾಗಿದೆ.

ಅಕ್ಟೋಬರ್ 5, 1982 ರಂದು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರ) ಇಂಗ್ಲೆಂಡ್‌ನ ಗಿಲ್ಲಿಂಗ್ ಹ್ಯಾಮ್‌ನಲ್ಲಿ ಅಹ್ಮದಿಯಾ ಮಿಷನ್ ಅನ್ನು ಉದ್ಘಾಟಿಸಿದರು. ಅಕ್ಟೋಬರ್ 7, 1982 ರಂದು, ಲಂಡನಿನ ಕ್ರೊಯ್ಡಾನ್‌ನಲ್ಲಿ ಅಹ್ಮದಿಯಾ ಮಿಷನ್ ಬೈತ್-ಉಲ್-ಸುಭಾನ್ ಅನ್ನು ಉದ್ಘಾಟಿಸಿದರು.

1985 ರಲ್ಲಿ ಇಸ್ಲಾಮಾಬಾದ್‌ನ ಟಿಲ್‌ಫೋರ್ಡ್‌ನಲ್ಲಿ ಬೈತುಲ್ ಇಸ್ಲಾಂ ಮಸೀದಿಯನ್ನು ಉದ್ಘಾಟಿಸಿದರು. ಪುನರ್ನಿರ್ಮಾಣದ ನಂತರ, ಮಸೀದಿ ಮುಬಾರಕ್ ಇಲ್ಲಿ ಐದನೇ ಖಿಲಾಪತ್ತಿನ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿತು.

13 ಸೆಪ್ಟೆಂಬರ್ 1985 ರಂದು, ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರ) ಅವರು ಸ್ಪೇಟ್ (ಹಾಲೆಂಡ್) ನಲ್ಲಿ ಹೊಸ ಕೇಂದ್ರ (ಮರ್ಕಜ್) ಬೈತುಲ್ ನೂರ್ ಅನ್ನು ಉದ್ಘಾಟಿಸಿದರು. ಸೆಪ್ಟೆಂಬರ್ 17, 1985 ರಂದು ಅವರು ಜರ್ಮನಿಯ (Koln) ಕಲೋನ್‌ನಲ್ಲಿ ಬೈತುಲ್-ನಸ್ರ್ ಅನ್ನು ಉದ್ಘಾಟಿಸಿದರು. ಮೇ 22, 1986 ರಂದು ಗ್ಲಾಸ್ಗೋದಲ್ಲಿ ಸ್ಕಾಟ್ ಲ್ಯಾಂಡಿನ ಹೊಸ ಅಹ್ಮದಿಯಾ ಮಿಷನ್ ಬೈತ್-ಉರ್-ರಹಮಾನ್ ಅನ್ನು ಉದ್ಘಾಟಿಸಿದರು. 1992ರಲ್ಲಿ, (Gross – Gerau) ಗ್ರಾಸ್-ಗೆರೌ ಜರ್ಮನಿಯಲ್ಲಿ ಬೈತ್ -ಉ -ಶುಕೂರ್ ಮಸೀದಿಯನ್ನು ಉದ್ಘಾಟಿಸಿದರು. (ಅಲ್-ಫಜಲ್ ಇಂಟರ್ನ್ಯಾಷನಲ್ 21 ಮೇ 2021, ಪುಟ 70)

ಹಝ್ರುತ್ ಖಲೀಫತುಲ್ ಮಸೀಹ್ ಖಾಮಿಸ್ (ಅತಬಿಅ) ವರು ನಾರ್ವೆಯ ಮಸೀದಿಯ ಕುರಿತು ಶುಕ್ರವಾರ, ಅಕ್ಟೋಬರ್ 21, 2011 ರಂದು ತಮ್ಮ ಖುತುಬಾದಲ್ಲಿ ಹೇಳಿದರು: "ಖುತ್ಬಾಜುಮಾದಲ್ಲಿ ನೀವೆಲ್ಲರೂ ಕೇಳಿದಂತೆ, ನಾರ್ವೆಯಲ್ಲಿ ನಸರ್ ಮಸೀದಿಯನ್ನು ಉದ್ಘಾಟಿಸಲಾಯಿತು. ಮಾಶಾ ಅಲ್ಲಾಹ್, ಇದು ತುಂಬಾ ಸುಂದರವಾದ ಮಸೀದಿ. ಬೈತ್ ಅಲ್-ಫುತುಹ್ ಮಸೀದಿಯ ನಂತರ, ಈ ಮಸೀದಿಯು ಖಂಡಿತವಾಗಿಯೂ ಯುರೋಪಿನ ಅತಿದೊಡ್ಡ ಮಸೀದಿಯಾಗಿದೆ. ಅಲ್ಲಿನ ಜಮಾಅತ್ ತುಂಬಾ ಚಿಕ್ಕದಾಗಿದೆ, ಆದರೆ ಈ ಮಸೀದಿಯನ್ನು ನೋಡಿದರೆ ಇದು ತುಂಬಾ ದೊಡ್ಡ ಜಮಾಅತ್ ಅಥವಾ ಇದು ತುಂಬಾ ಶ್ರೀಮಂತರ ಜಮಾಅತ್ ಎಂದು ತೋರುತ್ತದೆ, ಆದರೆ ಎರಡೂ ತಪ್ಪು ಅಭಿಪ್ರಾಯಗಳು. ಅದೊಂದು ದೊಡ್ಡ ಜಮಾಅತ್ ಅಲ್ಲ, ಶ್ರೀಮಂತರ ಸಂಖ್ಯೆಯು ಹೆಚ್ಚಿಲ್ಲ ಅದಕ್ಕೆ ಬೇಕಾಗಿರುವುದು ಒಂದು ಕಲ್ಪನೆ ಮತ್ತು ಭಾವನೆ ಮೂಡಿಸುವ ಅಗತ್ಯ ಮಾತ್ರ.

(ಅಕ್ಟೋಬರ್ 21, 2011 ರಂದು ಶುಕ್ರವಾರದ ಖುತ್ಬ ನವೆಂಬರ್ 11, 2011 ರಂದು ಅಲ್-ಫಜಲ್ ಇಂಟರ್ನ್ಯಾಷನಲ್ ಪ್ರಕಟಿತ, ಪುಟ 6)

ಜರ್ಮನಿಯಲ್ಲಿ 100 ಮಸೀದಿಗಳ ಯೋಜನೆಯ ರೂಪರೇಖೆ.

1989ರ ವಾರ್ಷಿಕ ಜರ್ಮನಿಯ ಜಲ್ಸಾದ ಸಂದರ್ಭದಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ರಾಬೀ(ರ) ರವರು ಶತಮಾನೋತ್ಸವದ ಕೃತಜ್ಞತೆಯ ಆಚರಣೆಗೆ ಸಂಬಂಧಿಸಿದಂತೆ ದೇಶಾದ್ಯಂತ 100 ಮಸೀದಿಗಳನ್ನು ನಿರ್ಮಿಸುವ ಯೋಜನೆಯನ್ನು ಅಹ್ಮದಿಯಾ ಜಮಾತ್ ಜರ್ಮನಿಗೆ ನೀಡಿದರು. ಆದ್ದರಿಂದ, 100 ಮಸೀದಿ ಯೋಜನೆಯಡಿಯಲ್ಲಿ ನಿಯಮಿತವಾಗಿ ನಿರ್ಮಿಸಲಾದ ಮೊದಲ ಮಸೀದಿಯನ್ನು ಜರ್ಮನಿಯ ವಿಟ್ಲಿಚ್‌ನಲ್ಲಿ ನಿರ್ಮಿಸಲಾಯಿತು. ಅದರ ಹೆಸರು ಬೈತುಲ್-ಹಮ್ದ್. ಇದರ ಅಡಿಪಾಯವನ್ನು ನವೆಂಬರ್ 1998 ರಲ್ಲಿ ಹಾಕಲಾಯಿತು. ಇದನ್ನು 2000 ರಲ್ಲಿ ಹಜ್ರತ್ ಖಲೀಫತ್ ಮಸೀಹ್ ರಾಬಿ(ರ) ಉದ್ಘಾಟಿಸಿದರು. ರಾತ್ರಿ ಇಲ್ಲಿ ಸಂತೋಷದಿಂದ ಕಳೆದರು. ಮರುದಿನ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಇದರ ಜೊತೆಗೆ, ಮಸ್ಜಿದ್ ನೂರುದ್ದೀನ್ (ಡಾರ್ಮ್‌ಸ್ಟಿಡ್ಟ್), ಮಸ್ಜಿದ್ ನಾಸಿರ್ (ಬ್ರೆಮೆನ್) ಮತ್ತು ಮಸ್ಜಿದ್ ತಾಹಿರ್ (ಕೊಬ್ಲೆಂಜ್)ಗೆ 4ನೇಯ ಖಲೀಫರ ಆಳ್ವಿಕೆಯಲ್ಲಿ ಅಡಿಪಾಯ ಹಾಕಲಾಯಿತು.

ನೂರುದ್ದೀನ್ ಮಸೀದಿಯ (ಡಾರ್ಮ್‌ಸ್ಟಾಡ್ಟ್) ಅಡಿಪಾಯವನ್ನು ಮೇ 11, 2002 ರಂದು ಹಾಕಲಾಯಿತು. ಮಸ್ಜಿದ್ ನಾಸಿರ್ (ಬ್ರೆಮೆನ್) ನ ಅಡಿಪಾಯವನ್ನು ನವೆಂಬರ್ 2001 ರಲ್ಲಿ ಹಾಕಲಾಯಿತು.

ಅದೇ ರೀತಿ 3 ಸೆಪ್ಟೆಂಬರ್ 1999 ರಂದು ಕೀಲ್ ನಗರದಲ್ಲಿ ಮಸೀದಿ ಹಬೀಬ್ ನಿರ್ಮಾಣಕ್ಕಾಗಿ ಪ್ಲಾಟ್ ಖರೀದಿಸಲಾಯಿತು. ಖಿಲಾಫತ್ ರಾಬಿಯಾದ ಸಮಯದಲ್ಲಿ, ಏಪ್ರಿಲ್ 5, 2000 ರಂದು ರೈಡ್‌ಸ್ಟಾಡ್‌ನಲ್ಲಿ ಬೈತುಲ್-ಅಜೀಜ್ ಮಸೀದಿಗೆ ಒಂದು ಪ್ಲಾಟ್, ಆಗಸ್ಟ್ 7, 2000 ರಂದು ಜಾಮಿಯ ಮಸೀದಿ (ಆಫೆನ್‌ಬಾಫ್) ಗಾಗಿ ಒಂದು ಪ್ಲಾಟ್, ಸೇರಿದಂತೆ ಹೆಚ್ಚಿನ ಪ್ಲಾಟ್‌ಗಳನ್ನು ಖರೀದಿಸಲಾಯಿತು. ಏಪ್ರಿಲ್ 20, 2001 ರಂದು ಸಮಿ ಮಸೀದಿ (ಹನೋವರ್) ಗಾಗಿ, ಫ್ಲಾಟ್, ಏಪ್ರಿಲ್ 20, 2001 ಬೈತುಲ್-ಅಲಿಮ್ (ವುರ್ಜ್‌ಬರ್ಗ್) ಗಾಗಿ ಫ್ಲಾಟ್ ಸೆಪ್ಟೆಂಬರ್ 14, 2001 ರಂದು ಖರೀದಿಸಲಾಯಿತು, ಅಲ್-ಮೆಹದಿ ಮಸೀದಿಗೆ (ಯುಸಿಂಗೆನ್) ಫ್ಲಾಟ್ ಫೆಬ್ರವರಿ 12, 2002 ರಂದು ಹಾಗೂ ಬಶೀರ್ ಮಸೀದಿ (ಬೆನ್‌ಶೈಮ್) ಗೆ ಪ್ಲಾಟ್ ಡಿಸೆಂಬರ್ 9, 2002 ರಂದು ಖರೀದಿಸಲಾಯಿತು. ಈ ಪ್ಲಾಟ್‌ಗಳ ಅನುಮೋದನೆಯನ್ನು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ರವರಿಂದ ಪಡೆಯಲಾಗಿತ್ತು. ಆದರೆ ಅವುಗಳು ಖಾಮಿಸ್ (5ನೇ ಖಲೀಫರ) ಯುಗದ ಆರಂಭಿಕ ವರ್ಷಗಳಲ್ಲಿ ನಿರ್ಮಿಸಲಾಯಿತು. (ರೋಜ್ ನಾಮಾ ಅಲ್-ಫಜಲ್ ಲಂಡನ್ ಆನ್‌ಲೈನ್ 4 ಜೂನ್ 2020, ಪುಟ 6 ರಿಂದ ಪಡೆಯಲಾಗಿದೆ) ಜರ್ಮನಿಯಲ್ಲಿ ನಿರ್ಮಿಸಲಾದ ಮಸೀದಿಗಳ ಸಂಖ್ಯೆ 64. ಹಝ್ರತ್ ಖಲೀಫ ತುಲ್-ಮಸೀಹ್ ಖಾಮಿಸ್(ಅಬಿಅ) ರವರು ಯುಕೆ ವಾರ್ಷಿಕ ಜಲ್ಸಾದ ಸಂದರ್ಭದಲ್ಲಿ ಆಗಸ್ಟ್ 6, 2022 ರಂದು ಹೇಳಿದರು. "ಜರ್ಮನಿಯಲ್ಲಿ ಎರಡು ಮಸೀದಿಗಳ ಯೋಜನೆಯಡಿಯಲ್ಲಿ ಐದು ಮಸೀದಿಗಳ ನಿರ್ಮಾಣವು ಈ ವರ್ಷ ಪೂರ್ಣಗೊಂಡಿದೆ. ಹೀಗಾಗಿ ಅವರ ಮಸೀದಿಗಳ ಸಂಖ್ಯೆ 64 ತಲುಪಿದೆ."

(6 ಆಗಸ್ಟ್ 2022 ವಾರ್ಷಿಕ ಜಲ್ಸಾದ ಸಂದರ್ಭದಲ್ಲಿ ಸಯ್ಯದ್ ನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ಅವರ ಭಾಷಣದಿಂದ ಆಯ್ದುಕೊಳ್ಳಲಾಗಿದೆ,)

ನಿರ್ಮಾಣಗೊಂಡ ಮಸೀದಿಗಳ ಜೊತೆಗೆ, ಜರ್ಮನಿಯಲ್ಲಿ ಜಮಾತ್‌ನ ಅನೇಕ ಮಸೀದಿಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ ಮತ್ತು 100 ಮಸೀದಿಗಳು ಅಲ್ಲಾಹನ ಕೃಪೆಯಿಂದ ಖಿಲಾಫತ್ ಅಹ್ಮದಿಯಾದ ಅನುಗ್ರಹೀತ ನೇತೃತ್ವದಲ್ಲಿ ಗುರಿ ಪೂರ್ಣಗೊಳ್ಳುವ ದಿನವು ಹತ್ತಿರವಾಗುತ್ತಿದೆ.

ಹಝ್ರತ್ ಖಲೀಫತುಲ್ ಮಸಿಹ್ ಖಾಮಿಸ್(ಅಬಿಅ) ರವರು ಜರ್ಮನಿಗೆ ಶುಭ ಸುದ್ದಿಯನ್ನು ನೀಡುತ್ತಾ ಹೇಳಿದರು: "ಇನ್ಶಾ

ಅಲ್ಲಾಹ್, ನಮ್ಮ ಮಸೀದಿಗಳ ಪ್ರಕಾಶಮಾನವಾದ ಮಿನಾರ್‌ಗಳು ಕಂಡುಬರುವ ಯುರೋಪಿನ ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಮೊದಲ ದೇಶ ಜರ್ಮನಿ.

ನಮ್ಮ ಮಸೀದಿಗಳು ಇರುವ ಮತ್ತು ಅದರ ಮೂಲಕ ಅಲ್ಲಾನ ಹೆಸರು ಪ್ರದೇಶದ ವಾತಾವರಣದಲ್ಲಿ ಪ್ರತಿಧ್ವನಿಸುತ್ತದೆ, ಅದು ದಾಸರನ್ನು ಅವನ ಭಗವಂತನ ಹತ್ತಿರಕ್ಕೆ ತರುತ್ತದೆ. (ಜೂನ್ 16, 2006 ಶುಕ್ರವಾರ ದಂದು, ಅಲ್-ಫಜಲ್ ಇಂಟರ್ನ್ಯಾಷನಲ್, ಜುಲೈ 7 ರಂದು ಪ್ರಕಟಿಸಿದ ಖುತ್ಬ ಜುಮ 2006, ಪುಟ 6)

ನಾನು ನನ್ನ ಲೇಖನವನ್ನು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರ ಅನುಗ್ರಹೀತ ಮಾತುಗಳೊಂದಿಗೆ ಮುಕ್ತಾಯಗೊಳಿಸುತ್ತೇನೆ. ಅವರು ಹೇಳುತ್ತಾರೆ, ಇನ್ನಾ ಅಲ್ಲಾಹ್, ಪ್ರಗತಿಯು ನಡೆಯಲೇ ಬೇಕಿದೆ. ಅಲ್ಲಾಹನು ನಮ್ಮನ್ನು ಸದಾ ಸ್ಥಿರವಾಗಿರಿಸಲಿ. ಜಮಾತಿನ ಸಂಪೂರ್ಣ ಅಭಿವೃದ್ಧಿಯನ್ನು ನಾವು ನಮ್ಮ ಕಣ್ಣುಗಳಿಂದ ನೋಡುವಂತೆ ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸಲಿ. ಅಲ್ಲಾಹನು ನಮ್ಮ ಕರ್ತವ್ಯಗಳನ್ನು ಪೂರೈಸುವಂತೆ ಮಾಡಲಿ, ಇದರಿಂದ ನಮ್ಮ ಜೀವನದಲ್ಲಿ ಅಲ್ಲಾಹನ ವಾಗ್ದಾನದ ನೆರವೇರಿಕೆಯನ್ನು ನಾವು ನೋಡಬಹುದು. ನಮ್ಮ ಆರಾಧನೆಗಳು, ನಮ್ಮ ಪ್ರಾರ್ಥನೆಗಳು, ನಮ್ಮ ಕಾರ್ಯಗಳು ಅಲ್ಲಾಹನ ಸಂತೋಷವನ್ನು ಪಡೆಯುವಂತಾಗಲಿ. ನಾವು ಖಿಲಾಫತ್ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆಯುವಂತಾಗಲಿ ಮತ್ತು ಅದರ ಬಗ್ಗೆ ಪುನರುತ್ಥಾನದ ದಿನದವರೆಗೆ ನಮ್ಮ ಪೀಳಿಗೆಗೆ ಹೇಳುವವರಾಗಿರಲಿ. ಪುನರುತ್ಥಾನದ ದಿನದವರೆಗೆ ಈ ಅನುಗ್ರಹದಿಂದ, ಪ್ರಯೋಜನ ಪಡೆಯಲಿ ..... ಮತ್ತು ಅಹ್ಮದೀಯರೆಲ್ಲರಿಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬೋಧನೆಗಳನ್ನು ಅವರ ಸರಿಯಾದ ರೀತಿಯಲ್ಲಿ ಅನುಸರಿಸಲು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರನ್ನು ಇನ್ನೂ ಗುರುತಿಸದ ಮುಸ್ಲಿಮರಿಗೆ ಅಲ್ಲಾಹನು ಗುರುತಿಸುವ ಮತ್ತು ಬೈಯ್ಯತ್ ಮಾಡುವ ಅನುಗ್ರಹವನ್ನು ಅವರಿಗೆ ನೀಡಲಿ. ಮತ್ತು ಇಡೀ ಜಗತ್ತಿನಲ್ಲಿ, ಸಾಧ್ಯವಾದಷ್ಟು ಬೇಗ, ನಾವು ಇಸ್ಲಾಮಿನ ಧ್ವಜ ಮತ್ತು ಹಝ್ರತ್ ಮುಹಮ್ಮದ್ ರಸುಲುಲ್ಲಾ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ಧ್ವಜಾ ರೋಹಣವನ್ನು ನೋಡು ವಂತಾಗಲಿ ಮತ್ತು ಇಡೀ ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದನ್ನು ನಾವು ನೋಡುವಂತಾಗಲಿ.**(ಮೇ 28, 2021 ರಂದು ನೀಡಿದ ಶುಕ್ರವಾರದ ಖುತ್ಬ, ಜೂನ್ 18, 2021 ರಂದು ಅಲ್-ಫಜಲ್ ಇಂಟರ್‌ನ್ಯಾಶನಲ್‌ನಿಂದ ಪ್ರಕಟಿಸಲಾಗಿದೆ, ಪುಟ 9)**

************

*(ಪುಟ ಸಂಖ್ಯೆ 27ರ ಉಳಿದ ಭಾಗ)*

ಇಮಾಅಲ್ಲಾಹ್‌ದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಒಳಗೊಂಡ ನಿಯೋಗಗಳು ಈ ರಿಫ್ರೆಶರ್ ಕೋರ್ಸ್‌ನಲ್ಲಿ ಭಾಗವಹಿಸಿದ್ದವು. ಕಾರ್ಯಕ್ರಮದಲ್ಲಿ ಸೆಂಟ್ರಲ್ ಡೆಸ್ಕ್ ಕೇಂದ್ರದ ಉಸ್ತುವಾರಿ ಲಜ್ನಾ ಇಮಾಅಲ್ಲಾಹ್ (ಯುಕೆ) ಭಾಗವಹಿಸಿದ್ದರು. ಈ ರಿಫ್ರೆಶರ್ ಕೋರ್ಸ್‌ನಲ್ಲಿ 6 ದೇಶಗಳ ಒಟ್ಟು 31 ಸದಸ್ಯರು ಭಾಗವಹಿಸಿದ್ದರು.

### ದೃಢತೆ ಮತ್ತು ಧೈರ್ಯದ ಕಥೆ

2008 ರ ಖಲೀಫತ್ ಜುಬಿಲಿ ವರ್ಷದಲ್ಲಿ, ಸಯ್ಯದ್‌ನಾ ಹಝ್ರತ್ ಅಮೀರುಲ್ ಮೊಮಿನೀನ್[ಅತಬಿಅ] ಅವರು ಘಾನಾಗೆ ಭೇಟಿ ನೀಡಲಿದ್ದಾರೆ ಎಂದು ಘೋಷಿಸಲಾಯಿತು, ಖುದ್ದಾಮ್ ವಿವಿಧ ಪ್ರದೇಶಗಳಿಂದ ಒಟ್ಟುಗೂಡಿದರು ಮತ್ತು ಘಾನಾದ ಖಿಲಾಫತ್ ಜುಬಿಲಿಯಲ್ಲಿ ಭಾಗವಹಿಸಲು ಮುನ್ನೂರು ಖುದಾಮ್‌ಗಳ ನಿಯೋಗವು ಬೈಸಿಕಲ್‌ಗಳಲ್ಲಿ ಬುರ್ಕಿನಾ ಫಾಸೊದಿಂದ ಹೊರಟಿತು. ಇದು ತುಂಬಾ ಕಷ್ಟಕರವಾದ ಪ್ರಯಾಣವಾಗಿತ್ತು. ಇದಕ್ಕಾಗಿ ದೃಢತೆ ಮತ್ತು ಧೈರ್ಯದ ಅಗತ್ಯವಿದೆ. ಸೈಕಲ್‌ಗಳ ಸ್ಥಿತಿ ಅಷ್ಟು ದೂರದ ಪ್ರಯಾಣಕ್ಕೆ ಕರೆದೊಯ್ಯುವಂತಿರಲಿಲ್ಲ, ಆದರೆ ಬೈಸಿಕಲ್‌ಗಳ ದುಃಸ್ಥಿತಿಯು ಖುದ್ದಾಮ್‌ನ ಉತ್ಸಾಹದ ಮುಂದೆ ಗೋಡೆಯಾಗಲಿಲ್ಲ ಮತ್ತು ಈ ಖುದ್ದಾಮ್‌ಗಳು ಆಫ್ರಿಕಾ ಮತ್ತು ಜಗತ್ತಿನಲ್ಲಿ ಉದಾಹರಣೆಯಾಗಿ ಹೊರಹೊಮ್ಮಿದವು. ಈ ಕಾರವಾನ್ ವಿಶೇಷ ಅಂಗಿಗಳನ್ನು ಧರಿಸಿ ಪ್ರೇಮದ ಸಂದೇಶವನ್ನು ನೀಡಿದರೆ, ಅದು ಜನರ ಗಮನ ಸೆಳೆಯುತ್ತಿತ್ತು. ಎರಡೂ ದೇಶಗಳ ಮಾಧ್ಯಮಗಳು ಈ ಘಟನೆಗೆ ಸಂಪೂರ್ಣ ವರದಿ ನೀಡಿವೆ. ಮತ್ತು ಜಲ್ಸಾ ಘಾನಾದ ಹಲವಾರು ದಿನಗಳ ನಂತರವೂ ಈ ಸುದ್ದಿ ಮಾಧ್ಯಮಗಳಲ್ಲಿ ಉಳಿದಿದೆ.

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್[ಅತಬಿಅ] ರವರು 1ನೇ ಆಗಸ್ಟ್ 2008 ರ ಶುಕ್ರವಾರದ ತಮ್ಮ ಖುತ್‌ಬ ಜುಮುಅದಲ್ಲಿ ಈ ಘಟನೆಯನ್ನು ಪ್ರೀತಿಯಿಂದ ಉಲ್ಲೇಖಿಸಿದ್ದಾರೆ. ಹಝೂರ್[ಅತಬಿಅ] ಹೇಳುತ್ತಾರೆ:

ಈ ಬಾರಿ ಜರ್ಮನಿಯಿಂದ ಬಂದಿದ್ದ ಸೈಕಲ್ ಸವಾರರ ರ‍್ಯಾಲಿ ಜನಪ್ರಿಯುತೆ ಹಾಗೂ ಮಾಧ್ಯಮಗಳಲ್ಲಿ ಜನಪ್ರಿಯುತೆ ಗಳಿಸಲು ಕಾರಣರಾಗಿದ್ದರು. ಇದು 100 ಯುವ ಸೈಕ್ಲಿಸ್ಟ್‌ಗಳ ಗುಂಪಾಗಿತ್ತು. ಇದು ಈ ಸಮಾಜದಲ್ಲಿ ವಾಸಿಸುವ ಯುವಕರ ಹೃದಯದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆಯ ಅಭಿವ್ಯಕ್ತಿಯಾಗಿದೆ ಮತ್ತು ಅಹ್ಮದಿಯಾ ಖಲೀಫತ್ 100 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ಅವರು 100 ಸೈಕ್ಲಿಸ್ಟ್‌ಗಳ ಗುಂಪನ್ನು ಸಿದ್ಧಪಡಿಸಿದರು ಎಂದು ಅಹ್ಮದಿಯಾ ಖಲೀಫತ್‌ನೊಂದಿಗೆ ಸಂಬಂಧಕ್ಕೆ ಸಾಕ್ಷಿಯಾಗಿದೆ... ಅಮೀರ್ ಸಾಹಿಬ್ ಜರ್ಮನಿ ತನ್ನ ಬೈಸಿಕಲ್ ಸವಾರರನ್ನು ಬಹಳ ರಕ್ಷಣೆಯಲ್ಲಿ ಕರೆತರುತ್ತಾರೆ ನಮ್ಮ ರಸ್ತೆಗಳಲ್ಲಿ ವಿಪರೀತ ರಶ್ ಇರುತ್ತದೆ ಎಂದು ರಕ್ಷಿಸುವ ಕೆಲಸವನ್ನು ಅವರು ಮಾಡುತ್ತಿದ್ದರು, ಈ ಅರ್ಥದಲ್ಲಿ ಅವರು ದೊಡ್ಡ ಸಾಧನೆ ಮಾಡಿದ್ದಾರೆ. ಆದರೆ ಬುರ್ಕಿನಾ ಫಾಸೋವಿನ ಈ ಆಫ್ರಿಕನ್ ಯುವಕರದ್ದು ಸಹ ಬಹಳ ದೊಡ್ಡ ಸಾಧನೆಯಾಗಿದೆ ಅಲ್ಲಿ ರಸ್ತೆಗಳು ಹಾಳಾಗಿವೆ ಮತ್ತು ತಮ್ಮ ಸೈಕಲ್‌ಗಳು ಸಹ ಮುರಿದುಹೋಗಿದ್ದವು ಅಲ್ಲಿನ ಪತ್ರಿಕೆಗಳು 'ಇಂತಹ ಮುರಿದು ಹೋಗಿರುವ ಹಾಳಾಗಿರುವ ಸೈಕಲ್‌ಗಳೊಂದಿಗೆ ಅವರು ತಮ್ಮ ಗುರಿಗೆ ತಲುಪ್ಪುತ್ತಾರೆಯೇ ಎಂದು ವರದಿ ಮಾಡಿವೆ. ಮತ್ತೆ ಅವರಿಗೆ ಆಹಾರದ ಅನುಕೂಲವೂ ಇರಲಿಲ್ಲ. ಮತ್ತು ಬಿಸಿಯೂ ವಿಪರೀತವಾಗಿತ್ತು. ಹಾಗಾಗಿ ಈ ಎಲ್ಲ ಸಂಗತಿಗಳನ್ನು ನೋಡಿದರೆ ಈ ಯುವಕರು ದೊಡ್ಡ ಧೈರ್ಯ ಮಾಡಿದ್ದಾರೆ. ಆದರೆ, ಜಗತ್ತನ್ನು ಎದುರಿಸಬೇಕಾದರೆ ಖಿಲಾಫತ್ ಜೂಬಿಲಿಯ ಜಲ್ಸದಲ್ಲಿ ಸೈಕಲ್‌ನೊಂದಿಗೆ ಭಾಗವಹಿಸುವ ವಿಷಯಲ್ಲಿ ಬುರ್ಕಿನಾಫಾಸೋವಿನ ಖುದ್ದಾಮ್‌ಗಳು ನಂಬರ್ ಒನ್ ಆಗಿದ್ದಾರೆ. (ಖತ್‌ಬ ಜುಮುಅ, 1 ಆಗಸ್ಟ್ 2008 ಖುತ್ಬಾತೆ ಮಸ್ರೂರ್, ಸಂಪುಟ-6, ಪುಟ-312)

### ಊಟ ಸಿಗದಿದ್ದರೂ ಚಿಂತೆಯಿಲ್ಲ

ಹಝ್ರತ್ ಖಲೀಫತುಲ್ ಮಸಿಹ್ ಖಾಮಿಸ್[ಅತಬಿಅ] ಅವರು ಮೇ 29, 2020 ರಂದು ತಮ್ಮ ಖುತ್‌ಬ ಜುಮುಅದಲ್ಲಿ ಹೇಳಿದರು:

2008ರಲ್ಲಿ ಘಾನದ ಪ್ರವಾಸವಿತ್ತು.... ಬುರ್ಕಿನಾ ಫ್ಯಾಸೊದಿಂದಲೂ ಜನರು ಅಲ್ಲಿ ಆಗಮಿಸಿದ್ದರು. ಅದೇ ರೀತಿ ಅನೇಕ ರಾಷ್ಟ್ರಗಳಿಂದಲೂ ಜನರು ಆಗಮಿಸಿದ್ದರು. ನನಗೆ ತಿಳಿದು ಬಂದ ವಿಷಯವೇನೆಂದರೆ ಬುರ್ಕಿನೋಫಾಸೊದಿಂದ ಬಂದ ತಂಡವು ಬಹಳ ದೊಡ್ಡದಾಗಿತ್ತು. ಅವರಲ್ಲಿ ಕೆಲವು ಜನರಿಗೆ ಊಟ ಸಿಗಲಿಲ್ಲ, ಸುಮಾರು ಮೂರು ಸಾವಿರ ಜನರಿದ್ದರು. 300 ಖುದ್ದಾಮ್‌ಗಳು ಸೈಕಲ್ ಮುಖಾಂತರ 1600 ಕಿಲೋಮೀಟರ್ ದೂರವನ್ನು ಕ್ರಮಿಸಿ ಬಂದು ಸೇರಿದ್ದರು. ನಾನು ಒರ್ವ ಮುಬಲ್ಲಿಗ್‌ರಿಗೆ ಹೇಳಿ ಕಳಿಸಿದೆ ಅವರಿಗೆ ಊಟದ ಸಿಗಲಿಲ್ಲ. ಅವರಲ್ಲಿ ಕ್ಷಮೆ ಯಾಚಿಸಿರಿ ಮತ್ತು ನೀವು ಅವರ ವ್ಯವಸ್ಥೆ ಮಾಡಬೇಕು. ಅವರು ಕ್ಷಮೆಯ ಸಂದೇಶ ಅವರ ಕಡೆ ತಲುಪಿಸಿದಾಗ ಅವರು ಉತ್ತರಿಸಿದರು: ನಾನು ಯಾವ ಉದ್ದೇಶಕ್ಕೆ ಬಂದಿದ್ದೆವೋ ಆ ಉದ್ದೇಶ ಈಡೇರಿತು. ಊಟ ನಾವು ದಿನಾಗಲೂ ಉಣ್ಣುತ್ತೇವೆ. ಈಗ ನೋಡಿರಿ ಈ ಬಡ ಜನರು ದಿನಾಗಲೂ ಏನು ತಿನ್ನುತ್ತಾರೆ ಎಂದು. ಅವರು ಹೇಳಿದರು ನಾವು ಈ ಉಣ್ಣುತ್ತಿರುವ ಊಟವು, ಆಧ್ಯಾತ್ಮಿಕ ಊಟ ನಮಗೆ ದಿನಾಗಲೂ ದೊರೆಯುವುದಿಲ್ಲ.

ಬುರ್ಕಿನಾಫ್ಯಾಸೋ ಜಮಾಅತ್ ಈಗಲೂ ಅಷ್ಟು ಹಳೆಯ ಜಮಾಅತ್ ಅಲ್ಲ. ನಾನು ಸಂದರ್ಶನಕ್ಕೆ ಹೋದಾಗ ಆ ಜಮಾಅತ್ ಸುಮಾರು ಹತ್ತು, ಹದಿನೈದು ವರ್ಷ ಹಳೆ ಜಮಾಅತ್ ಆಗಿತ್ತು. ಈಗ ಮೂವತ್ತು ವರ್ಷ ಹಳೆ ಜಮಾಅತ್ ಆಗಿರಬಹುದು ಆದರೆ ಅವರು ನಿಷ್ಠೆ, ಪ್ರೀತಿಯಲ್ಲಿ ಪ್ರಗತಿ ಹೊಂದುತ್ತಲೇ ಹೋಗುತ್ತಿದ್ದಾರೆ. ಬಡತನದ ಬಗ್ಗೆ ಹೇಳುವುದಾದರೆ ಕೆಲವರು ಧರಿಸಿದ ಒಂದು ಜೋಡಿ ಬಟ್ಟೆ ಮಾತ್ರವೇ ಅವರ ಬಳಿ ಇತ್ತು. ಅದರಲ್ಲಿಯೇ ಅವರು ಮೂರು, ನಾಲ್ಕು ದಿವಸ, ಒಂದುವಾರದ ದಿವಸ ಇದ್ದು ಹಿಂದಿರುಗಿದರು. ಹಣ ಸಂಗ್ರಹಿಸಿ ಜಲ್ಸಕ್ಕೆ ಆಗಮಿಸಿದ್ದರು. ಖಿಲಾಫತ್ ಜೂಬಿಲಿಯ ಜಲ್ಸವಾಗಿತ್ತು ಅದೂ ಖಲೀಫರ ಉಪಸ್ಥಿತಿಯಲ್ಲಿ ಏರ್ಪಡಿಸಲಾಗುತ್ತಿದೆ ಆದ್ದರಿಂದ ಅದರಲ್ಲಿ ನಾವು ಸಹ ಭಾಗಿಯಾಗಬೇಕೆಂದು ಭಾಗವಹಿಸಿದ್ದರು. ಇಂತಹ ಪ್ರೀತಿ ಅಲ್ಲಾಹನ ಹೊರತು ಯಾರು ಸೃಷ್ಟಿಸಲು ಸಾಧ್ಯವಿಲ್ಲ.

**(ಖುತ್‌ಬ ಜುಮುಅ, ಮೇ 29, 2020 ರಂದು ನೀಡಲಾಯಿತು, ಅಲ್-ಫಝ್ಲ್ ಇಂಟರ್ನ್ಯಾಷನಲ್, ಜೂನ್ 19, 2020)**

...*...*...*...

# ದೂರದ ಪೂರ್ವದಲ್ಲಿ ಅಹ್ಮದಿಯಾ ಜಮಾಅತ್ತಿನ ಪ್ರಗತಿ

## (ಅನೀಸ್ ರಈಸ್, ಮುಬಲ್ಲಿಗ್ ಇಂಚಾರ್ಜ್ ಜಪಾನ್)

ದೂರದ ಪೂರ್ವ ಎಂಬುದು ಒಂದು ಭೌಗೋಳಿಕ ಪದವಾಗಿದೆ, ಅದು ಮಧ್ಯೆ ಪ್ರಾಚ್ಯ, ಯೂರೋಪಿನಿಂದ ದೂರದಲ್ಲಿರುವ ಕಾರಣ ಏಷ್ಯಾದ ದೇಶಗಳು ಮತ್ತು ದ್ವೀಪಗಳಿಗೆ ಬಳಸಲಾಗುತ್ತದೆ. ಯೂರೋಪಿಯನ್ ಸಂಶೋಧಕರ ಪ್ರಕಾರ ಮೊದಲ ಜಾಗತಿಕ ಯುದ್ಧದ ಪೂರ್ವದವರೆಗೆ ಉಸ್ಮಾನಿಯಾ ಸಾಮ್ರಾಜ್ಯವನ್ನು ಸಮೀಪದ ಪೂರ್ವ ಮತ್ತು ಅದಕ್ಕೂ ದೂರದ ಮಧ್ಯ ಪ್ರಾಚ್ಯ ಮತ್ತು ಹೆಚ್ಚು ಕಡಿಮೆ ಎಲ್ಲಾ ಇತರ ಏಷ್ಯನ್ನರ ದೇಶಗಳನ್ನು ದೂರದ ಪೂರ್ವ ಎಂದು ಕರೆಯಲಾಗುತ್ತದೆ. ಆಧುನಿಕ ಭೌಗೋಳಿಕ ವಿತರಣೆಗೆ ಸಂಬಂಧಿಸಿದಂತೆ, ಚೀನಾ, ಮಂಗೋಲಿಯಾ, ಜಪಾನ್, ಕೊರಿಯಾ, ಇಂಡೋನೇಷ್ಯಾ, ವಿಯೆಟ್ನಾಮ್, ಥೈಲ್ಯಾಂಡ್, ಸಿಂಗಾಪುರ, ಕಾಂಬೋಡಿಯಾ ಮತ್ತು ಮಲೇಷ್ಯಾ ಸೇರಿದಂತೆ ಹಲವು ದೇಶಗಳನ್ನು ದೂರದ ಪೂರ್ವ ಎಂದು ಕರೆಯಲಾಗುತ್ತದೆ. ಕೆಲವೊಮ್ಮೆ ಆಸ್ಟ್ರೇಲಿಯಾ ಮತ್ತು ದಕ್ಷಿಣ ಏಷ್ಯಾದ ದೇಶಗಳು ಯೂರೋಪಿನಿಂದ ದೂರವಿರುವುದರಿಂದ ದೂರದ ಪೂರ್ವದಲ್ಲೇ ಪರಿಗಣಿಸಲಾಗುತ್ತದೆ.

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದನು. **ವ ಲಿಲ್ಲಾಹಿಲ್ ಮಶ್ರಿಖು ವಲ್ ಮಗ್ರಿಬು'** ಅಂದರೆ ಪೂರ್ವ ಮತ್ತು ಪಶ್ಚಿಮ ಎರಡೂ ಅಲ್ಲಾಹನದೆ ಆಗಿವೆ. ಆದುದರಿಂದ ಇಸ್ಲಾಮಿನ ಪ್ರಕಾಶವು ಪೂರ್ವದವರೆಗೂ ಮತ್ತು ಪಶ್ಚಿಮದವರೆಗೂ ತಲುಪುವುದು ಅವಶ್ಯವಾಗಿತ್ತು. ಹಝ್ರತ್ ರಸೂಲುಲ್ಲಾಹ್(ಸ) ರವರ ಪವಿತ್ರ ಕಾಲದಲ್ಲಿಯೇ ಅರಬ್ ನೆಲವು ಬಹುದೇವಾರಾಧನೆಯ ವಸ್ತ್ರವನ್ನು ಕಳಚಿ ಏಕದೇವನ ಪ್ರಕಾಶನದಿಂದ ಪ್ರಕಾಶಿತಗೊಂಡಿತ್ತು. ಮತ್ತು ನೋಡು ನೋಡುತ್ತಲೇ ಇಸ್ಲಾಮಿನ ಕಿರಣಗಳು ಅರಬ್ ದೇಶದಿಂದ ಹೊರಟು ಲೋಕದಾದ್ಯಂತ ಹರಡತೊಡಗಿತು. ಹಝ್ರತ್ ರಸೂಲುಲ್ಲಾಹ್(ಸ) ರವರ ತರಬೇತಿಯಿಂದ ಫಲ ಪಡೆದ ಸಹಾಬರು ಪ್ರವಾದಿ(ಸ) ವಫಾತಿನ ನಂತರ ಇಸ್ಲಾಮಿನ ಪ್ರಚಾರ ಮತ್ತು ಪ್ರಸಾರದಲ್ಲಿ ತಮ್ಮ ಯಶಸ್ವಿ ಗುರುತುಗಳನ್ನು ಇಡೀ ಲೋಕದಲ್ಲಿ ಬಿಟ್ಟು ಹೋದರು. ದೂರದ ಪೂರ್ವವು ಅದರ ಜಲ್ವಂತ ಉದಾಹರಣೆ ಆಗಿದೆ. ಇಸ್ಲಾಮ್ ಧರ್ಮವು ಖಡ್ಗ ಬಲದಿಂದ ಅಥವಾ ಬಲಾತ್ಕಾರದಿಂದ ಲೋಕದಲ್ಲಿ ಹರಡಿದೆ ಎನ್ನುವವರಿಗೆ ದೂರದ ಪೂರ್ವದಲ್ಲಿ ಜನರ ಇಸ್ಲಾಂ ಧರ್ಮ ಸ್ವೀಕರಾರವು ಅದಕ್ಕೆ ತೃಪ್ತಿಕರ ಉತ್ತರವಾಗಬಹುದು. ದೂರದ ಪೂರ್ವದ ದೇಶಗಳು ವಿಶೇಷವಾಗಿ ಚೀನಾ ಮತ್ತು ಇಂಡೋನೇಷ್ಯಾದ ದ್ವೀಪಗಳಲ್ಲಿ ಇಸ್ಲಾಮಿನ ಪ್ರಚಾರ ಮತ್ತು ಪ್ರಸಾರದ ಕಾಲಮಾನವು 16ನೇ ಶತಮಾನ ಎನ್ನಲಾಗುತ್ತದೆ. ಆದರೆ ವಾಸ್ತವವೇನೆಂದರೆ ಈ ಕ್ಷೇತ್ರಗಳಲ್ಲಿ ಸಹಾಬರ ಪ್ರಯತ್ನಗಳಿಂದ ಇಸ್ಲಾಮಿನ ಬೀಜ ಅವರ ಖಿಲಾಫತ್ ಕಾಲದಲ್ಲಿಯೇ ಬಿತ್ತಲಾಗಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಅವರ ಸಹಾಬರು (ಶಿಷ್ಯಂದಿರು) ಸಹ ಇಸ್ಲಾಮಿನ ಪ್ರಚಾರಕ್ಕಾಗಿ ದೂರ ದೂರದ ದೇಶಗಳಿಗೆ ಹೋಗುತ್ತಿದ್ದರು. ಚೀನಾ ದೇಶದಲ್ಲಿ ಕೋಟ್ಯಾನುಗಟ್ಟಲೆ ಮುಸ್ಲಿಮರಿದ್ದಾರೆ. ಅದರಿಂದ ತಿಳಿದುಬರುವುದೇನೆಂದರೆ ಅಲ್ಲಿಯೂ ಸಹ ಸಹಾಬರುಗಳಲ್ಲಿ ಯಾರಾದರು ಅಲ್ಲಿ ತಲುಪಿರಬಹುದಾಗಿದೆ. (ಮಲ್ಫೂಘಾತ್ ಸಂಪುಟ-5, ಪುಟ-482, ಸಂಚಿಕೆ 1988).

ಕೆಲ ಐತಿಹಾಸಿಕ ಸಾಕ್ಷ್ಯಗಳು ಖಲೀಫ ರಾಶಿದೀನರ ಪವಿತ್ರ ಕಾಲದಲ್ಲಿಯೇ ಮುಸಲ್ಮಾನ ಮಬಲ್ಲಿಗ್ಗರು ಚೀನಾ ದೇಸಕ್ಕೆ ಇಸ್ಲಾಮಿನ ಸಂದೇಶ ತಲುಪಿಸಿದದರು ಎಂಬುದನ್ನು ಪುಷ್ಟಿಕರಿಸುತ್ತವೆ. ಆ ಸಜ್ಜನ ಸಹಾಬರ ಸವಿನೆನಪಿನ ಹೆಜ್ಜೆಗುರುತು ಇಲ್ಲಿಯವೆಗೂ ಚೀನಾದಲ್ಲಿ ಸುರಕ್ಷಿತವಾಗಿವೆ. ಜಲಮಾರ್ಗಗಳಿಂದ ಬಂದಿಳಿದ ಆ ಇಸ್ಲಾಂ ಪ್ರಚಾರಕರ ಸ್ಮರಣೆ ಪ್ರಸ್ತುತ ಪದಗಳಲ್ಲಿ ಕಾಣಬಹುದಾಗಿದೆ.

"ಜಲಮಾರ್ಗಗಳಿಂದ ಬಂದ ಆ ಜನರು ಖುಲ್ಫಾ ರಾಶಿದೀನ್ ಕಾಲದವರಾಗಿದ್ದರು. ಮತ್ತು ಭೂಮಾರ್ಗದಿಂದ ಬಂದ ಜನರು ಬನಿ ಉಮ್ಮೀಯಾ ಕಾಲದವರಾಗಿದ್ದರು. ಅದಾಗ್ಯೂ ನಾಲ್ಕು ಧರ್ಮ ಪ್ರಚಾರಕರು ಚೀನಾದಲ್ಲಿ ಪ್ರವೇಶಪಡೆದುದಾಗಿ ಅವರಲ್ಲಿ ಒಬ್ಬರು canton ನಗರದಲ್ಲಿ ವಾಸ ಮಾಡಿದ್ದರು ಇನ್ನೊಬ್ಬರು yangchow ನಗರದಲ್ಲಿ, ಮೂರನೆಯವರು ಮತ್ತು ನಾಲ್ಕನೆಯವರು chingchow ನಗರದಲ್ಲಿ ವಾಸ ಮಾಡಿದ್ದರು ಇಂದು ನಮಗೆ "Canton" ನಗರದಲ್ಲಿ ಒಂದು ಹಳೆಯ ಮಸೀದಿ "ವೈಶನ್‌ಘೀ" ಕಂಡುಬರುತ್ತದೆ. ಅದರಲ್ಲಿ ಒಂದು ಎತ್ತರವಾದ ಗೋಪುರವಿದೆ. ಆ ಮೂಲಕ ಅದಾನ್ ಧ್ವನಿ ಧ್ವನಿಸುತ್ತಿರುತ್ತದೆ. ಆ ಎರಡರಲ್ಲೂ ಅರಬರ ವಾಸ್ತುಶಿಲ್ಪವನ್ನು ಕಾಣಬಹುದಾಗಿದೆ." (ಚೀನ್ ಮುಸಲ್ಮಾನ್, ಬದರುದ್ದೀನ್ ಚೀನಿ, ಪುಟ-14, ಮುದ್ರಣಗೊಂಡ ಸ್ಥಳ ಆಝುಂಗಢ 1935)

ಕೆಲ ಅನಧಿಕೃತ ವರದಿಗಳ ಬಗ್ಗೆ ಮೂರನೇ ಖಲೀಫ ಹಝ್ರತ್ ಉಸ್ಮಾನ್(ರ) ರವರ ರಾಯಭಾರಿಯಾಗಿ ಹಝ್ರತ್ ಸಅದ್ ಬಿನ್ ಅಬಿ ವಖಾಸ್(ರ) ಚೀನಾ ಬಂದಿದ್ದರು. ಹಝ್ರತ್ ಸಅದ್ ಬಿನ್ ಅಭಿ ವಖಾಸ್‌ರವರು ಚೀನಾಕ್ಕೆ ಆಗಮಿಸಿದ ವಿಷಯ ಅಲ್ಲಿಯ ಚೀನಿ ಮುಸ್ಲಿಮರಲ್ಲಿ ಸಾಮಾನ್ಯವಾಗಿ ಕೇಳಿಬರುವಂತಿದೆ. ಅಲ್ಲದೇ ಚೀನಾದಲ್ಲಿ ಮುಸಲ್ಮಾನರ ಇತಿಹಾಸದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಚೀನಾದ ದಕ್ಷಿನ ನಗರ Gvangzhou ನಲ್ಲಿರುವ ಸಅದ್ ಬಿನ್ ಅಬಿ ವಿಖಾಸ್(ರ) ಅವರ ಪವಿತ್ರ ಸಮಾಧಿ, ಅವರ ಹೆಸರಿನ ಮಸೀದಿ ಮತ್ತು ಅವರ ಆಗಮನದ ವಿಷಯ ಪ್ರಸಿದ್ಧಿ ಪಡೆದಿದೆ. ಅವರ ಆಗಮನದ ವರದಿ ಅಧಿಕೃತವಾಗಿ ಇಲ್ಲದಿದ್ದರೂ ಕನಿಷ್ಠಮಟ್ಟ ಚೀನಾದಲ್ಲಿ ಇಸ್ಲಾಮಿನ ಪ್ರಚಾರ ಸಹಾಬರ ಪ್ರಯತ್ನಗಳಿಂದ ಆಗಿದೆ ಎಂಬುದು ಖಚಿತವಾಗಿರುತ್ತದೆ.

ಸಹಾಬ ಅವರ ಪವಿತ್ರ ಜೀವನ ಶೈಲಿ ಮತ್ತು ಅವರ ರೀತಿ ನೀತಿಯಿಂದ ಇಸ್ಲಾಮಿನ ಬೀಜ ಅಲ್ಲಿ ಬಿತ್ತಿ ಬೆಳೆದದ್ದು ಚೀನಾದ ಇತಿಹಾಸದಲ್ಲಿ ಆಲವಾದ ಪ್ರಭಾವ ಬೀರಿದ್ದನ್ನು ಚೀನಾದ ಇತಿಹಾಸಕಾರರು ಸಂಶೋಧಕರು ಘಂಟಾಘೋಷವಾಗಿ ಒಪ್ಪಿಕೊಳ್ಳುತ್ತಾರೆ. ಮುಸಲ್ಮಾನರ ವಿದ್ಯೆ ಮತ್ತು ಶಿಲ್ಪಕಲೆಯಿಂದ ಚೀನಾ ಬಹಳಷ್ಟು ಕಲಿತಿದೆ. ವಿಶೇಷವಾಗಿ ಹಲಾಕು ಖಾನ್‌ನಿಂದ ಬಗದಾದಿನ ವಿನಾಶ, ಅಬ್ಬಾಸಿಯಾ ಖಿಲಾಫತ್ ಅಂತ್ಯಗೊಂಡ ನಂತರ ಇಸ್ಲಾಮಿ ಶಿಕ್ಷಣ ಮತ್ತು ಕಲೆಗಳು ನಷ್ಟಗೊಳ್ಳುವುದು ಆರಂಭಗೊಂಡ ಅದರಿಂದ ಸುರಕ್ಷಿತದಲ್ಲಿದ್ದ ದೇಶಗಳಲ್ಲಿ ಚೀನಾವು ಒಂದಾಗಿದೆ. (ಚೀನಿ ಮುಸಲ್ಮಾನ್, ಬದರುದ್ದೀನ್ ಚೀನಿಯಿಂದ ಪುಟ 27 ಮುದ್ರಣ ಆಝುಂಗಢ 1935)

ಇಸ್ಲಾಂ ಧರ್ಮ ಪುನರುತ್ಥಾನದ ಕಾರ್ಯ ಹಝುರತ್ ಮಸೀಹ್ ಮೌಊದ್(ಅ) ರವರ ಮೂಲಕ ಅವರ ಜೀವನ ಕಾಲದಲಿಯೇ ಪೂರ್ವ ಪಶ್ಚಿಮದ ಭೂಮಂಡಲದ ಮೂಲೆ ಮೂಲೆಯವರೆಗೆ ತಲುಪಿತು. ಒಂದೆಡೆ ಲೋಕದ ಪಶ್ಚಿಮ ದಿಶೆಯಲ್ಲಿರುವ ಅಮೇರಿಕಾ ಖಂಡ ಇಸ್ಲಾಮ್ ಅಹ್ಮದಿಯತ್ತಿನ ಪ್ರಕಾಶದಿಂದ ಪ್ರಕಾಶಿತಗೊಂಡರೆ, ಇನ್ನೊಂದೆಡೆ ಅತ್ಯಂತ ಪೂರ್ವ ದಂಡೆಯಲಿರುವ ಅಂದರೆ ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾದ ಸಜ್ಜನ ಆತ್ಮಗಳು ಯುಗಪುರುಷನ (ಇಮಾಮರ) ಮಡಿಯಲ್ಲಿ ಬಂದು ಸೇರಿದವು. ಹಝ್ರತ್ ಮಸೀಹ್ ಮೌಊದ್(ಅ) ರವರ ಜೀವನದಲ್ಲಿಯೇ ದೂರದ ಪೂರ್ವದಿಂದ ಅಹ್ಮದಿಯತ್ ಸ್ವೀಕರಿಸಿದ ಕೆಲ ಅದೃಷ್ಟವಂತರ ಹೆಸರುಗಳು ಇಂತಿವೆ:

**ಹಾಂಗ್‌ಕಾಂಗ್ ಹಾಗೂ ಚೀನಾ,**

ಹಝ್ರತ್ ಖಾರಿ ಗುಲಾಂ ಮುಜ್ತಬಾ ಸಾಹಿಬ್ ಚೀನಿ(ರ)

ಹಝ್ರತ್ ಖಾರಿ ಗುಲಾಮ್ ಹಮ್ ಸಾಹಿಬ್(ರ)

**ಆಸ್ಟ್ರೇಲಿಯಾ**

ಹಝ್ರತ್ ಹಾಜಿ ಮುಸಾ ಹಸನ್ ಸಾಹಿಬ್ (ರ)

**ನ್ಯೂಜಿಲ್ಯಾಂಡ್,**

ಹಝ್ರತ್ ಪ್ರೊಫೆಸರ್ ಕ್ಲಿಮೆಂಟ್ ಸಾಹಿಬ್ ಹಾಮೀಮ್

**ಆಸ್ಟ್ರೇಲಿಯಾ,**

ಹಝ್ರತ್ ಹಾಜಿ ಮೂಸಾ ಹಸನ್, ಸಾಹಿಬ್ (ರ)

**ದ್ವಿತೀಯ ಖಿಲಾಫತ್ತಿನ ಆರಂಬಿಕ ಕಾಲದಲ್ಲಿ ಚೀನಾದಲ್ಲಿ ಅಹ್ಮದಿಯತ್ತಿನ ಚರ್ಚೆ**

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) 1924 ರ ಒಂದು ಜುಮುಅ ಕುತುಬಾದಲ್ಲಿ ಚೀನಾದಲ್ಲಿ ಅಹ್ಮದಿಯತ್ತಿನ ವಿಷಯವಾಗಿ ಒಂದು ಅಚ್ಚರಿಯ ಘಟನೆ ವ್ಯಕ್ತಪಡಿಸಿದರು. ಅವರು (ರ) ಹೇಳುತ್ತಾರೆ. ಇದೇ ವರ್ಷ ಅಂದರೆ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಹಲವು ಹೊಸದಾದ ವಾತುಗಳು ಅಹ್ಮದಿಯತ್ತಿನ ಕುರಿತು ತಿಳಿದುಬಂದದ್ದೇನೆಂದರೆ ಚೀನಾದಲ್ಲಿ ಅಹ್ಮದಿಯಾ ಜಮಾಅತ್ ಇದೆ. ಅಲ್ಲಿ ಯಾರು ಹೇಗಿದ್ದರು? ಅಲ್ಲಿಯ ಜನರು ಹೇಗೆ ಅಹ್ಮದಿ ಆದರು. ನಮಗೆ ಅದರ ಯಾವ ಜ್ಞಾನವು ಇರಲಿಲ್ಲ, ಅಲ್ಲಿ ದಮೋಸ್ ಇದ್ದ ವಿಷಯವು ತಿಳಿದರಲಿಲ್ಲ. ತುರ್ಕಿ ಪಾರ್ಲಿಮೆಂಟಿನ ಒಬ್ಬ ಸದಸ್ಯ ಚೀನಾಕ್ಕೆ

ಹೊಗಿದ್ದ, ಅವನು ತನ್ನ ಸಫರ್ ನಾಮ (ಪ್ರಮಾಣ ವರದಿ) ಯಲ್ಲಿ ಬರೆಯುತ್ತಾನೆ. ನಾನು ಚೀನಾದ ನಗರ canton ನಲ್ಲಿ ಒಂದು ಅಹ್ಮದಿ ಜುಮಾ ಮಸೀದಿಯ ಬಗ್ಗೆ ಜಗಳವಾಗುತ್ತಿರುವುದನ್ನು ಕಂಡಿದ್ದೇನೆ. ಅಹ್ಮದಿಯರು ಈ ಮಸೀದಿ ನಮ್ಮದಾಗಿದೆ ಎನ್ನುತ್ತಿದ್ದರು ಮತ್ತು ಇತರ ಮುಸಲ್ಮಾನರು ಇದು ನಮ್ಮದು ಎನ್ನುತ್ತಿದ್ದರು. ( ಖು ತ್ ಬ ಜುಮುಅ 29, ಫೆಬ್ರವರಿ 1924, ಮುದ್ರಣ ಖುತ್‌ಬಾತೆ ಮಹ್ಮೂದ್, ಸಂಪುಟ–8 ಪುಟ 312)

ಮತ್ತು ಹುರ್ಘಾರ್ ಹೇಳುತ್ತಾರೆ. ಕೆಲ ಕಾಲವಾಗಿದೆ. ಒಬ್ಬ ತುರ್ಕಿ ಅಹ್ಮದಿಯತ್ತಿನ ಕುರಿತು ಒಂದು ಅದ್ಭುತವಾದ ಮಾತನ್ನು ತನ್ನ ಕೃತಿಯಲ್ಲಿ ಬರೆಯುತ್ತಾನೆ. ಒಂದು ನಗರದಲ್ಲಿ ನಾನು ಹೋಗಿದ್ದೆ. ಅಲ್ಲಿ ನನಗೆ ತಿಳಿದುಬಂತು. ಒಂದು ಮಸೀದಿಯ ಕುರಿತು ಜಗಳವಾಗುತ್ತಿತ್ತು. ಕೆಲ ಜನರಿಗೆ ಅಲ್ಲಿ ನಮಾಝ್ ನಿರ್ವಹಿಸಲು ಬಿಡುತ್ತಿರಲಿಲ್ಲ. ನಾನು ವಿಚಾರಿಸಿದಾಗ ಹೇಳಿದರು. ಇವರು ಅಹ್ಮದಿ ಜನರಾಗಿದ್ದಾರೆ. ಅವರು ಭಾರತದ ಒಬ್ಬ ವ್ಯಕ್ತಿಯನ್ನು ವಾಗ್ದತ್ತ ಮಸೀಹ ಎಂದು ನಂಬುತ್ತಾರೆ. ಹಾಗಾಗಿ ನಾವು ಅವರಿಗೆ ಮಸೀದಿಯಲ್ಲಿ ನಮಾಝ್ ನಿರ್ವಹಿಸಲು ಬಿಡುತ್ತಿಲ್ಲ. ಇದರಿಂದ ತಿಳಿದು ಬಂತು. ಚೀನಾದಲ್ಲು ಅಹ್ಮದಿಯರಿದ್ದಾರೆ. ಅದಾಗ್ಯೂ ಅಲ್ಲಿ ಯಾವೊಬ್ಬ ಅಹ್ಮದಿ ಪ್ರಚಾರಕನು ಹೋದದ್ದಿಲ್ಲ. (ಖುತ್‌ಬ ಜುಮುಅ, 29 ಫೆಬ್ರವರಿ 1924 ಮುದ್ರಣ ಖುತ್ಬಾತೆ ಮಹ್ಮೂದ್, ಸಂಪುಟ–8, ಪುಟ–312)

**ತಹ್ರೀಕ್ ಜದೀದ್ ಅನ್ವಯ ಮೊಟ್ಟ ಮೊದಲ ಪ್ರಚಾರ ಕಾರ್ಯಕ್ಕಾಗಿ ದೂರದ ಪೂರ್ವ ಆಯ್ಕೆ.**

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ತಹ್ರೀಕ್ ಜದೀದ್ ಯೋಜನೆಯನ್ನು ಘೋಷಿಸಿದಾಗ, ಆ ಯೋಜನೆಯ ಅನ್ವಯ ಮೊದಲ ಪ್ರಚಾರಕರ ತಂಡ ಕಳುಹಿಸಲು ಅವರು ದೂರದ ಪೂರ್ವದ ದೇಶಗಳನ್ನು ಆಯ್ಕೆ ಮಾಡಿಕೊಂಡರು. ಈ ತಂಡ 6 ಮೇ 1935 ರಂದು ಖಾದಿಯಾನನಿಂದ ಪ್ರಮಾಣ ಬೆಳೆಸಿತು. ಮೊದಲ ತಂಡದಲ್ಲಿ ಶಾಮೀಲಾದ ಮುಬಲ್ಲಿಗ್ಹೀನರ (ಪ್ರಚಾರಕರ) ಮತ್ತು ದೇಶಗಳ ಪಟ್ಟಿ ಈ ಕೆಳಗಿನಂತಿದೆ.

**ಸಿಂಗಾಪುರ**

ಮುಬಲ್ಲಿಗ್: ಮಾನ್ಯ ಮೌಲಾನಾ ಗುಲಾಂ ಹುಸೇನ್ ಅಯಾಝ್ ಸಾಹಿಬ್ ಪ್ರಯಾಣ ಹೊರಟ ತಾರೀಖು: 6 ಮೇ 1935.

**ಚೀನಾ ಮುಬಲ್ಲಿಗ್:**

ಮಾನ್ಯ ಸೂಫಿ ಅಬ್ದುಲ್ ಗಫೂರ್ ಸಾಹಿಬ್ ಭೇರ್ವಿ ಪ್ರಯಾಣದ ತಾರೀಖು: 6 ಮೇ 1935

**ಜಪಾನ್ ಮುಬಲ್ಲಿಗ್:**

ಮಾನ್ಯ ಸೂಫಿ ಅಬ್ದುಲ್ ಖದೀರ್ ಸಾಹಿಬ್ ನಿಯಾಝ್ ಪ್ರಯಾಣದ ತಾರೀಖು: 6 ಮೇ 1935

**ದೂರದ ಪೂರ್ವಕ್ಕೆ ಹೋದ ಮುಬಲ್ಲಿಗೀನರ (ಪ್ರಚಾರಕರ) ಸೆರೆವಾಸ ಮತ್ತು ಅಸಾಮಾನ್ಯ ತ್ಯಾಗಗಳ ವಿವರ**

ಈಗಾಗಲೇ ವಿವರಿಸಿದಂತೆ ತಹ್ರೀಕ್ ಜದೀದ್ ಅನ್ವಯ ಮೊಟ್ಟ ಮೊದಲ ಪ್ರಚಾರಕ್ಕಾಗಿ ಆಯ್ದುಕೊಂಡ ಕ್ಷೇತ್ರವು ದೂರದ ಪೂರ್ವ ದೇಶಗಳಾಗಿವೆ. 1935 ರಲ್ಲಿ ಮುಬಲ್ಲಿಗ್ಹೀನರ (ಪ್ರಚಾರಕರ ಮೊದಲ ತಂಡ ಕಾರ್ಯಕ್ಷೇತ್ರಕ್ಕೆ ಇಳಿಯಿತು. ಆದರೆ ಜಪಾನಿಯರ ಮತ್ತು ಸಂಯುಕ್ತ ರಾಷ್ಟ್ರಗಳ ನಡುವಿನ ಮುಸುಕಿನ ಗುದ್ದಾಟ ಮತ್ತು ಎರಡನೆಯ ಮಹಾಯುದ್ಧ ಪರಿಣಾಮವಾಗಿ ಉಪಕಂಡದಿಂದ ಇಸ್ಲಾಮ್ ಧರ್ಮದ ಸೇವೆಗಾಗಿ ಬಂದ ಮುಬಲ್ಲಿಗ್ಹೀನರಿಗೂ (ಪ್ರಚಾರಕರಿಗೂ) ಸಹ ಸಂಶಯ ದೃಷ್ಟಿಯಿಂದ ನೊಡತೊಡಗಿದರು. ಕೆಲ ವರ್ಷಗಳಲ್ಲಿಯೇ ನೋಡು ನೋಡುತ್ತಲೇ ದೂರದ ಪೂರ್ವ ರಾಷ್ಟ್ರಗಳು ಜಪಾನ್ ಅಧೀನಕ್ಕೆ ಬಂದವು ಇಲ್ಲಿ ಇಸ್ಲಾಮ್ ಧರ್ಮದ ಸೇವೆಗಾಗಿ ಬಂದ ಮುಬಲ್ಲಿಗ್ಹನರನ್ನು ಸೆರೆ ಹಿಡಿಯಲಾಯಿತು. ಸೆರೆವಾಸದ ಕಷ್ಟಗಳನ್ನು ಅನುಭವಿಸಬೇಕಾದ ಮುಬಲ್ಲಿಗ್ಹೀನರಲ್ಲಿ ಸುಫಿ ಅಬ್ದುಲ್ ಖದಿರ್ ಸಾಹಿಬ್ ನಿಯಾಝ್ (ಜಪಾನ್) ಮು. ಮೌಲ್ವಿ ಗುಲಾಂ ಹುಸೇನ್ ಅಯಾಝ್ ಸಾಹಿಬ್ (ಸಿಂಗಾಪುರ) ಮು. ಮೌಲ್ವಿ ಅಬ್ದುಲ್ ವಾಹಿದ್ ಸಾಹಿಬ್ (ಇಂಡೋನೇಷ್ಯಾ) ಸೇರಿದ್ದರು. ಈ ಮುಬಲ್ಲಿಗ್ಹೀನರ ಬಗ್ಗೆ ವಿವರ ನೀಡುತ್ತ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು (ರ) ನುಡಿದರು.

"ತೆಹ್ರೀಕ್ ಜದೀದಿನ ಕೆಲ ಮುಬಲಿಗ್ಹೀನರು ಈ ಸಮಯ ಶತ್ರುಗಳ ಕೈಯಲ್ಲಿ ಬಂದಿಯಾಗಿದ್ದಾರೆ. Street settlements (ಸಿಂಗಾಪುರ) ನಲ್ಲಿ ನಮ್ಮ ಮೌಲ್ವಿ ಗುಲಾಂ ಹುಸೇನ್ ಅಯಾಝ್ ಸಾಹಿಬ್ ಮುಬಲ್ಲಿಗ್ಹರಾಗಿದ್ದರು. ಜಾವಾ ಸಮಾಟ್ರದಲ್ಲಿ ಮೌಲ್ವಿ ಶಾಹ್ ಮುಹಮ್ಮದ್ ಸಾಹಿಬ್ ಮತ್ತು ಮಲಿಕ್ ಅಝೀಝ್ ಅಹ್ಮದ್ ಸಾಹಿಬ್ ಹೋಗಿದ್ದರು. ಅವರು ಮೂವರು ಸಹ ಈ ಸಮಯ ಜಪಾನಿಯರ ಬಂಧನದಲ್ಲಿದ್ದಾರೆ. ಅಂದರೆ ಮೂವರು ಬಂಧನದಲ್ಲಿದ್ದಾರೆ ಮತ್ತು ಒಬ್ಬರು ಈ ಸಮಯ ಕಾಣೆಯಾಗಿದ್ದಾರೆ." (ತೆಹ್ರೀಕ್ ಜದೀದ್ ಎಕ್ ಇಲಾಹಿ ತೆಹ್ರೀಕ್, ಸಂಪುಟ–2, ಪುಟ–451)

"ಇಂದೇ ನನಗೆ ತಂತಿ ಸಂದೇಶ ದೊರೆಕಿದೆ. ಜಪಾನ್ ಸರಕಾರ ಸೂಫಿ ಅಬ್ದುಲ್ ಖದೀರ್ ಸಾಹಿಬರನ್ನು ಬಂಧಿಸಿದೆ. ಅವರು ಜಪಾನ್ ಸರಕಾರಕ್ಕೆ ವಿರೋಧವಾಗಿದ್ದಾರೆ ಎಂಬ ಆರೋಪ ಇದೆ. ಇದು ಸಹ ನಮಗೆ ಒಂದು ಹೊಸ ಅನುಭವ ಆಗಿದೆ."(ಖುತ್‌ಬ ಜುಮುಅ 15 ನವೆಂಬರ್ 1935, ತೆಹ್ರೀಕ್ ಜದೀದ್ ಏಕ್ ಇಲಾಹಿತ್ ತೆಹ್ರೀಕ್, ಸಂಪುಟ–1)

ಆದರೆ ಈ ಮುಬಲ್ಲಿಗ್ಹೀನರು ಕಷ್ಟನಷ್ಟಗಳನ್ನು ಅನುಭವಿಸಿದರೂ ಇಸ್ಲಾಂ ಧರ್ಮ ಪ್ರಚಾರ ಕಾರ್ಯವನ್ನು ಕೈಬಿಡಲಿಲ್ಲ. ಅಂತೆಯೇ ಅಲ್ಲಾಹನು ತನ್ನ ಅನುಗ್ರಹದಿಂದ ಮುಲ್ಲಿಗ್ಹೀನರ ಪ್ರಯತ್ನಗಳಿಗೆ ಸಫಲತೆ ಒದಗಿಸಿದನು. ದೂರದ ಪೂರ್ವ ದೇಶಗಳನ್ನು ಇಸ್ಲಾಮ್ ಅಹ್ಮದಿಯತ್ತಿನ ಪ್ರಕಾಶದಿಂದ ಪ್ರಕಾಶಿತನನ್ನಾಗಿ ಮಾಡಿದನು. ಆ ಮುಬಲ್ಲಿಗ್ಹೀನರು ಇಸ್ಲಾಮ್ ಅಹ್ಮದಿಯತ್ತಿಗೋಸ್ಕರ ನಡೆಸಿದ ಪ್ರಯತ್ನ ಮತ್ತು ಅವರ ಶೌರ್ಯಗಳ ವಿವರ ದೊರಕುತ್ತದೆ. ಜಪಾನಿಯರ ಕಾಲದಲ್ಲಿ, ಜಪಾನಿಯರ ವಿರುದ್ಧ ಅವರ ಮನೆಗಳಲ್ಲಿಯೂ ಸಹ ಮಾತನಾಡಿಕೊಳ್ಳಲು ಧೈರ್ಯವಿರಲಿಲ್ಲ.

ಅಂತಹ ಭಯಾನಕ ಸ್ಥಿತಿಯಲ್ಲೂ ಮೌಲ್ವಿ ಗುಲಾಂ ಹುಸೇನ್ ಅಯಾಝ್ ಸಾಹಿಬ್ I.N.A. ಕ್ಯಾಂಪಿಗೆ ಹೋಗಿ ಘಂಟಾಘೋಷವಾಗಿ ಪ್ರಚಾರ ಮಾಡುತ್ತಿದ್ದರು. ಮತ್ತು ಆಗ ಎಲ್ಲಾ ಸಮಯದಲ್ಲೂ ಜಪಾನಿ ಗೂಢಚಾರರು ಗೂಢಚಾರ್ಯತೆ ನಡೆಸುತ್ತಿದ್ದರು. ಅವರು ಪ್ರಚಾರ ಕಾರ್ಯ ನಡೆಸುತ್ತಿದ್ದರು. (ಆಧಾರ ತಾರೀಖ್ ಅಹ್ಮದಿಯತ್ ಸಂಪುಟ 7 ಪುಟ 209)

ಹಲವು ಪ್ರಯತ್ನಗಳ ನಡುವೆಯೂ ಯಶಸ್ಸು ದೊರೆಯದಂತಹ ಕ್ಷೇತ್ರಗಳಲ್ಲೂ ಯಶಸ್ಸು ದೊರೆಯಲು ಪ್ರಾರಂಭವಾಯಿತು. ಮಲಾಯದಲ್ಲಿ ಯಾವ ಸ್ಥಿತಿಯಿತ್ತೆಂದರೆ ಮೌಲ್ವಿ ಗುಲಾಂ ಹುಸೇನ್ ಅಯಾಝ್ ಸಾಹಿಬರಿಗೆ ಒಂದು ಸಂದರ್ಭದಲ್ಲಿ ಜನರು ಹೊಡೆದು ಬೀದಿಯಲ್ಲಿ ಬಿಸಾಕಿದ್ದರು. ನಾಯಿಗಳು ಅವರನ್ನು ನೆಕ್ಕುತ್ತಿದ್ದವು. ಇದೀಗ ಮಲಾಯದಿಂದ ಮರಳಿದ ಜನರು ಹೇಳುತ್ತಾರೆ, ಒಳ್ಳೆಯ ಶ್ರೀಮಂತ ಹೋಟೆಲುಗಳ ಮಾಲೀಕರು ಮತ್ತು ಗೌರಾವಾನ್ವಿತ ಕುಟುಂಬಗಳ ಸುಮಾರು 70ರಿಂದ 80ರ ಸಮೀಪ ಜನರು ಅಹ್ಮದಿಯರಾಗಿದ್ದಾರೆ ಎಂದು. ಈ ಪ್ರಗತಿ ದಿನೇ ದಿನೇ ಹೆಚ್ಚಾಗುತ್ತಲೇ ಇದೆ." (ಆಧಾರ: ದಿನಪತ್ರಿಕೆ. ಅಲ್‌ಫಝುಲ್ 18 ಡಿಸೆಂಬರ್ 2006 ಪುಟ 18)

ದೂರದ ಪೂರ್ವ ಮುಬ್ಬಲ್ಲಿಗ್ಹೀನರ ತ್ಯಾಗಗಳ ಕುರಿತು ವಿವರಿಸುತ್ತಾ, ಇಂಡೋನೇಷ್ಯಾದ ಮುಬಲ್ಲಿಗ್ಹ್ ಮೌಲ್ವಿ ಮುಹಮ್ಮದ್ ಸಾದಿಖ್ ಸಾಹಿಬ್ ಸಮಾಟರಿ ಅವರ ತ್ಯಾಗಗಳು, ತಾಳ್ಮೆ ಮತ್ತು ದೃಢತೆ ಈ ಕ್ಷೇತ್ರದಲಿ ನಿಯುಕ್ತರಾದ ಮುಬಲ್ಲಿಗ್ಹೀನರಿಗೆ ಒಂದು ಜಲ್ವಂತ ಉದಾಹರಣೆಯಾಗಿದೆ. ಅವರು ಬಂಧನದಲ್ಲಿದ್ದರು, ಜಪಾನ್ ಸರಕಾರದಿಂದ ಅವರಿಗೆ ಮರಣ ದಂಡನೆ ವಿಧಿಸುವ ನಿರ್ಣಯವಾಗಿತ್ತು. ಶಿಕ್ಷೆ ಜಾರಿಗೆ ತರಲು ಆಗಸ್ಟ್ 1945 ರ ಅಂತಿಮ ಸಪ್ತಾಹ ನಿಗಧಿಪಡಿಸಲಾಗಿತ್ತು. ಆದರೆ ದೈವಿಕ ಶಕ್ತಿ ಮತ್ತು ಪ್ರಾರ್ಥನೆಗಳ ಸ್ವೀಕಾರಿಕೆಯ ಪವಾಡದಿಂದಾಗಿ ಆಗಸ್ಟ್‌ನಲ್ಲಿಯೇ ಎರಡನೇ ಮಹಾಯುದ್ಧ ತಾರ್ಕಿಕ ಹಂತಕ್ಕೆ ಬಂದು ತಲುಪಿತು. ಜಪಾನಿಗೆ ಸೋಲುಂಟಾಯಿತು. ಮಹಾಯುದ್ಧದ ಅಂತ್ಯದ ಫಲವಾಗಿ ಅವರಿಗೆ ಕೇವಲ ಬಿಡುಗಡೆ ಭಾಗ್ಯ ದೊರೆಯಲಿಲ್ಲ. ಬದಲು ಈ ಕ್ಷೇತ್ರದಲ್ಲಿ ಇನ್ನಷ್ಟು ವೇಗವಾಗಿ ಇಸ್ಲಾಮ್ ಅಹ್ಮದಿಯತ್ತಿನ ಪ್ರಚಾರ ಆಗತೊಡಗಿತು. ಅದರ ಪರಿಣಾಮವಾಗಿ ಇಂದು ದೂರದ ಪೂರ್ವ ರಾಷ್ಟ್ರಗಳಲ್ಲಿ ಅಹ್ಮದಿಯತ್ತಿನ ನಿಷ್ಠಾವಂತ ಜಮಾಅತ್‌ಗಳು ಸ್ಥಾಪನೆಗೊಂಡಿವೆ. ಕೆಲ ರಾಷ್ಟ್ರಗಳಲ್ಲಿ ಜಮಾಅತ್ ಸ್ಥಾಪನೆಗೊಂಡ ಇತಿಹಾಸ ಸಂಕ್ಷಿಪ್ತವಾಗಿ ಉದಾಹರಣೆ ರೂಪದಲ್ಲಿ ಪ್ರಸ್ತುತವಿದೆ.

**ಆಸ್ಟ್ರೇಲಿಯಾದಲ್ಲಿ ಇಸ್ಲಾಂ ಅಹ್ಮದಿಯತ್ತಿನ ಪ್ರಚಾರ ಮತ್ತು ಜಮಾಅತ್ ಕೇಂದ್ರಗಳ ಸ್ಥಾಪನೆ**

ಪ್ರಕರಣಗಳ ತರೀನ್ ಸಮುದಾಯದ ಕಣ್ಮಣಿ ಹಝ್ರತ್ ಸೂಫಿ ಹಸನ್ ಮೂಸಾ ಖಾನ್ ಸಾಹಿಬ್ ಆಸ್ಟ್ರೇಲಿಯಾದಲ್ಲಿ ಮಾತ್ರವಲ್ಲ ಪೂರ್ವದೇಶಗಳಿಂದ ಬೈಅತ್ ಮಾಡಿ ಇಮಾಮರ ಮಡಿಲಲ್ಲಿ ಸೇರಿದ

ಮೊದಲ ಫಲವಾಗಿದ್ದರು. ಅವರು ಆಸ್ಟ್ರೇಲಿಯಾದಿಂದ ಸೆಪ್ಟೆಂಬರ್ 1903 ರಲ್ಲಿ ಪತ್ರ ಮೂಲಕ ಬೈಅತ್ ಮಾಡುವ ಭಾಗ್ಯ ಪಡೆದಿದ್ದರು. ಅವರ ಬೈಅತ್ತಿನ ಪತ್ರದ ಉತ್ತರವಾಗಿ ಹಝ್ರತ್ ಮೌಲಾನ ಅಬ್ದುಲ್ ಕರೀಂ ಸಾಹಿಬ್ ಸಮಾಲ್ಕೋ ಅವರು ಬೈತ್ ಸ್ವೀಕಾರದ ಸಂದೇಶ ನೀಡುತ್ತಾ ಬರೆದರು.

"ಒಂದು ಅತಿ ದೂರದ ಅಪರಿಚಿತ ದೇಶದಲ್ಲಿ ಈ ಸಂಘಟನೆಯ ಸತ್ಯ ಮತ್ತು ಸಾಕ್ಷ್ಯ ಅಲ್ಲಾಹನು ಹೇಗೆ ತಮ್ಮ ಮೇಲೆ ಅನಾವರಣಗೊಳಿಸಿದನು ಎಂಬ ವಿಷಯದಿಂದ ನಮಗೆ ತುಂಬಾ ಸಂತೋಷವಾಗುತ್ತದೆ. ಇದು ಅಲ್ಲಾಹನ ಅನುಗ್ರಹದ ಫಲಮಾತ್ರವಾಗಿದೆ."

(ರಿಸಾಲ ರುಫ್‌ಖಾಯೆ ಅಹ್ಮದ್, ಸಂಪುಟ 2, ಆಧಾರ ದಿನಪತ್ರಿಕೆ ಅಲ್‌ಫಝುಲ್ ರಬ್ವಾ 18 ಡಿಸೆಂಬರ್ 2006 ಪುಟ 35)

ದ್ವಿತೀಯ ಖಿಲಾಫತ್ತಿನ ಕಾಲದಲ್ಲಿ ಆಸ್ಟ್ರೇಲಿಯಾದಲ್ಲಿ ವಿಧಿಬದ್ಧ ರೀತಿಯಲ್ಲಿ ಜಮಾಅತ್ ಸ್ಥಾಪನೆಗೊಂಡಿತ್ತು. ತೃತೀಯ ಖಿಲಾಫತ್ತಿನ ಕಾಲದಲ್ಲಿ 1980ರ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ) ರಬ್ವಾದಲ್ಲಿ ಆಸ್ಟ್ರೇಲಿಯಾ ಜಮಾಅತಿನ ಮೊದಲ ತಂಡ ಡಾ॥ ಇಜಾಝುಲ್ ಹಖ್ ಸಾಹಿಬ್ (ಮಾಜಿ ಪ್ರಾಂಶುಪಾಲರು ದಂತ ವಿದ್ಯಾಲಯ ಲಾಹೋರ್) ಅಮೀರ್ ಜಮಾಅತ್ ಆಸ್ಟ್ರೇಲಿಯಾ ನೇತೃತ್ವದಲ್ಲಿ ಭಾಗವಹಿಸಿತು. ಹಝ್ರತ್ ಖಲೀಫತುಲ್ ಮಸೀಹ್ ತೃತೀಯ (ಸಹ) ಅವರ ಮಂಜುರಾತಿಯ ಮೇರೆಗೆ 1981 ರಲ್ಲಿ ಆಸ್ಟ್ರೇಲಿಯಾದಲ್ಲಿ ಅಹ್ಮದಿಯಾ ಜಮಾಅತಿನ ಮೊದಲ ಮಸೀದಿಯ ನಿರ್ಮಾಣದ ಯೋಜನೆ ಪ್ರಾರಂಭವಾಯಿತು.

ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಹ) ಸೆಪ್ಟೆಂಬರ್ 1983 ರಲ್ಲಿ ಆಸ್ಟ್ರೇಲಿಯಾಕ್ಕೆ ಆಗಮಿಸಿದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಒಬ್ಬ ಖಲೀಫರ ಇದು ಆಸ್ಟ್ರೇಲಿಯಾಕ್ಕೆ ಮೊದಲ ಪ್ರವಾಸವಾಗಿತ್ತು. ಈ ಪ್ರವಾಸದ ವೇಳೆಯೇ 'ಮಸ್ಜಿದ್ ಬೈತುಲ್ ಹುದಾ"ದ ಅಡಿಗಲ್ಲು ಹಾಕಲಾಯಿತು.

ಈ ಮಸೀದಿಯ ಉದ್ಘಾಟನೆ 14 ಜುಲೈ 1989 ರಂದು ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು ತಮ್ಮ ಆಸ್ಟ್ರೇಲಿಯಾ ಪ್ರವಾಸದ ವೇಳೆ ಮಾಡಿದರು.

ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು(ಅಬಿಅ) ಖಿಲಾಫತ್ ಸ್ಥಾನ ಅಲಂಕರಿಸಿದ ನಂತರ 2006 ಮತ್ತು 2013 ರಲ್ಲಿ ಎರಡು ಸಲ ಆಸ್ಟ್ರೇಲಿಯಾಕ್ಕೆ ತೆರಲಿದ್ದರು. ಈ ಪ್ರವಾಸಗಳ ಸಮಯ ಆಸ್ಟ್ರೇಲಿಯಾದಲ್ಲಿ ಅಹ್ಮದಿಯಾ ಜಮಾಅತಿನಲ್ಲಿ ಜಾಗೃತೆಯ ಒಂದು ಹೊಸ ಆತ್ಮ ಸೃಷ್ಟಿಸಿದಂತಾಯಿತು. ಮಸೀದಿಗಳ ನಿರ್ಮಾಣ, ಹೊಸ ಮುಬಲ್ಲಿಗೀನರ ಆಗಮನ, ಪತ್ರಿಕೆ, ಪುಸ್ತಕಗಳ ಮೂಲಕ ಪ್ರಸಾರ, ಇಂಟರ್‌ನೆಟ್ ಮತ್ತು ಸೋಷಿಯಲ್ ಮೀಡಿಯಾ ಮೂಲಕ ಪ್ರಚಾರ ಹಾಗೂ ಪ್ರಗತಿಯ ಒಂದು ಹೊಸ ಅಧ್ಯಾಯ ತೆರೆದಂತಾಯಿತು. ಕೇವಲ ಆಸ್ಟ್ರೇಲಿಯಾದಲ್ಲಷ್ಟೇ ಅಲ್ಲದೇ ಇಡೀ ಭೂಖಂಡದ ಉದ್ದಗಲಕ್ಕು ದೂರ ದೂರದ ದ್ವೀಪಗಳವರೆಗೆ ಇಸ್ಲಾಂ ಅಹ್ಮದಿಯತ್ತಿನ ಸಂದೇಶ ಸಾರ್ವಜನಿಕಗೊಂಡಿತು.

**ಫಿಜಿ ದ್ವೀಪದಲ್ಲಿ ಅಹ್ಮದಿಯತ್ತಿನ ಪ್ರಾರಂಭ ಮತ್ತು ಕೇಂದ್ರ ಸ್ಥಾಪನೆ**

ದ್ವಿತೀಯ ಖಿಲಾಫತ್ತಿನ ಪ್ರಾರಂಭ ಕಾಲದಿಂದಲೇ ಫಿಜಿಯಲ್ಲಿ ಬೈಅತ್ ಮಾಡದ ಜನರು ಉಪಸ್ಥಿತರಿದ್ದರು. ಹೀಗೆ ಈ ದ್ವೀಪದವರು ಒಂದು ಲೆಕ್ಕದಲ್ಲಿ ಅಹ್ಮದಿಯತ್ತಿನಿಂದ ಪರಿಚಯಗೊಂಡರು. ಆದರೆ ಫಿಜಿಯಿಂದ ಅಹ್ಮದಿಅತ್ ಸ್ವೀಕಾರ ಮಾಡಿ ಅಹ್ಮದಿಯಾ ಖಿಲಾಫತ್ತಿನ ನೆರಳಿನಲ್ಲಿ ಸೇರುವ ಮೊದಲ ವ್ಯಕ್ತಿ ಮು. ಹಾಜಿ ರಂಜಾನ್ ಸಾಹಿಬ್‌ರವರಾಗಿದ್ದರು. ಅವರು 1959 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರ ಪವಿತ್ರ ಹಸ್ತದಲ್ಲಿ ಬೈಅತ್ ಮಾಡಿ ಅಹ್ಮದಿಯತ್ತಿನ ಮಡಿಲು ಸೇರಿದ್ದರು.

ಆ ಸಮಯದಲ್ಲಿ ಫಿಜಿಯಲ್ಲಿ ಹತ್ತಕ್ಕಿಂತ ಹೆಚ್ಚು ಮಸೀದಿಗಳು ಇಸ್ಲಾಮ್ ಅಹ್ಮದಿಯತ್ತಿನ ಸ್ಥಿರ ಕೇಂದ್ರಗಳಾಗಿ ಹಗಲಿರುಳು ಇಸ್ಲಾಮಿನ ಸೇವೆಯಲ್ಲಿ ಕಾರ್ಯನಿರತವಾಗಿದ್ದವು. ಒಂದು ಅಹ್ಮದಿಯಾ ಶಾಲೆ ಅಲ್ಲದೇ ಖಲೀಫರುಗಳ ನೇತೃತ್ವಗಳಲ್ಲಿ ಪವಿತ್ರ ಖುರ್‌ಆನ್‌ನ ಅನುವಾದಗಳು ಮತ್ತು ಸಾಹಿತ್ಯಗಳ ತಯಾರಿ ಹಾಗೂ ಕೇಂದ್ರಿತ ಮುಬಲ್ಲಿಗೀನರ ಹೊರತಾಗಿ ದಾಯಿಯಾನೆ ಇಲಲ್ಲಾಹ್ ಸ್ವರೂಪದಲ್ಲಿ ಖಿಲಾಫತ್ತಿನ ಖುದ್ದಾಮರ ಒಂದು ಗುಂಪು ಪ್ರಪಂಚದ ಅತ್ಯಂತ ಪೂರ್ವದಲ್ಲಿರುವ ಈ ದೂರ ದೂರದ ದ್ವೀಪಗಳಲ್ಲಿ ಇಸ್ಲಾಮಿನ ಸೇವೆಯಲ್ಲಿ ಕಾರ್ಯನಿರತವಾಗಿದ್ದವು. ಇಸ್ಲಾಂ ಪ್ರಸಾರದ ಅಹ್ಮದಿಯತ್ತಿನ ಜಾಗತಿಕ ಕಾರ್ಯದ ನೇತೃತ್ವ ವಹಿಸುತ್ತ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು 1983 ರಲ್ಲಿ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು (ಅಬಿಅ) 2006 ರಲ್ಲಿ ಫಿಜಿಗೆ ಆಗಮಿಸಿದ್ದರು ಮತ್ತು ಫಿಜಿ ದ್ವೀಪದ ಉದ್ದಗಲಕ್ಕು ಪ್ರವಾಸ ಕೈಗೊಂಡು ಭೂಮಿಯ ಎಲ್ಲೆ ಎಂದು ಕರೆಸಿಕೊಳ್ಳುವ ಈ ಭೂಭಾಗದವರೆಗೆ ಇಸ್ಲಾಂ ಅಹ್ಮದಿಯತ್ತಿನ ಸಂದೇಶ ತಲುಪಿಸಿದರು.

**ನ್ಯೂಜಿಲ್ಯಾಂಡಿನಲ್ಲಿ ಅಹ್ಮದಿಅತ್ ಮತ್ತು ಕೇಂದ್ರ ಸ್ಥಾಪನೆ**

ನ್ಯೂಜಿಲ್ಯಾಂಡ್ ಸಹ ಹಝ್ರತ್ ಮಸೀಹ್ ಮೌಊದ್(ಅ) ಅವರ ಪವಿತ್ರ ಕಾಲದಲ್ಲಿಯೇ ಇಸ್ಲಾಂ ಅಹ್ಮದಿಅಯತ್‌ನಿಂದ ಪರಿಚಿತಗೊಂಡ ದ್ವೀಪಗಳಿಗೆ ಸೇರಿದ ಒಂದು ಅದೃಷ್ಟವಂತ ದ್ವೀಪವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಜೀವನದ ಕೊನೆಯ ದಿನಗಳಲ್ಲಿ ಪ್ರೋಫೆಸರ್ ಕಿಲಿಇಮೆಂಟ್ ಸಹಿಬ್ ಭಾರತದ ಪ್ರವಾಸ ಮಾಡುತ್ತಾ ಖಾದಿಯಾನ ತಲುಪಿದರು. ಮತ್ತು ಮೇ 1908 ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ದರ್ಶನದಿಂದ ಪುನೀತರಾದರು ನ್ಯೂಜಿಲ್ಯಾಂಡ್ ಮರಳಿ ಹೋದ ಮೇಲೆ ಅವರು ಇಸ್ಲಾಮ್ ಅಹ್ಮದಿಯತ್ ಸ್ವೀಕರಿಸಿದರು ಮತ್ತು ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್(ರ) ರವರ ಸಂಪರ್ಕದಲ್ಲಿದ್ದರು. ಡಿಸೆಂಬರ್ 10, 1922 ರವರೆಗೆ ಕೊನೆಯ ಉಸಿರಿನವರೆಗೆ ಜಮಾಅತಿಗೆ ನಿಷ್ಠರಾದರು. ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು(ಅಬಿಅ) ತನ್ನ ನ್ಯೂಜಿಲ್ಯಾಂಡ್ ಪ್ರವಾಸದ ವೇಳೆ 7 ಮೇ 2006 ರಂದು ಅವರ ಸಮಾಧಿಗೆ ಭೇಟಿಕೊಟ್ಟರು ಮತ್ತು ದುಆ ಮಾಡಿದರು.

ಚತುರ್ಥ ಖಿಲಾಫತ್ ಕಾಲದಲ್ಲಿ 1998 ರಂದು ನ್ಯೂಜಿಲ್ಯಾಂಡಿನ Auckland ನಗರದಲ್ಲಿ ಅಹ್ಮದಿಯಾ ಜಮಾಅತ್ ಒಂದು ಭೂಭಾಗ (plot) ಖರೀದಿಸಿ ವಿಧಿಬದ್ಧ ರೀತಿಯಲ್ಲಿ ಇಸ್ಲಾಂ ಅಹ್ಮದಿಯತ್ತಿನ ಕೇಂದ್ರಕ್ಕೆ ಅಡಿಗಲ್ಲು ಹಾಕಿದರು. ಪಂಚಮ ಖಿಲಾಫತ್ತಿನ ಪವಿತ್ರ ಕಾಲದಲ್ಲಿ 2013 ರಲ್ಲಿ ಇಲ್ಲಿ ಮಸ್ಜಿದ್ ಬೈತುಲ್ ಮುಕೀತ್ ಉದ್ಘಾಟನೆ ಕಾರ್ಯರೂಪಕ್ಕೆ ಬಂತು.

ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು(ಅಬಿಅ) 2006 ಮತ್ತು 2012 ರಲ್ಲಿ ಖುದ್ದಾಗಿ ನ್ಯೂಝಿಲ್ಯಾಂಡ್ ಆಗಮಿಸಿದರು. ಮತ್ತು ನ್ಯೂಝಿಲ್ಯಾಂಡಿನ ಪಾರ್ಲಿಮೆಂಟ್ ಸಮೇತ ದೇಶದ ಉದ್ದಗಲಕ್ಕೂ ಪ್ರವಾಸ ಕೈಗೊಂಡು ಪ್ರಪಂಚದ ಅತೀ ಪೂರ್ವದಲ್ಲಿರುವ ನ್ಯೂಝಿಲ್ಯಾಂಡಿನ ಸುಂದರ ದ್ವೀಪಗಳನ್ನು ಇಸ್ಲಾಂ ಅಹ್ಮದಿಯತ್ತಿನ ಸಂದೇಶ ತಲುಪಿಸುವ ಕರ್ತವ್ಯ ಪಾಲಿಸಿದರು.

ನ್ಯೂಝಿಲ್ಯಾಂಡ್‌ನಲ್ಲಿ ಈ ಸಮಯ ಒಂದು ಸುವ್ಯವಸ್ಥಿತವಾದ ಜಮಾಅತ್ ಸ್ಥಾಪಿತಗೊಂಡಿದೆ. ಖಿಲಾಫತ್ತಿನ ನೆರಳಿನಲ್ಲಿ ಈಗ ಮೂರು ಮುಬಲ್ಲಿಗೀನರು (ಪ್ರಚಾರಕರು) ಮತ್ತು ಡಜನ್‌ಗಟ್ಟಲೆ ದಾಯಿಯಾನೆ ಇಲ್ಲಲ್ಲಾಹ್ (ಅಲ್ಲಾಹನ ಕಡೆ ಕರೆ ನೀಡುವವರು) ದೇಶದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿದ್ದಾರೆ. ದಿನಪತ್ರಿಕೆಗಳು, ಪತ್ರಿಕೆಗಳು, ಟಿ.ವಿ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ದೇಶದ ಪ್ರತಿಯೊಂದು ವರ್ಗದವರಿಗೆ ಇಸ್ಲಾಂ ಅಹ್ಮದಿಯತ್ತಿನ ಸಂದೇಶ ತಲುಪಿಸುತ್ತಿದ್ದಾರೆ. ನ್ಯೂಝಿಲ್ಯಾಂಡ್ ಜನರ ಸ್ಥಳೀಯ ಭಾಷೆ "ಮಾದರಿ" ನಲ್ಲಿಯೂ ಪವಿತ್ರ ಖುರ್‌ಆನ್ ಅನುವಾದ ಮಾಡಲಾಗಿದೆ.

**ಚೀನಾದಲ್ಲಿ ಇಸ್ಲಾಂ ಅಹ್ಮದಿಅತ್ತಿನ ಸ್ಥಾಪನೆ**

ಹಝ್ರತ್ ಮಸೀಹ್ ಮೌಊದ್ (ಅ) ರವರ ಪವಿತ್ರ ಕಾಲದಲ್ಲೇ ಅಹ್ಮದಿಅತ್ತಿನ ಗಿಡ ನೆಡಲಾಗಿತ್ತು. ಆದರೆ ಚೀನಾದಲ್ಲಿ ಮೊದಲ ವ್ಯವಸ್ಥಿತವಾದ ಅಹ್ಮದಿಯಾ ಕಚೇರಿ ಸೂಫಿ ಅಬ್ದುಲ್ ಗಫೂರ್ ಸಹಿಬ್ ಭೇರ್ವಿ ಅವರಿಂದ ಸ್ಥಾಪನೆಗೊಂಡಿತು. ಅವರು 27 ಮೇ 1935 ರಂದು ಹಾಂಗ್‌ಕಾಂಗ್ ತಲುಪಿದರು. ಮತ್ತು ಹಲವು ವರ್ಷದವರೆಗೆ ಪ್ರಚಾರ ಕಾರ್ಯ ಕೈಗೊಂಡ ನಂತರ ಮರಳಿ ಖಾದಿಯಾನಿಗೆ ಬಂದರು. ಅವರ ಕಾಲದಲ್ಲಿ ಚೀನಾದಲ್ಲಿ ಅಹ್ಮದಿಯಾ ಜಮಾಅತಿನ ಬುನಾದಿ ಹಾಕಲಾಯಿತು. ಪ್ರಪ್ರಥಮ ಚೀನಿ ಅಹ್ಮದಿ (ಅವರ ಸುದ್ದಿ ಕೇಂದ್ರಕ್ಕೆ ತಲುಪಿತು) ಲೀ ಓಂಗ್ ಕಿಂಗ್ ಫಂಗ್ (Leung King Fung) ಅವರು Kawaishow ಗ್ರಾಮ Santax ಜಿಲ್ಲಾ Kawanteeng ಪ್ರಾಂತಿನ ಪ್ರಜೆಯಾಗಿದ್ದರು.

ಸೂಫಿ ಸಾಹಿಬ್ ಅಲ್ಲಿ ವಾಸವಿರುವಾಗ "ಇಸ್ಲಾಮಿ ಉಸುಲ್ ಈ ಫಿಲಾಸಫಿ," (ಇಸ್ಲಾಂ ಧರ್ಮದ ತತ್ವಜ್ಞಾನ) ಗ್ರಂಥದ ಅನುವಾದ ಚೀನಿ ಭಾಷೆಯಲ್ಲಿ ಮಾಡಿಸಿದರು. ಅದರಿಂದ ಅಹ್ಮದಿಯತ್ತಿನ ಪ್ರಚಾರಕ್ಕೆ ಅನುಕೂಲವಾಯಿತು.

ಸೂಫಿ ಸಆಹಿಬ್ ನಂತರ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರ ಹೇಳಿಕೆ ಮೇರೆಗೆ 16 ಜನವರಿ 1936 ರಂದು ಶೇಖ್ ಅಬ್ದುಲ್

ವಾಹಿದ್ ಸಾಹಿಬ್ ಫಾಜ್ಜಿಲ್ ಅವರನ್ನು ಚೀನಾ ಕಳುಹಿಸಲಾಯಿತು. ಶೇಖ್ ಸಾಹಿಬ್ ಇಸ್ಲಾಂ ಧರ್ಮದ ತತ್ವಜ್ಞಾನ ಚೀನಿ ಅನುವಾದದ ಜೊತೆಯಲ್ಲಿ ಕೆಲ ಪ್ರಚಾರ ಪತ್ರಗಳನ್ನು ಸಹ ಅಧಿಕ ಸಂಖ್ಯೆಯಲ್ಲಿ ಮುದ್ರಿಸಿದರು. ಅವರ ಮೂಲಕವೂ ಹಲವು ಸಜ್ಜನರು ಅಹ್ಮದಿಯತ್ ಸೇರುವಂತಾಯಿತು. ಅವರು 6 ಮಾರ್ಚ್ 1939 ರಂದು ಮರಳಿ ಕೇಂದ್ರಕ್ಕೆ ಬಂದರು.

ಶೇಖ್ ಸಾಹಿಬ್ ಇನ್ನೂ ಚೀನಾದಲ್ಲಿ ಇರುವಾಗಲೇ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ಚೌಧರಿ ಮುಹಮ್ಮದ್ ಇಸಾಖ್ ಸಿಯಾಲೋಚಿ ಅವರನ್ನು 27 ಸೆಪ್ಟೆಂಬರ್ 1937 ರಲ್ಲಿ ಚೀನಾಕ್ಕೆ ಕಳುಹಿಸಿದರು. ಮತ್ತು ತನ್ನ ಲೇಖನಿಯಿಂದ ಈ ಕೆಳಗಿನ ಉಪದೇಶಗಳನ್ನು ಬರೆದುಕೊಟ್ಟರು.

"ಅಲ್ಲಾಹನೊಡನೆಯ ಪ್ರೀತಿ ಎಲ್ಲ ತತ್ವಗಳಲ್ಲಿ ಪ್ರಥಮ ತತ್ವವಾಗಿದೆ. ಅದರಲ್ಲಿಯೇ ಎಲ್ಲಾ ಅನುಗ್ರಹಗಳು ಮತ್ತು ಎಲ್ಲ ರೀತಿಯ ಹಿತ ಅಡಗಿದೆ. ಅಲ್ಲಾಹನೊಡನೆ ನೈಜ ಪ್ರೀತಿ ಸಾಧಿಸುವವನು ಎಂದೂ ವಿಫಲನಾಗುವುದಿಲ್ಲ. ಮತ್ತು ಎಡವುದಿಲ್ಲ. ನಮಾಝುಗಳನ್ನು ಮನ:ಪೂರ್ವಕವಾಗಿ ನಿರ್ವಹಿಸಬೇಕು ಮತ್ತು ತಪ್ಪದೇ ನಿರ್ವಹಿಸಬೇಕು. ದೈವಸ್ಮರಣೆ, ಉಪವಾಸ, ಜಪ (ಮುರಾಖಬ) ಅಂದರೆ ಆತ್ಮಾವಲೋಕನೆ ಮಾಡುತ್ತಿರಬೇಕು ಕಡಿಮೆ ನಿದ್ರಿಸಬೇಕು, ಕಡಿಮೆ ಊಟ ಮಾಡಬೇಕು. ಧರ್ಮದ ವಿಷಯದಲ್ಲಿ ತಮಾಷೆಯ ನುಡಿ ನುಡಿಯಬಾರದು, ಆಲಿಸಬಾರದು. ಸೃಷ್ಟಿಯ ಸೇವೆ ಮಾಡಬೇಕು. ಸಂಘಟನೆಗೆ ವಿಧೇಯರಾಗಿರಬೇಕು. ಅದರಲ್ಲಿ ಯಾವ ಒರತೆಯೂ ಆಗಬಾರದು. ಇವೆಲ್ಲಾ ಇಸ್ಲಾಂ ಧರ್ಮದ ಉನ್ನತ ತತ್ವಗಳಾಗಿವೆ.

ಪವಿತ್ರ ಖುರ್‌ಆನ್ ಅನ್ನು ಗಾಂಭೀರ್ಯದಿಂದ ಅಧ್ಯಯನ ಮಾಡಬೇಕು. ಅದು ಜ್ಞಾನವನ್ನು ವೃದ್ಧಿಸುತ್ತದೆ ಮತ್ತು ಮನಶುದ್ಧಿಯಾಗುತ್ತದೆ ಹಾಗೂ ಹೃದಯಕ್ಕೆ ಪ್ರಕಾಶವನ್ನು ನೀಡುತ್ತದೆ. ಸಂಘಟನೆಯ ಗ್ರಂಥಗಳನ್ನು ಮತ್ತು ಪತ್ರಿಕೆಗಳನ್ನು ಅವಶ್ಯವಾಗಿ ಅಧ್ಯಯನ ಮಾಡಬೇಕು.

ಅಲ್ಲಾಹನ ಪ್ರವಾದಿ(ಸ) ಮತ್ತು ಮಸೀಹ್ ಮೌಊದ್(ಅ) ಅವರ ಗುಲಾಮರೊಡನೆಯ ಪ್ರೀತಿ ಅಲ್ಲಾಹನ ಪ್ರೀತಿಯದ್ದೆ ಒಂದು ಭಾಗವಾಗಿದೆ. ಮುಹಮ್ಮದ್(ಸ) ರವರಂತಹ ಪ್ರವಾದಿ ಯಾರೂ ಇಲ್ಲ. ಮಸೀಹ್ ಮೌಊದ್(ಅ) ರವರಂತಹ ನಾಯಿಬ್ (ಸಹಾಯಕ) ಯಾರೂ ಇಲ್ಲ. ಅಲ್ಲಾಹನ ಭಯಭಕ್ತಿ ಒಂದು ಮುಖ್ಯ ಕಾರ್ಯವಾಗಿದೆ. ಬಹಳಷ್ಟು ಜನರು ಆ ವಿಷಯ ತಿಳಿಯಲು ಬಯಸುವುದಿಲ್ಲ ಮತ್ತು ಅದರಂತೆ ನಡೆಯುವುದೂ ಇಲ್ಲ. ಸಂಘಟನೆಯ ಗೌರವ ಯಾವಾಗಲೂ ಕಾಪಾಡಬೇಕು. ದೂರದೃಷ್ಟಿ ಹೊಂದಿರಬೇಕು. ಸೋಲು ಒಪ್ಪಿಕೊಳ್ಳಬಾರದು ಮತ್ತು ಇಸ್ಲಾಂ ಅಹ್ಮದಿಅತ್ತಿನ ಶ್ರೇಯೋಭಿವೃದ್ಧಿಯನ್ನೇ ತನ್ನ ಗುರಿಯಾಗಿಟ್ಟುಕೊಳ್ಳಬೇಕು.

ಖಾಕ್ಸಾರ್ - ಮಿರ್ಝಾ ಮೆಹ್ಮೂದ್ ಅಹ್ಮದ್"

ಚೌಧರಿ ಮುಹಮ್ಮದ್ ಇಸಾಖ್ ಸಾಹಿಬ್ ಸುಮಾರು ಮೂರು ವರ್ಷದವರೆಗೆ ಚೀನಾದಲ್ಲಿ ಅಹ್ಮದಿಯತ್ತಿನ ಪ್ರಕಾಶ ಬೀರುತ್ತಾ ಏಪ್ರಿಲ್ 1941ರಂದು ಖಾದಿಯಾನಿಗೆ ಮರಳಿ ಬಂದರು. (ತಾರೀಖೆ ಅಹ್ಮದಿಯತ್) ಚೀನಾದಲ್ಲಿ ಈ ನೆಲದಿಂದ ಎಂತಹ ಸಜ್ಜನ ಆತ್ಮಗಳನ್ನು ನೀಡಿದರೆಂದರೆ ಅವರು ಚೀನಿ ಭಾಷೆಯಲ್ಲಿ ಇಸ್ಲಾಮಿನ ಪ್ರಚಾರದ ಹೊಣೆಯನ್ನು ಅತ್ಯಂತ ಸಮರ್ಪಣಾಭಾವದಿಂದ ನಿಭಾಯಿಸಿದರು. ಆ ಸಜ್ಜನ ಆತ್ಮಗಳಲ್ಲಿ ಸರ್ವಶ್ರೇಷ್ಠ ಹೆಸರೆಂದರೆ, ಮು. ಮುಹಮ್ಮದ್ ಉಸ್ಮಾನ್ ಜೋ ಚುಂಗ್ ಶೀ ಸಾಹಿಬ್ ಅವರದ್ದಾಗಿದೆ. ಅವರು 13 ಡಿಸೆಂಬರ್ 1925 ರಲ್ಲಿ ಚೀನಾದ ಪ್ರಾಂತ್ಯ ಆನ್‌ಖೂಯಿಯಲ್ಲಿ ಜನ್ಮ ಪಡೆದರು. ಅವರು ದ್ವಿತೀಯ ಖಿಲಾಫತ್ ಕಾಲದಲ್ಲಿ ಅಹ್ಮದಿಯತ್ ಸ್ವೀಕರಿಸಿದರು. ಅವರು 13 ಏಪ್ರಿಲ್ 2018 ರಂದು ಇಂಗ್ಲೆಂಡ್‌ನಲ್ಲಿ ನಿಧನಗೊಂಡರು.

ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು(ಅಬಿಅ) ಅವರ ನಿಧನದ ಕುರಿತು ಕುತುಬಾ ಜುಮುಅದಲ್ಲಿ ಅವರ ಧಾರ್ಮಿಕ ಸೇವೆಗಳು ಮತ್ತು ಪವಿತ್ರ ನಡತೆಯ ಕುರಿತು ಗುಣಗಾನ ಮಾಡಿದರು. ಅವರು ಚೀನಿ ಭಾಷೆಯರಿಗೆ ಅರ್ಥವಾಗುವಂತೆ ಇಸ್ಲಾಂ ಅಹ್ಮದಿಯತ್ತಿನ ಸಾಹಿತ್ಯಗಳು ಒದಗಿಸಿಕೊಟ್ಟರು. ಚೀನಿ ಭಾಷೆಯಲ್ಲಿ ಪವಿತ್ರ ಖುರ್‌ಆನ್‌ನ ಅನುವಾದ ಮಾಡಿದರು. ಕೆಲ ಚೀನಿ ವಿದ್ವಾಂಸರು ಸಹ ಆ ಅನುವಾದವನ್ನು ಒಂದು ದೊಡ್ಡ ಸಾಧನೆ ಎಂದು ಪ್ರಶಂಸಿಸಿದ್ದಾರೆ.

ಚೀನಿ ಭಾಷೆಯಲ್ಲಿ ಇಸ್ಲಾಂ ಅಹ್ಮದಿಅತ್ತಿನ ಸಾಹಿತ್ಯ ತಯಾರಿಕೆಗಾಗಿ ಒಂದು ಆಧುನಿಕ ಚೀನಿ ವೆಬ್‌ಸೈಟ್ ಜಾರಿಗೆ ಬಂದಿರುತ್ತದೆ. ಅಲ್ಲದೇ ಚೀನಿ ಭಾಷೆಯಲ್ಲಿ ಇಸ್ಲಾಂ ಅಹ್ಮದಿಅತ್ ಪ್ರಸಾರಕ್ಕಾಗಿ ಚೀನಿ Desk ಸ್ಥಾಪನೆಯಿಂದ ಚೀನಾದಲ್ಲಿ ಇಸ್ಲಾಂ ಅಹ್ಮದಿಅತ್ತಿನ ಪ್ರಚಾರ, ಪ್ರಸಾರಕ್ಕಾಗಿ ವ್ಯವಸ್ಥಿತ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

**ಜಪಾನಿನಲ್ಲಿ ಇಸ್ಲಾಂ ಅಹ್ಮದಿಅತ್‌ನ ಕೇಂದ್ರ ಸ್ಥಾಪನೆ**

ಹಝ್ರತ್ ಮಸೀಹ್ ಮೌಊದ್(ಅ) ರವರ ಪವಿತ್ರ ಕಾಲದಲ್ಲಿಯೇ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್(ರ) ರವರ ಪ್ರಚಾರ ಪತ್ರಗಳ ಮೂಲಕ ಜಪಾನಿನಲ್ಲಿ ಇಸ್ಲಾಂ ಅಹ್ಮದಿಅತ್ತಿನ ಸಂದೇಶ ತಲುಪಿ ಆಗಿತ್ತು. ಆದರೆ ಈ ದೇಶದಲ್ಲಿ ವ್ಯವಸ್ಥಿತವಾದ ಕೇಂದ್ರ ಸ್ಥಾಪನೆಯು ಮು. ಸೂಫಿ ಅಬ್ದುಲ್ ಖದೀರ್ ನಿಯಾಝ್ ಸಾಹಿಬ್ 4 ಜೂನ್ 1935 ರಂದು ಜಪಾನಿನ ಕಡಲು ನಗರ **"ಕೂವೇ"** ತಲುಪಿದ ನಂತರವಾಯಿತು. ಅವರು ಜಮಾಅತಿನ ವತಿಯಿಂದ ಆಗಮಿಸಿದ ಪ್ರಥಮ ಮುಬಲ್ಲಿಗರಾಗಿದ್ದರು. ಅವರು ಜಪಾನ್ ವಾಸ ಮಾಡಿದಾಗ ಜಪಾನಿ ಭಾಷೆಯ ಕುರಿತು ಭಾಷಣಗಳ ಮೂಲಕ ಪ್ರಚಾರ ಮಾಡಿದರು. ಇಸ್ಲಾಮಿನ ಪ್ರಚಾರ ಒಳಗೊಂಡ ಸಾಹಿತ್ಯ ತಯಾರಿಸಿದರು. ಜಾತಿಕ ಎರಡನೆಯ ಮಹಾಯುದ್ಧ ಪ್ರಾರಂಭಕ್ಕಿಂತ ಕೆಲ ಅವಧಿಗೆ ಮುಂಚೆ, ಸಂಶಯದಿಂದ ಜಪಾನಿ ಸಂಸ್ಥೆಗಳು ಅವರನ್ನು ಬಂಧಿಸಿದರು ಮತ್ತು ತನಿಖೆಯ ನಂತರ ಅವರನ್ನು ಬಿಡುಗಡೆ ಮಾಡಿದರು.

ಅವರು ಇನ್ನೂ ಜಪಾನಿನಲ್ಲಿಯೇ ಇದ್ದರು. ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯ(ರ) 10 ಜನವರಿ 1937 ರಂದು ಮೌಲ್ವಿ ಅಬ್ದುಲ್ ಗಫೂರ್ ಸಾಹಿಬ್ ಅವರಿಗೆ ಜಪಾನ್‌ಗೆ ಕಳುಹಿಸಿದರು. ಅವರನ್ನು ಜಪಾನ್‌ಗೆ ಕಳುಹಿಸಲು ಹುಝೂರ್ (ರ)ಕೆಲ ಉಪದೇಶಗಳನ್ನು ನುಡಿದರು. ಅವು ದೂರದ ಪೂರ್ವ ದೇಶಗಳಲ್ಲಿ ಕಾರ್ಯ ನಿರತರಾಗಿರುವ ಮುಬಲ್ಲಿಗರಿಗೆ ಮತ್ತು ದಾಯಿ ಇಲಲ್ಲಾಹ್ ಅವರಿಗೆ ಒಂದು ಉಪಯುಕ್ತ ನಡವಳಿಕೆಯಾಗಿದೆ. (ತಾರೀಖ್ ಅಹ್ಮದಿಅತ್, ಸಂಪುಟ-8, ಪುಟ 219-222)

ಅನಂತರ ಎರಡನೇ ಮಹಾಯುದ್ಧದ ಕಾರಣದಿಂದ ಜಪಾನಿಗೆ ಮುಬಲ್ಲಿಗರು ಕಳುಹಿಸುವ ಕಾರ್ಯದಲ್ಲಿ ಅಡಚಣೆ ಉಂಟಾಯಿತು. ಆದರೆ ತೃತೀಯ ಖಿಲಾಫತ್ ಕಾಲದಲ್ಲಿಯೇ 1960ರಿಂದ ಇಲ್ಲಿಯವರೆಗೆ ಮುಬಲ್ಲೀನರು ಮತ್ತು ಜಮಾಅತ್ ಬಾಂಧವರು ಹಜ್‌ರತ್ ಮಸೀಹ್ ಮೌಊದ್(ಅ) ರವರ ಖಲಿಫತುರುಗಳ ಮಾರ್ಗದರ್ಶನದಲ್ಲಿ ಇಸ್ಲಾಂ ಧರ್ಮದ ಸೇವೆ ಪ್ರಚಾರ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ದ್ವಿತೀಯ ಖಿಲಾಫತ್ ಕಾಲದಲ್ಲಿ ಮು. ಮುಹಮ್ಮದ್ ಆವೇಸ್ ಕೂಬಾಯಾಶಿ ಸಾಹಿಬ್ ಅವರ ಇಸ್ಲಾಂ ಅಹ್ಮದಿಯತ್ ಸ್ವೀಕರಿಸುವಿಕೆ, ತೃತೀಯ ಖಿಲಾಫತ್ ಕಾಲದಲ್ಲಿ ನಾಗೋಯದಲ್ಲಿ ಕೇಂದ್ರಕ್ಕಾಗಿ ಭೂಮಿ ಖರೀದಿಸಿ, ಚತುರ್ಥ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನ್‌ನ ಜಪಾನ್ ಭಾಷೆಯ ಅನುವಾದ ಮತ್ತು ಪ್ರಸಾರ, ಪಂಚಮ ಖಿಲಾಫತ್ ಕಾಲದಲ್ಲಿ ಮಸ್ಜಿದ್ ಬೈತುಲ್ ಅಹ್ದ್ ನಿರ್ಮಾಣ, ಜಪಾನ್ ಅಹ್ಮದಿಯ ಇತಿಹಾಸದಲ್ಲಿ ಘಟಿಸಿದ ಮುಖ್ಯ ಸಾಧನೆಗಳಾಗಿವೆ.

**ಇಂಡೋನೇಷ್ಯಾದಲ್ಲಿ ಇಸ್ಲಾಂ ಅಹ್ಮದಿಅತ್ತಿನ ಬೀಜ ಬಿತ್ತುವಿಕೆ**

1923 ರಲ್ಲಿ ಸಾಮ್ರಾಟ್‌ನಿಂದ ನಾಲ್ಕು ಯುವಕರು ಮು. ಮೌಲ್ವಿ ಅಬೂಬಕರ್ ಅಯ್ಯೂಬ್ ಸಾಹಿಬ್, ಮೌಲ್ವಿ ಅಹ್ಮದ್ ನೂರುದ್ದೀನ್ ಸಾಹಿಬ್ ಮೌಲ್ವಿ ಜೈನಿ ದಹ್ಲಾನ್ ಸಾಹಿಬ್ ಮತ್ತು ಹಾಜಿ ಮಹ್ಮೂದ್ ಸಾಹಿಬ್ ಧಾರ್ಮಿಕ ಶಿಕ್ಷಣ ಪಡೆಯಲು ಸಾಮ್ರಾಟದಿಂದ ಭಾರತಕ್ಕೆ ಬಂದರು. ಅಲ್ಲಾಹನ ವಿಧಿಯು ಅವರಿಗೆ ಕೋಲ್ಕತ್ತ, ಲಕ್ನೋ, ಲಾಹೋರ್‌ನ ನಂತರ ಖಾದಿಯಾನಿಗೆ ಎಳೆದು ತಂದಿತು. ಆಗಸ್ಟ್ 1923 ರಲ್ಲಿ ಈ ನಾಲ್ಕೂ ಯುವಕರು ಖಾದಿಯಾನದಲ್ಲಿ ಹಝ್ರತ್ ಖಲಿಫತುಲ್ ಮಸೀಹ್ ದ್ವಿತೀಯರ ಸಮ್ಮುಖದಲ್ಲಿ ಹಾಜರಾದರು ಮತ್ತು ತಮ್ಮ ಧಾರ್ಮಿಕ ಶಿಕ್ಷಣದ ವ್ಯವಸ್ಥೆ ಮಾಡಲು ಬೇಡಿಕೊಂಡರು. ಹಾಗೆ ಹುಝೂರ್ ಅವರ ಬೇಡಿಕೆ ಮನ್ನಿಸಿ ಅವರ ಶಿಕ್ಷಣಕ್ಕೆ ಅನುಕೂಲ ಮಾಡಿಕೊಟ್ಟರು. ಶಿಕ್ಷಣದ ನಡುವೆಯೇ ಅವರಿಗೆ ಅಹ್ಮದಿಅತ್ತಿನ ನೈಜತೆ ತಿಳಿಯಿತು. ಮತ್ತು ಅವರುಗಳು ಅಹ್ಮದಿಅತ್ ಸ್ವೀಕರಿಸಿದರು. ಖಾದಿಯಾನಿನಲ್ಲಿ ಬೈಅತ್ ಮಾಡಿದ ಇಂಡೋನೇಷಿಯನ್ ಯುವಕರು ಹೇಳಿದ ನಂತರ ತನ್ನ ದೇಶವನ್ನು ಅಹ್ಮದಿಅತ್ತಿನ ಪ್ರಕಾಶ ತಲುಪಿಸಲು ಪ್ರಯತ್ನ ನಡೆಸಿದರು. ಅಲ್ಲೇ ಕುಳಿತ ಜಾಗದಿಂದಲೇ ಅಂದರೆ ಖಾದಿಯಾನದಿಂದಲೇ ಅವರು ತಮ್ಮ ಸಂಬಂಧಿಕರಿಗೆ ಪ್ರಚಾರಾತ್ಮಕ ಪತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಹೀಗೆ ಇಂಡೋನೇಷ್ಯಾದಲ್ಲಿ ಪ್ರಚಾರ ಕೈಗೊಳ್ಳಲು ಹಾದಿ ಸುಗಮವಾಗತೊಡಗಿತು. ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು 29 ನವೆಂಬರ್ 1924ರಲ್ಲಿ ಯೂರೋಪ್ ಪ್ರವಾಸದಿಂದ ಮರಳಿ ಬಂದಾಗ ಒಂದು ಸನ್ಮಾನ

ಸಮಾರಂಭ ಏರ್ಪಡಿಸಿದರು. ಈ ಸಮಾರಂಭದಲ್ಲಿ ಇಂಡೋನೇಷ್ಯಾದಿಂದ ಬಂದ ಈ ವಿದ್ಯಾರ್ಥಿಗಳು ಪೂರ್ವದ ಈ ದ್ವೇಷಗಳನ್ನು ನಿಗಾವಹಿಸಲು ವಿನಂತಿಸಿಕೊಂಡರು. ಆಗ ಹುಝೂರ್‌ರವರು ವಾಗ್ದಾನ ಮಾಡಿದರು. ಇನ್‌ಶಾಅಲ್ಲಾಹ್ ಸ್ವತಃ ನಾನು ಅಥವಾ ನನ್ನ ಪ್ರತಿನಿಧಿ ನಿಮ್ಮ ದೇಶಗಳಿಗೆ ಬರುವೆವು. ಅಂದಹಾಗೆ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು ಹಝ್ರತ್ ಮೌಲ್ವಿ ರಹಮತ್ ಅಲಿ ಸಾಹಿಬ್ ಅವರನ್ನು ಆಯ್ಕೆ ಮಾಡಿಕೊಂಡರು ಮತ್ತು ಅವರಿಗೆ ಅಲ್ಲಿ ಕಳುಹಿಸಿದರು. ಅವರು ಸಮುದ್ರ ಮಾರ್ಗದಿಂದ ಪ್ರಯಾಣ ಮಾಡಿ ಸೆಪ್ಟೆಂಬರ್ 1925 ರಂದು ಆ ದೇಶಕ್ಕೆ ತಲುಪಿದರು. ಮೊಟ್ಟ ಮೊದಲಾಗಿ ಒಂದು ಸಣ್ಣ ಗ್ರಾಮ "ತಾಪತುಆನ್" (Tapatuan) ನಲ್ಲಿ ಬಂದಿಳಿದರು. ಅಲ್ಲಿಯ ಸಂಸ್ಕೃತಿ ಸಮಾಜ ಬೇರೆಯೇ ಆಗಿತ್ತು. ಭಾಷೆ ಬೇರೆಯಾಗಿತ್ತು. ಜನರು ಅಪರಿಚಿತರಾಗಿದ್ದರು. ತನ್ನವರು ಎನ್ನುವವರು ಯಾರೂ ಇರಲಿಲ್ಲ. ಆದರೆ ಇವೆಲ್ಲಾ ಪ್ರಾರಂಬಿಕ ಹಂತಗಳನ್ನು ಮತ್ತು ಕಷ್ಟಗಳನ್ನು ಹಝ್ರತ್ ಮೌಲ್ವಿ ಸಾಹಿಬ್ ಧೈರ್ಯದಿಂದ ಎದುರಿಸಿದರು. ಅದು ಯಾವುದೂ ಅವರಿಗೆ ಅಡ್ಡ ಬರಲಿಲ್ಲ. ಅಲ್ಲಿಯ ಭಾಷೆ ಕಲಿಯುವ ಜೊತೆ ಜೊತೆಯಲಿ ಅವರು ವೈಯಕ್ತಿಕವಾಗಿಯೂ ಪ್ರಚಾರ ಪ್ರಾರಂಭಿಸಿದರು. ಮತ್ತೆ ಉಲಮಾಅಗಳೊಡನೆ (ಪಂಡಿತರೊಡನೆ) ಚರ್ಚಾಕೂಟಗಳನ್ನು ನಡೆಸಿದರು. ಹಝ್ರತ್ ಮೌಲ್ವಿ ಸಾಹಿಬರಿಗೆ ಅಲ್ಲಾಹನು ತನ್ನ ಅನುಗ್ರಹ ದಯಪಾಲಿಸಿದನು. ಕೆಲ ತಿಂಗಳುಗಳಲ್ಲಿಯೇ ಅಲಾಹನ ಅನುಗ್ರಹದಿಂದ ಇಂಡೋನೇಷ್ಯಾದಲ್ಲಿ ಮೊದಲ ಜಮಾಅತ್ ಸ್ಥಾಪನೆಯಾಯಿತು. 8 ಜನರು ಬೈಅತ್ ಮಾಡಿದರು. ಅದಾದ ನಂತರ ಹೆಚ್ಚಿನ ಬೈಅತ್‌ಗಳು ಆಗತೊಡಗಿತು. ಹಝ್ರತ್ ಮೌಲ್ವಿ ಸಾಹಿಬರಿಗೆ ಪ್ರಾರಂಭದಲ್ಲಿ ತುಂಬಾ ಕಷ್ಟಗಳನ್ನು ಎದುರಿಸಬೇಕಾಯಿತು. ಸಂಸ್ಕೃತಿ ಬೇರೆಯಾಗಿತ್ತು. ಸಮಾಜದ ರೀತಿನೀತಿಗಳು ವಿರೋಧವು ಪ್ರಾರಂಭವಾಯಿತು. ಆದರೆ ಮೌಲ್ವಿ ಸಾಹಿಬ್ ಎದೆಗುಂದಲಿಲ್ಲ. ಅವರ ಮೇಲೆ ಹತೋಟಿ ಪಡೆದರು ಉಲಮಾಅಗಳು (ಮತಪಂಡಿತರು) ಅಲ್ಲಿ ಫತ್ವಾ ನೀಡಿದರು. ಅಹ್ಮದಿಯರ ಗ್ರಂಥಗಳಾಗಲಿ, ಪತ್ರಿಕೆಗಳಾಗಲಿ ಓದಬಾರದು, ಅವರ ಭಾಷಣ ಕೇಳಬಾರದು. ಸ್ಥಳೀಯವಾಗಿ ಅಹ್ಮದಿಯರ ಸಂಖ್ಯೆ ಹೆಚ್ಚಗತೊಡಗುತ್ತಲೇ ಅವರಿಗೆ ಬಹಿಷ್ಕಾರ ಹಾಕಲು ಪ್ರಾರಂಭಿಸಿದರು. ಎಲ್ಲಿಯವರೆಗೆ ಎಂದರೆ ಪತ್ರಿಕೆಗಳಲ್ಲಿ ಯಾವ ಸುದ್ಧಿಯೂ ಪ್ರಕಟಿಸಲು ತಯಾರಿರಲಿಲ್ಲ. ಯಾವ ಪ್ರಬಂಧವು ಪ್ರಕಟಿಸಲು ತಯಾರಿರಲಿಲ್ಲ. ಮೂರು ಮೂರು ಸಾವಿರ ಜನರ ಜಾಥಗಳು ಸೇರಿ ಮೌಲ್ವಿ ಸಾಹಿಬರ ವಸತಿ ಬಳಿಗೆ ಬಂದು ಅವರ ಎದುರು ಘೋಷಣೆಗಳನ್ನು ಕೂಗುತ್ತಿದ್ದರು. ವಿವಿಧ ರೀತಿಯ ಮನ ನೋಯಿಸುವಂತಹ ಘೋಷಣೆಗಳು ಹಾಕುತ್ತಿದ್ದರು. ಬೈಯ್ಯುತ್ತಿದ್ದರು. ಅದರ ಬೆನ್ನತ್ತಿ ಹಾಜಿ ಮಹ್ಮೂದ್ ಸಾಹಿಬ್ ಅಲ್ಲಿಗೆ ಬಂದರು. ಮೌಲ್ವಿಗಳು ಹೇಗೋ ಬಲವಂತ ಮಾಡಿ ಅವರಿಂದ ನಾನು ಅಹ್ಮದಿಅತ್ ತ್ಯಜಿಸುತ್ತೇನೆ ಎಂಬ ಹೇಳಿಕೆ ಬರೆದುಕೊಂಡು ಪತ್ರಿಕೆಯಲ್ಲಿ ಪ್ರಕಟಪಡಿಸಿದರು. ದಾಂದಲೆ ಮಾಡಿ ಹಲ್ಲೆಮಾಡಿದರು. ಹೀಗೆ ಮೌಲ್ವಿ ಸಾಹಿಬರ ವಿರುದ್ಧ ವಿರೋಧ ಇನ್ನಷ್ಟು ಜೋರಾಯಿತು. ಆದರೆ ಹಾಜಿ ಮಹ್ಮೂದ್ ಸಾಹಿಬ್ ತನ್ನನ್ನು ಸುಧಾರಿಸಿಕೊಂಡರು. ಮತ್ತು ಮೌಲ್ವಿಗಳಿಂದ ಬಚಾವಾದರು. ಅಲ್ಲಾಹನು ಅವರನ್ನು ರಕ್ಷಿಸಿದನು ನಮ್ಮ ತಂತ್ರಗಳೆಲ್ಲ ವಿಫಲವಾಗಿವೆ ಎಂಬ ವಿಷಯ ಮೌಲ್ವಿಗಳಿಗೆ ಮನವರಿಕೆಯಾದ ನಂತರ ಎಲ್ಲರೂ ಒಟ್ಟುಗೂಡಿ ಹಝ್ರತ್ ರಹಮತ್ ಅಲಿ ಸಾಹಿಬರನ್ನು ಗಡಿಪಾರು ಮಾಡಲು ಪ್ರಯತ್ನಗಳನ್ನು ಪ್ರಾರಂಭಿಸಿದರು. ಸರಕಾರದ ಪ್ರತಿನಿಧಿಗಳವರೆಗೆ ಹೋದರು. ಆದರೆ ಅಧಿಕಾರಿಗಳು ನಾವು ಧಾರ್ಮಿಕ ವಿಷಯಗಳಲ್ಲಿ ತಲೆಹಾಕುವುದಿಲ್ಲ ಎಂದರು. ಅವರ ಕಿರುಕುಳ ಹೀಗೆ ಮುಂದುವರೆಯಿತು. ಡಿಸೆಂಬರ್ 1927ರಲ್ಲಿ ಅಹ್ಮದಿಯೇತರ ಉಲಮಾಅರೊಡನೆ ಒಂದು ಚರ್ಚಾಕೂಟ ಪಾಡಾಂಗ್‌ನಲ್ಲಿ ಏರ್ಪಡಿಸಲಾಯಿತು. ಅದರಲ್ಲಿ ದೊಡ್ಡ ದೊಡ್ಡ ಉಲಮಾಅಗಳು, ಶೇಖ್‌ಗಳು ಮತ್ತು ಮಾಧ್ಯಮ ವರ್ಗದವರು ಹಾಗೂ ಸರಕಾರಿ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಚರ್ಚಾಕೂಟದಲ್ಲಿ ಅಹ್ಮದಿಯಾ ಜಮಾಅತಿನ ಮುಬಲ್ಲಿಗ್ಹ್‌ಗಳು ಅಲ್ಲಾಹನ ಅನುಗ್ರಹದಿಂದ ವಿಜಯ ಸಾಧಿಸಿದರು. ಅದು ವಿಧಿಯ ಪ್ರಕಾರ ಆಗಲೇಬೇಕಾಗಿತ್ತು. ವಿರೋಧಿ ಉಲಮಾಅಗಳು ಸೋಲು ಅನುಭವಿಸುವಂತಾಯಿತು. ಅದರಿಂದಲೇ ಅಹ್ಮದಿಯತ್ತಿನ ಪ್ರಚಾರಕ್ಕಾಗಿ ದಾರಿ ಸುಗಮವಾಯಿತು. ಈ ನಡುವೆ ಇಂಡೋನೇಷ್ಯಾದಲ್ಲಿ Doko ಎಂಬ ಸ್ಥಳದಲ್ಲಿ ಮೂರನೇ ಜಮಾಅತ್ ಸ್ಥಾಪನೆಯಾಯಿತು. (ಆಧಾರ: ಖುತ್‌ಬ ಜುಮುಅ, 11 ಫೆಬ್ರವರಿ 2011)

ಹಝ್ರತ್ ಮಸೀಹ್ ಮೌಊದ್(ಅ) ರವರ ಖಲೀಫರುಗಳ ನಿರಂತರ ಮಾರ್ಗದರ್ಶನ ಮತ್ತು ಆಸಕ್ತಿಯಿಂದಾಗಿ ಇಂದು ಇಂಡೋನೇಷ್ಯಾದಲ್ಲಿ ಒಂದು ದೊಡ್ಡ ಹಾಗೂ ಪ್ರಬಲ ಜಮಾಅತ್ ಸ್ಥಾಪನೆಗೊಂಡಂತಾಗಿದೆ. ಇಂಡೋನೇಷ್ಯಾದಲ್ಲಿ ಜಾಮಿಅಯಾ ಅಹ್ಮದಿಯಾದಿಂದ ಸಿದ್ಧಗೊಳ್ಳುವ ಮುಬಲ್ಲಿಗೀನರು ಇಂಡೋನೇಷ್ಯಾ ಹಾಗೂ ಇತರ ದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಎಂ.ಟಿ.ಎ ಮೂಲಕ ಬಿತ್ತರಗೊಳ್ಳುವ ಇಂಡೋನೇಷಿಯನ್ ಸರ್ವೀಸ್ ಈ ದೇಶದಲ್ಲಿ ಇಸ್ಲಾಮ್ ಅಹ್ಮದಿಅತ್ತಿನ ಪ್ರಸಾರಕ್ಕಾಗಿ ಮುಖ್ಯ ಸಾಧನವಾಗಿದೆ. ಅಲ್ಲದೇ ಇಂಡೋನೇಷಿಯನ್ Desk ಸ್ಥಾಪನೆಯಿಂದಾಗಿ ಇಸ್ಲಾಂ ಅಹ್ಮದಿಅತ್ತಿನ ಸಾಹಿತ್ಯ ರಚನೆ ಮತ್ತು ಪ್ರಚಾರ ಕಾರ್ಯದ ಒಂದು ಸುವ್ಯವಸ್ಥಿತ ಯೋಜನೆ ಕಾರ್ಯರೂಪಕ್ಕೆ ಬಂದಂತಾಗಿದೆ.

**ಸಿಂಗಾಪುರದಲ್ಲಿ ಇಸ್ಲಾಂ ಪ್ರಚಾರದ ಪ್ರಯತ್ನ**

ಮಾನ್ಯ ಮೌಲ್ವಿ ಗುಲಾಂ ಹುಸೇನ್ ಅಮಾಝ್ ಸಾಹಿಬ್ 6 ಮೇ 1935 ರಂದು ಖಾದಿಯಾನಿನಿಂದ ಸಿಂಗಾಪುರ ಹೊರಡಲು ಸಿದ್ಧಗೊಂಡರು. ಅವರು 15 ವರ್ಷಗಳವರೆಗೆ ಸಿಂಗಾಪುರ ಮತ್ತು ಅದಕ್ಕೆ ಒಳಗೊಂಡ ಕೇತ್ರಗಳಲ್ಲಿ ಇಸ್ಲಾಂ ಅಹ್ಮದಿಅತ್ತಿನ ಸಂದೇಶ ತಲುಪಿಸಲು ಸಕ್ರಿಯರಾಗಿದ್ದರು. ಎರಡನೇ ಮಹಾಯುದ್ಧದ ವೇಳೆ ಕಠಿಣ ಪರಿಸ್ಥಿತಿಗಳು ಎದುರಿಸಬೇಕಾಯಿತು. ಕೆಲ ಅವಧಿಯವರೆಗೆ ಅವರು ಜಪಾನ್ ಸೈನ್ಯದ ಸೆರೆಯಲ್ಲಿ ಇರಬೇಕಾಯಿತು. ಅವರ ಪ್ರಚಾರ ಕಾರ್ಯಗಳು ಫಲಪ್ರದವಾದವು ಮತ್ತು 1937 ರಲ್ಲಿ ಮಾನ್ಯ ಹಾಜಿ ಜಾಫರ್ ಸಾಹಿಬ್ ಅಹ್ಮದಿಅತ್ತಿಗೆ ಸೇರ್ಪಡೆಯಾದರು. ಅವರು ತುಂಬಾ ನಿಷ್ಠಾವಂತ ಅಹ್ಮದಿಯಾಗಿದ್ದರು.

1947 ರಲ್ಲಿ ಸಿಂಗಾಪುರದಲ್ಲಿ 19 ಸಾವಿರ 137 ಚದುರಮೀಟರ್ ಭೂಮಿ ಖರೀದಿಸಿ ಇಸ್ಲಾಂ ಅಹ್ಮದಿಅತ್ತಿನ ಒಂದು ಸುವ್ಯವಸ್ಥಿತ ಕೇಂದ್ರ ಸ್ಥಾಪಿಸಿದರು. 1983 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಹ) ತಮ್ಮ ಸಿಂಗಾಪುರ ಪ್ರವಾಸದ ವೇಳೆ ಮಸ್ಜಿದ್ ತಾಹಾದ ಅಡಿಗಲ್ಲು ಹಾಕಿದರು. ಈ ಮಸ್ಜಿದ್ ಸಿಂಗಾಪುರದ ಕೇಂದ್ರವಾಗಿದೆ.

ಮಾನ್ಯ ಮೌಲ್ವಿ ಗುಲಾಂ ಹುಸೇನ್ ಅಯಾಝ್ ಸಾಹಿಬ್ ಅವರ ಹಗಲಿರುಳಿನ ಪ್ರಯತ್ನದಿಂದಾಗಿ ಕೇವಲ ಸಿಂಗಾಪುರವಲ್ಲದೇ ಮಲಾರ್, ಜೋಹರ್‌ಬರೂ ಮತ್ತು ಇಂಡೋನೇಷ್ಯಾ ಮಲೇಶಿಯಾದ ಇತರ ದೇಶಗಳಲ್ಲೂ ಇಸ್ಲಾಂ ಅಹ್ಮದಿಯತ್ತಿನ ಸಂದೇಶ ತಲುಪಿಸಿದರು ಮತ್ತು ಹಲವು ಸಜ್ಜನರು ಅಹ್ಮದಿಅತ್ತಿಗೆ ಸೇರಿದರು.

**ದೂರದ ಪೂರ್ವ ದೇಶಗಳಿಗೆ ಖಲೀಫರುಗಳು ಕೈಗೊಂಡ ಪ್ರವಾಸಗಳು**

ಅಹ್ಮದಿಯಾ ಜಮಾಅತ್ ಸ್ಥಾಪನೆಗೊಂಡ ಪ್ರಾರಂಭದಲ್ಲಿಂದಲೇ ದೂರದ ಪೂರ್ವದಲ್ಲೂ ಇಸ್ಲಾಂ ಪ್ರಚಾರದ ಪ್ರಯತ್ನಗಳು ನಡೆಯುತ್ತಲೇ ಇವೆ. ದ್ವಿತೀಯ ಖಿಲಾಫತ್ ಕಾಲದಲ್ಲಿಯೇ ದೂರದ ಪೂರ್ವದಲ್ಲಿ ವಿಧಿಬದ್ಧ ರೀತಿಯಲ್ಲಿ ಮುಬಲ್ಲಿಗ್ಹೀನರಿಗೆ (ಪ್ರಚಾರಕರಿಗೆ) ಇಸ್ಲಾಂ ಧರ್ಮದ ಪ್ರಚಾರಕ್ಕಾಗಿ ಒಂದು ಸುವ್ಯವಸ್ಥಿತ ಬುನಾದಿ ಹಾಕಲ್ಪಟ್ಟಿತ್ತು. ಆದರೆ ಜಾಗತಿಕ ಸಂಘಟನೆಯ ನೇತೃತ್ವ ವಹಿಸಿರುವ ಮಸೀಹ್ ಮೌಊದ್(ಅ) ರವರ ಖಲೀಫರುಗಳ ಆಗಮನದೊಂದಿಗೆ ದೂರದ ಪೂರ್ವ ದೇಶಗಳಲ್ಲಿ ಇಸ್ಲಾಮ್ ಅಹ್ಮದಿಯತ್ತಿನ ಪ್ರಗತಿ ಉತ್ತುಂಗಕ್ಕೆ ತಲುಪಿತು. ದೂರದ ಪೂರ್ವ ದೇಶಗಳಿಗೆ ಖಲೀಫರುಗಳು ಕೈಗೊಂಡ ಪ್ರವಾಸದ ಪಟ್ಟಿ ಇಂತಿದೆ.

**ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ)**

ಸಿಂಗಾಪೂರ್ ಆಗಸ್ಟ್ 1983
ಆಸ್ಟ್ರೇಪಿಯಾ 25 ಸೆಪ್ಟೆಮಬರ್ ರೀಂಂದ 7 ಅಕ್ಟೋಬರ್ 1983
ಫಿಜೀ ಸೆಪ್ಟೆಂಬರ್ 1983
ಆಸ್ಟ್ರೇಲಿಯಾ 4 ಜೂಲ್ಯೆ ರಿಂದ 18 ಜುಲ್ಯೆ 1989
ಜಾಪಾನ್ 24 ಜುಲ್ಯೆ ರಿಂದ 28 ಜುಲ್ಯೆ 1989
ಇಂಡೋನಷಿಯಾ 19 ಜೂನ್‌ರಿಂದ 11 ಜುಲ್ಯೆ 2000

**ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)**

ಸಿಂಗಾಪೂರ್ 5 ಏಪ್ರಿಲ್ ರಿಂ 10 ಏಪ್ರಿಲ್ 2006
ಆಸ್ಟ್ರೇಲಿಯಾ 11 ಏಪ್ರಿಲ್ ರಿಂದ 25 ಏಪ್ರಿಲ್ 2006
ಫಿಜೀ 25 ಏಪ್ರಿಲ್ ರಿಂದ 25 ಏಪ್ರಿಲ್ 2006
ಸ್ಯೂಝಿಲ್ಯಾಂಡ್ 4 ಮೇ ರಿಂದ 7 ಮೇ 2006
ಜಾಪಾನ್ 8 ಮೇ ರಿಂದ 14 ಮೇ 2006
ಸಿಂಗಾಪೂರ್ 21 ಸೆಪ್ಟೆಂಬರ್ ರಿಂದ 30 ಸೆಪ್ಟೆಂಬರ
ಆಸ್ಟ್ರೇಲಿಯಾ 1 ಅಕ್ಟೋಬರ್ ರಿಂದ 28 ಅಕ್ಟೋಬರ 2013
ನ್ಯೂಝಿಲ್ಯಾಂಡ್ 28 ಅಕ್ಟೋಬರ್ ರಿಂದ 6 ನವೆಂಬರ್ 2013

ಜಾಪಾನ್ 6 ನವೆಂಬರ್ ರಿಂದ 13 ನವೆಂಬರ್ 2013
ಜಾಪಾನ್ 16 ನವೆಂಬರ್ ರಿಂದ 24 ನವೆಂಬರ್ 2015

**ಸತ್ಯವಾದ ಖಿಲಾಫತ್ತಿನ ನೇತೃತ್ವದಲ್ಲಿ ಇಸ್ಲಾಮಿನ ಪ್ರಚಾರದ ಸುವ್ಯವಸ್ಥಿತ ಯೋಜನೆ**

ಇಸ್ಲಾಂ ಅಹ್ಮದಿಅತ್ತಿನ ಸಂದೇಶ ಪ್ರಪಂಚದಾದ್ಯಂತ ತಲುಪಿಸಲು ಹಝ್ರತ್ ಮಸೀಹ್ ಮೌಊದ್(ಅ) ರವರ ಖಲೀಫರುಗಳ ಆಶ್ರಯ ಮತ್ತು ಮಾರ್ಗದರ್ಶನ ನಿಮಿತ್ತ ದೂರದ ಪೂರ್ವದ ಹೆಚ್ಚಿನ ದೇಶಗಳಲ್ಲಿ ಇಸ್ಲಾಮಿಕ್ ಪ್ರಚಾರದ ಒಂದು ಸುವ್ಯವಸ್ಥಿತ ಯೋಜನೆ ರೂಪುಗೊಂಡಿತ್ತು. ಪೂರ್ವ ದೇಶಗಳ ಮುಖ್ಯ ಭಾಷೆಗಳಾದ ಚೀನಿ, ಜಪಾನಿ, ಇಂಡೋನೇಷಿಯನ್ ಮತ್ತು ಬೆತ್ನಾಮಿ ಸಹಿತ ಇತರ ಭಾಷೆಗಳಲ್ಲಿ ಪವಿತ್ರ ಖುರ್ಆನ್‌ನ ಅನುವಾದಗಳು ಪ್ರಕಟಗೊಂಡಿವೆ.

ದೂರದ ಪೂರ್ವ ದೇಶಗಳಲ್ಲಿ ವಾಸಿಸುವ ಸಾವಿರಾರು ಅಹ್ಮದಿ ಮುಸಲ್ಮಾನರು ಪ್ರಸಕ್ತ ಖಲೀಫರಿಗೆ ಸಹಾಯಹಸ್ತರಾಗಿ ಇಸ್ಲಾಮ್ ಅಹ್ಮದಿಯತ್ತಿನ ಸಂದೇಶದ ಪ್ರಚಾರ ಕಾರ್ಯಗಳಲ್ಲಿ ಸಕ್ರಿಯರಾಗಿದ್ದಾರೆ. ಜಮಾಅತಿನ ಯೋಜನೆಗಳಲ್ಲದೇ ಆ ದೇಶದ ಉಪಸಂಘಟನೆಗಳು, ಸಾಮಾಜಿಕ ಮಾಧ್ಯಮ ತಂಡಗಳು, ವಿವಿಧ ಭಾಷೆಗಳ ವೆಬ್‌ಸೈಟ್ ಮತ್ತು ಎಂ.ಟಿ.ಎ ಮೂಲಕ ದೂರ ದೂರದ ದ್ವೀಪಗಳವರೆಗೆ ಇಸ್ಲಾಂ ಅಹ್ಮದಿಅತ್ತಿನ ಸಂದೇಶ ತಲುಪುತ್ತಿದೆ.

ಚೀನಿ Desk, ಇಂಡೋನೇಷಿಯನ್ Desk ಮತ್ತು ಜಪಾನಿ Desk ಹಝ್ರತ್ ಮಸೀಹ್ ಮೌಊದ್(ಅ) ರವರ ಗ್ರಂಥಗಳ ಅನುವಾದಗಳು, ಖಲೀಫರ ಖುತುಬಗಳು ಮತ್ತು ಭಾಷಣಗಳು ಅಲ್ಲದೇ ಸಮಯಕ್ಕೆ ಅನುಗುಣವಾಗಿ ಬೇಕಾದ ಸಾಹಿತ್ಯ ರಚನೆಯಲ್ಲಿ ಕಾರ್ಯನಿರತರಾಗಿದ್ದಾರೆ.

ಕೇಂದ್ರೀಯ ಮುಬಲ್ಲಿಗ್ಗ್‌ನರ ಹೊರತಾಗಿ ಜಾಮೀಯಾ ಅಹ್ಮದಿಯಾ ಇಂಡೋನೇಷ್ಯಾದಿಂದ ಶಿಕ್ಷಣ ಮುಗಿಸಿದ ಮುಬಲ್ಲಿಗ್ಹೀನರು (ಪ್ರಚಾರಕರು) ದೂರದ ಪೂರ್ವ ದೇಶಗಳಲ್ಲಿ ಮತ್ತು ದ್ವೀಪಗಳಲ್ಲಿ ಹಗಲಿರುಳು ಎನ್ನದೇ ಇಸ್ಲಾಮಿನ ಪ್ರಚಾರಕಾರ್ಯದಲ್ಲಿ ತೊಡಗಿರುತ್ತಾರೆ. ಅಲ್ಲದೇ ದೂರದ ಪೂರ್ವ ದೇಶಗಳಿಗೆ ಈ ಗೌರವವು ಸಲ್ಲುತ್ತದೆ. ಈ ಕ್ಷೇತ್ರಗಳಿಗೆ ಎಂತಹ ನಿಷ್ಠಾವಂತ ಮತ್ತು ಸಮರ್ಪಿತ ತ್ಯಾಗಾರ್ಪಣೆದಾರರು ಲಭಿಸಿದೆ ಎಂದರೆ ಅವರು ತಮ್ಮ ಪ್ರಾಣಗಳನ್ನೇ ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸಿ ಇಸ್ಲಾಮಿನ ಸೇವೆಗೋಸ್ಕರ ಪಣತೊಟ್ಟಿರುತ್ತಾರೆ.

ದೂರದ ಪೂರ್ವದಲ್ಲಿ ಇಸ್ಲಾಂ ಅಹ್ಮದಿಯತ್ತಿನ ಪ್ರಚಾರ ವಿಷಯದಲ್ಲಿ ಕೆಳಗೆ ನಮೂದಿತ ಘಟನೆಗಳು ಸಹ ಐತಿಹಾಸಿಕ ಪ್ರಾಮುಖ್ಯತೆ ಪಡೆದಿವೆ. ಪೂರ್ವ ದೇಶಗಳು ಮತ್ತು ಏಷಿಯನ್ ದೇಶಗಳಲ್ಲಿ ಇಸ್ಲಾಮಿನ ಯಶಸ್ವಿ ಪ್ರಚಾರದ ಸಂಗತಿ ಅಲ್ಲಾಹನ ಸಹಾಯಕ್ಕಾಗಿ ಪ್ರಾರ್ಥಿಸಲು ಸಂಕ್ಷಿಪ್ತವಾಗಿ ಕೆಲ ಘಟನೆಗಳು ಪ್ರಸ್ತುತವಿದೆ.

**ಈಶಾನ್ಯ ಏಷ್ಯಾದಲ್ಲಿ ನಿರ್ಮಿಸಲಾದ ಮೊದಲ ಮಸೀದಿ**

ಮಸ್ಜಿದ್ ಬೈತುಲ್ ಅಹ್ಮದ್ ಜಪಾನಿಗೆ ಈಶಾನ್ಯ ಏಷ್ಯಾ ದೇಶಗಳಲ್ಲಿ ನಿರ್ಮಿಸಲಾದ ಮೊದಲ ಮಸೀದಿ ಎಂಬ ಗೌರವ ಲಭಿಸಿದೆ. ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು(ಅಬಿಅ) ಈ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ಕುತುಬ ಜುಮುಅ ನೀಡುತ್ತಾ ಹೇಳಿದರು.

"ಈ ಮಸೀದಿಯು ಕೇವಲ ಜಪಾನಿಗೆ ಅಲ್ಲದೇ ಈಶಾನ್ಯ ಏಷ್ಯಾದ ದೇಶಗಳಾದ ಚೀನಾ, ಕೋರಿಯಾ, ಹಾಂಗ್‌ಕಾಂಗ್, ತೈವಾನ್ ಇತ್ಯಾದಿಗಳಲ್ಲಿಯೂ ಈ ಮಸೀದಿ ಜಮಾಅತಿನ ಮೊದಲ ಮಸೀದಿಯಾಗಿದೆ. ಅಲ್ಲಾಹನು ಇದನ್ನು ಇತರ ಕಡೆಗಳಲ್ಲಿಯೂ ದಾರಿ ತೆರೆಯುವ ಸಾಧನೆಯನ್ನಾಗಿ ಮಾಡಲಿ ಮತ್ತು ಅಲ್ಲಿಯೂ ಸಹ ಜಮಾಅತ್ ಪ್ರಗತಿ ಸಾಧಿಸುವಂತಾಗಲಿ ಮತ್ತು ಮಸೀದಿಗಳು ನಿರ್ಮಿಸುವಂತಾಗಲಿ."
(ಖುತುಬ ಜುಮುಅ 20 ನವೆಂಬರ್ 2015, ಮುದ್ರಣ ಅಲ್‌ಫಝ್ಲ್ 11 ಡಿಸೆಂಬರ್ 2015, ಪುಟ–8)

**ಆಸ್ಟ್ರೇಲಿಯಾ ಖಂಡದಲ್ಲಿ ಪ್ರಥಮ ಮಸೀದಿಯ ಶಂಕುಸ್ಥಾಪನೆ**

ಆಸ್ಟ್ರೇಲಿಯಾದ ನಗರ ಸಿಡ್ನಿಯಲ್ಲಿ ಮಸ್ಜಿದ್ ಬೈತುಲ್ ಹುದಾ ಶಂಕುಸ್ಥಾಪನೆಯು ಸಹ ಈ ಕ್ಷೇತ್ರದಲ್ಲಿ ಇಸ್ಲಾಂ ಅಹ್ಮದಿಅತ್ ಕಾಲೂರಲು ಮತ್ತು ಪ್ರಚಾರ ನಿಮಿತ್ತ ಅಸಾಮಾನ್ಯ ಪ್ರಾಮುಖ್ಯತೆ ಹೊಂದಿದೆ. ಈ ಮಸೀದಿಯ ಶಂಕುಸ್ಥಾಪನೆ ಹಾಕುವ ಮೊದಲು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ) ಹೇಳಿದರು.

"ಇನ್ನೂ ಕೆಲ ದಿನಗಳಿಗೋಸ್ಕರ ನಾವು ಪೂರ್ವ ದೇಶಗಳ ಪ್ರವಾಸಕ್ಕಾಗಿ ಪಾಕಿಸ್ತಾನದಿಂದ ಹೊರಡುವೆವು. ಮತ್ತು ಈ ಪ್ರವಾಸದಲ್ಲಿ ಆಸ್ಟ್ರೇಲಿಯಾ ಖಂಡದಲ್ಲಿ ಮೊಟ್ಟ ಮೊದಲ ಮಸೀದಿಯ ಶಂಕುಸ್ಥಾಪನೆ ಹಾಕುವ ಮೊದಲು ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು(ರಹ) ಹೇಳೀದರು "ಈಗಲೂ ಕೆಲ ದಿನಗಳಿಗೋಸ್ಕರ ನಾವು ಪೂರ್ವ ದೇಶಗಳ ಪ್ರವಾಸಕ್ಕಾಗಿ ಪಾಕಿಸ್ತಾನದಿಂದ ಹೊರಡುವೆವು. ಮತ್ತು ಈ ಪ್ರವಾಸದಲ್ಲಿ ಆಸ್ಟ್ರೇಲಿಯಾ ಖಂಡದ ಮೊಟ್ಟ ಮೊದಲ ಮಸೀದಿಯ ಶಂಕುಸ್ಥಾಪನೆ ಮಾಡುವ ಕರ್ತವ್ಯ ಪಾಲಿಸಬೇಕಾಗಿದೆ. ಇದು ಮಸೀದಿಯ ಶಂಕುಸ್ಥಾಪನೆಯಾಗಿದೆ ಮತ್ತು ಮಿಷನ್ ಹೌಸ್ (ಕಾರ್ಯಾಲಯ) ದ ಶಂಕುಸ್ಥಾಪನೆಯೂ ಆಗಿದೆ. ಅಂದರೆ ಈ ಮಸೀದಿಯ ಜೊತೆಯಲ್ಲಿ ಒಂದು ಭವ್ಯವಾದ ಮಿಷನ್ ಹೌಸ್ ಕಟ್ಟಡದ ನಿರ್ಮಾಣವು ಆಗುವುದು. ಅಲ್ಲಿ ಮುಬಲ್ಲಿಗರು ತನ್ನ ಎಲ್ಲ ರೀತಿಯ ಕರ್ತವ್ಯಗಳನ್ನು ಪಾಲಿಸುವಂತಾಗುವುದು. ಈ ಪೈಕಿ ಇದು ಜಮಾಅತಿನ ಇತಿಹಾಸದಲ್ಲಿ ಒಂದು ಅತ್ಯಂತ ಮುಖ್ಯ ಮಸೀದಿಯಾಗಿದೆ. ಏಕೆಂದರೆ ಒಂದು ಹೊಸ ಭೂಖಂಡದಲ್ಲಿ ನಮಗೆ ಶಂಕುಸ್ಥಾಪನೆಯ ಭಾಗ್ಯ ದೊರೆಯುತ್ತದೆ. ಇದಕ್ಕಿಂತ ಮುಂಚೆ ಆಸ್ಟ್ರೇಲಿಯಾ ಭೂಖಂಡವು ಖಾಲಿ ಬಿದ್ದಿತ್ತು. ನಾವು ಲೋಕದ ಎಲ್ಲ ಭೂಖಂಡಗಳಲ್ಲಿ ಅಲ್ಲಾಹನ ಅನುಗ್ರಹದಿಂದ ಇಸ್ಲಾಮಿನ ಸಂದೇಶ ತಲುಪಿಸಿದೆವು ಎಂದು ಹೇಳಬಹುದಿತ್ತು. ಆದರೆ ಆಸ್ಟ್ರೇಲಿಯಾದಲ್ಲಿ ಸಂದೇಶ ತಲುಪಿದೆ ಎಂದರೆ ಅದು ವೈಯಕ್ತಿಕ ಪ್ರಯತ್ನಗಳಿಂದ ತಲುಪಿದೆ. ಜಮಾಅತಿನ ವತಿಯಿಂದ ವಿಧಿಬದ್ಧ ರೀತಿಯಲ್ಲಿ ಯಾವ ಮಸೀದಿ ಅಥವಾ ಮಿಷನ್ ಹೌಸ್ ನಿರ್ಮಿಸಲಾಗಿರಲಿಲ್ಲ. (ಖುತುಬ ಜುಮುಅ 2 ಸೆಪ್ಟೆಂಬರ್ 1983, ರೋಝ್ನಾಮ ಅಲ್‌ಫಝ್ಲ್ ರಬ್ವಾಹ್ 18 ಡಿಸೆಂಬರ್ 2006, ಪುಟ–37)

**ಆಸ್ಟ್ರೇಲಿಯಾದ ಆಧ್ಯಾತ್ಮಿಕ ಹೆಜ್ಜೆಯ ಮೊದಲ ದಿನ**

ಅಂದಹಾಗೆ ಆಸ್ಟ್ರೇಲಿಯಾದಲ್ಲಿ ಅಹ್ಮದಿಯತ್ತಿನ ಸಂದೇಶವು ಹಝ್ರತ್ ಮಸೀಹ್ ಮೌಊದ್(ಅ) ರವರ ಪವಿತ್ರ ಕಾಲದಲ್ಲಿಯೇ ತಲುಪಿತ್ತು. ಆದರೆ ಸಿಡ್ನಿಯಲ್ಲಿ ಮಸ್ಜಿದ್ ಬೈತುಲ್ ಹುದಾದ ನಿರ್ಮಾಣವು ಈ ಕ್ಷೇತ್ರಕ್ಕೆ ಒಂದು ಐತಿಹಾಸಿಕ ಘಟನೆಯಾಗಿದೆ. ಈ ದಿನದ ಪ್ರಾಮುಖ್ಯತೆ ಮತ್ತು ಗೌರವವನ್ನು ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು ನುಡಿಯುತ್ತಾರೆ.

ನೀವು ಆಸ್ಟ್ರೇಲಿಯಾ ನಿವಾಸಿ, ನನ್ನ ಸಂಬಂಧಿಕರಾಗಿದ್ದೀರಿ. ಬಹುಶ: ನಿಮ್ಮ ಇತಿಹಾಸದ ಮೇರೆಗೆ ನನ್ನ ಮಾತನ್ನು ಸುಲಭವಾಗಿ ತಿಳಿಯಬಹುದು. ಆದುದರಿಂದ ಬನ್ನಿ. ಇದೀಗ ನಾನು ನಿಮಗೆ ಆಸ್ಟ್ರೇಲಿಯಾದ ಗತ ಇತಿಹಾಸದ ಆಧಾರದ ಮೇಲೆ ಇಂದಿನ ದಿನದ ಮಹತ್ವವೇನು ಎಂಬುದನ್ನು ತಿಳಿಸಬಯಸುವೆನು. ನನ್ನ ದೃಷ್ಟಿಯಲ್ಲಿ ಈ ದಿನ ಆಧ್ಯಾತ್ಮಿಕ ಮತ್ತು ಧಾರ್ಮಿಕ ನೆಲೆಯಲ್ಲಿ ಮೊದಲ ಹೆಜ್ಜೆಯ ದಿನವಾಗಿದೆ. ಅಂದರೆ ಇಂದು ನಾವು ನಿಮಗಾಗಿ ಉನ್ನತ ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕಲಿಸುವ ಉದ್ದೇಶದಿಂದ ಹೊಸದಾಗಿ ಮೊದಲ ಹೆಜ್ಜೆ ಇಟ್ಟಂತಾಗಿದೆ ಆದುದರಿಂದ ಈ ದಿನಕ್ಕೆ Captain James Kuk ಆಸ್ಟ್ರೇಲಿಯಾವನ್ನು ಕಂಡುಹಿಡಿದ ದಿನಕ್ಕೆ ಇದ್ದಷ್ಟೇ ಮಹತ್ವವಿದೆ. (ದಿನಪತ್ರಿಕೆ ಅಲಫಝ್ಲ್ ರಬ್ವಾಹ್, 18 ಡಿಸೆಂಬರ್ 2006, ಪುಟ–34)

**ದೂರದ ಪೂರ್ವ ದೇಶ ಜಪಾನ್‌ನಿಂದ ತೆಹ್ರೀಕ್ ಜದೀದ್‌ನ 50ನೇ ವರ್ಷದ ಘೋಷಣೆ**

ದೂರದ ಪೂರ್ವ ಕ್ಷೇತ್ರಕ್ಕೆ ಈ ಗೌರವ ತಂದಿದೆ, ತೆಹ್ರೀಕ್ ಜದೀದ್‌ನ 80ನೇ ವರ್ಷದ ಘೋಷಣೆ ಇದೇ ಕ್ಷೇತ್ರಕ್ಕೆ ಸಂಬಂಧಿಸಿದ ಒಂದು ಪ್ರಮುಖ ದೇಶ ಅಂದರೆ ಜಪಾನ್ ನೆಲದಿಂದ ತೆಹ್ರೀಕ್ ಜದೀದ್‌ನ 80ನೇ ವರ್ಷದ ಘೋಷಣೆ ಹೊರಬಿದ್ದಿದೆ. ದಿನಾಂಕ: 8 ನವೆಂಬರ್ 2913 ರಂದು ಕೋನಾಗೋಯದಲ್ಲಿ ಕುತುಬ ಜುಮುಅ ನೀಡುತ್ತಾ ಹಜ್‌ರತ್ ಖಲೀಫತುಲ್ ಮಸೀಹ್ ಖಮಿಸ್(ಪಂಚಮರು)(ಅಬಿಅ) ತೆಹ್ರೀಕ್ ಜದೀದನ ಹೊಸ ವರ್ಷದ ಘೋಷಣೆ ಮಾಡಿದರು. ಜುಮುಅದ ಈ ಪವಿತ್ರ ದಿನ. ಇದರ ಸ್ಮರಣೀಯವಾಗಿತ್ತು. ಇದೇ ಕುತುಬದ ಮೂಲಕ ಹುಝೂರೆ ಅನ್ವರ್(ಅಬಿಅ) ಜಪಾನಿನಲ್ಲಿ ಅಹ್ಮದಿಯಾ ಜಮಾಅತಿನ ಮೊದಲ ಮಸೀದಿ ನಿರ್ಮಾಣದ ಘೋಷಣೆ ಮಾಡಿದರು. ಹುಝೂರ್ ಅನ್ವರ್(ಅಬಿಅ) ಈ ಮಸೀದಿಗಾಗಿ ಮಾಡಿದ ತ್ಯಾಗಗಳ ಕುರಿತು ವಿವರಿಸುತ್ತಾ ಹೇಳಿದರು.

ಹಾಗೆ ನಾನು ನಿಮಗೆ ಹೊಸ ಕೇಂದ್ರ ನಿರ್ಮಿಸುವ ಗಮನಸೆಳೆದಾಗ, ನಾನು ಈ ಮೊದಲು ಸಹ ಈ ಬಗ್ಗೆ ಹೇಳಿರುತ್ತೇನೆ. ಜಪಾನಿನ ಜಮಾಅತ್ ಸಾಂಪತ್ತಿಕ ತ್ಯಾಗ ಮಾಡಿದೆ ಮತ್ತು ಅಲ್ಲಾಹನ ಅನುಗ್ರಹದಿಂದ ಅದಕ್ಕಾಗಿ ಜಮೀನನ್ನು ಖರೀದಿಸಿದ್ದೀರಿ. ಸಣ್ಣ ಜಮಾಅತಾಗಿದೆ. ಆದರೆ ಅಲ್ಲಾಹನ

ಅನುಗ್ರಹದಿಂದ ದೊಡ್ಡ ತ್ಯಾಗವನ್ನು ಮಾಡಿದೆ. ಈ ನಿಟ್ಟಿನಲ್ಲಿ ಹಲವರು ದೊಡ್ಡ ದೊಡ್ಡ ಮೊತ್ತವನ್ನು ನೀಡಿದ್ದಾರೆ. ಮಕ್ಕಳು ತಮ್ಮ ಜೇಬು ಖರ್ಚನ್ನು ನೀಡಿದ್ದಾರೆ. ಮಹಿಳೆಯರು ತಮ್ಮ ಆಭರಣಗಳನ್ನು ನೀಡಿದ್ದಾರೆ ಮತ್ತು ಕೆಲವರು ತನ್ನ ಪಾಕಿಸ್ತಾನದಲ್ಲಿರುವ ಮನೆಗಳನ್ನು ಮಾರಿ ಹಣ ಕೊಟ್ಟಿದ್ದಾರೆ ಅಥವಾ ಇದ್ದ ಆಸ್ತಿಗಳನ್ನು ಮಾರಾಟ ಮಾಡಿ ಹಣ ನೀಡಿದ್ದಾರೆ. ಕೆಲವರು ತನ್ನ ಅಮೂಲ್ಯವಾದ ಮತ್ತು ಪ್ರಿಯವಾದ ಆಭರಣ ತಮ್ಮ ಪೂರ್ವಜರಿಂದ ದೊರೆತ ಆಭರಣಗಳನ್ನು ಮಾರಾಟ ಮಾಡಿ ಮಸೀದಿಗೋಸ್ಕರ ನೀಡಿದ್ದಾರೆ. ಹಾಗೆ ಅಲ್ಲಾಹನ ಅನುಗ್ರಹದಿಂದ ಒಬ್ಬರು ಮತ್ತೊಬ್ಬರಿಂದ ಹೆಚ್ಚು ತ್ಯಾಗವನ್ನು ಮಾಡಲು ಪ್ರಯತ್ನಿಸಿದ್ದೀರಿ ಮತ್ತು ಪ್ರಸ್ತುತಪಡಿಸಿದ್ದೀರಿ. ಅಲ್ಲಾಹನು ತಮ್ಮ ಈ ಸಾಂಪತ್ತಿಕ ತ್ಯಾಗಗಳನ್ನು ಸ್ವೀಕರಿಸುವಂತಾಗಲಿ ಮತ್ತು ನಿಮ್ಮ ಸಂಪತ್ತಿನಲ್ಲಿ ಹಾಗೂ ಜೀವನದಲ್ಲಿ ಅಪರಿಮಿತ ಅನುಗ್ರಹಗಳನ್ನು ದಯಪಾಲಿಸಲಿ. (ಅಲ್‌ಫಝುಲ್ International, 29 ನವೆಂಬರ್ 2013, ಪುಟ–8)

**ಇಂಡೋನೇಷಿಯಾದ ಅಹ್ಮದೀಯರ ರೀತಿಯಲ್ಲಿ ನಿಷ್ಠೆ ಹಾಗೂ ಪ್ರೀತಿಯ ಮಾದರಿ ಅನುಸರಿಸಲು ಉಪದೇಶ**

ದೂರದ ಪೂರ್ವದಲ್ಲಿರುವ ದ್ವೀಪಗಳ ಗುಂಪು ಅದನ್ನು ಗತಕಾಲದಲ್ಲಿ ಜಜೂಯರ್ ಶರಖಿಲ್ ಹಿಂದೆ ಎಂದು ಕರೆಯಲಾಗುತ್ತದೆ. ಇದು ಲೋಕದಲ್ಲಿ ಹೆಚ್ಚು ಮುಸ್ಲಿಂ ಜನಸಂಖ್ಯೆ ಇರುವ ದೇಶವಾಗಿದೆ. ಅಂದರೆ ಇಂಡೋನೇಷ್ಯಾ ಸಾಬಿಖೀನ್ ಮಿನಲ್ ಅವ್ವಲೀನ್ (ಹಿಂದಿನವರಿಗಿಂತ ಮುಂದುರಿವರು) ಎಂಬುದಕ್ಕೆ ಉದಾಹರಣೆಯಾಗಿದೆ.

ಇಸ್ಲಾಮಿನ ಪುನರುತ್ಥಾನದ ಈ ಕಾಲದಲ್ಲಿ ಪಾಕಿಸ್ತಾನ ಭಾರತ ಉಪಖಂಡದಿಂದ ಹೊರಗುಳಿದ ಈ ದೇಶ ಹಝ್ರತ್ ಮಸೀಹ್ ಮೌಊದ್(ಅ) ರವರ ಸಂದೇಶ ಯಾವ ನಿಷ್ಠೆಯಿಂದ ಈ ಇಂಡೋನೇಷಿಯನ್ ಸಮುದಾಯ ಸ್ವೀಕರಿಸಿದೆ. ಅದರ ಉದಾಹರಣೆ ಇತರ ಮುಸ್ಲಿಂ ಕ್ಷೇತ್ರಗಳಲ್ಲಿ ಸಿಗುವುದು ಬಹಳ ವಿರಳ. ಇಂಡೋನೇಷಿಯನ್ ಅಹ್ಮದಿ ಮುಸಲ್ಮಾನರು ಅಹ್ಮದಿಅತ್ ಸ್ವೀಕರಿಸಿದ ನಂತರ ಯಾವ ರೀತಿಯ ಪವಿತ್ರ ಬದಲಾಣೆಗಳನ್ನು ತನ್ನೊಳಗೆ ತಂದು ಕೊಂಡಿರುತ್ತಾರೆ. ಆ ಬಗ್ಗೆ ಪ್ರಶಂಸಿಸುತ್ತ ಹಝ್ರತ್ ಖಲಿಫತುಲ್ ಮಸೀಹ್ ಚತುರ್ಥರು ತನ್ನ ಇಂಡೋನೇಷ್ಯಾ ಪ್ರವಾಸದ ವೇಳೆ ನುಡಿದರು. “ನಾನು ಯಾವ ನಿಷ್ಠೆ, ಪ್ರೀತಿ ಇಂಡೋನೇಷ್ಯಾ ಜಮಾಅತಿನಲ್ಲಿ ಕಂಡಿದ್ದೇನೋ. ಅದು ಲೋಕ ಯಾವ ಜಮಾಅತಿನಲ್ಲೂ ಇಂತಹ ನಿಷ್ಠೆ ಮತ್ತು ಪ್ರೀತಿ ಪ್ರೇಮ ಕಾಣಲಿಲ್ಲ. ಹೊರಗಿನಿಂದ ಬಂದ ಜನರು ಸಹ ಸ್ವಯಂ ತನ್ನ ಕಣ್ಣುಗಳಿಂದ ನೋಡಿರುತ್ತಾರೆ. ಯಾವ ರೀತಿ ಇಂಡೋನೇಷ್ಯಾ ಜಮಾಅತ್ ತನ್ನ ನಿಷ್ಠೆಯಲ್ಲಿ ಇತರರಿಗಿಂತ ಮುಂದಿದೆ ಎಂದು. ಅವರ ಕಣ್ಣುಗಳಿಂದ ಯಾವ ರೀತಿ ಭಾಷ್ಪ ಸುರಿಯುತ್ತಿದೆ. ಕಿರಿಯರು ಹಿರಿಯರು ಎಲ್ಲರ ಕಣ್ಣುಗಳಿಂದ ಭಾಷ್ಪ ಸುರಿಯುತ್ತಿದೆ ಹೊರಗಿನೊಂದ ಬಂದವರು ಈ ಸಂದೇಶ ನೆನಪಿಡಬೇಕಾದುದಾಗಿದೆ. ಮರಳಿ ಹೋಗಿ ತಮ್ಮ ದೇಶಗಳಲ್ಲಿ ಈ ಸಂದೇಶ ಕೊಡಬೇಕು. ಇಂಡೋನೇಷ್ಯಯನ್ನರ ಮಾದರಿ ನಿಷ್ಠೆ ಮತ್ತು ಪ್ರೀತಿ ತನ್ನೊಲಗೆ ಸೃಷ್ಟಿಸಿಕೊಳ್ಳಬೇಕು ಮತ್ತು ಅವರಂತೆ ಆಗಬೇಕು. (ಆಧಾರ ವರದಿ ಇಂಡೋನೇಷ್ಯಾ ಪ್ರವಾಸ, ಮುದ್ರಣ ಅಲ್‌ಫಝುಲ್ 28, ಜುಲೈ 2000 ಪು1 2)

ಈ ಶತಮಾನ ಮುಗಿಯುವುದಕ್ಕಿಂತ ಮೊದಲೇ ದೂರದ ಪೂರ್ವ ದೇಶ ಇಂಡೋನೇಷ್ಯಾ ಅತಿ ದೊಡ್ಡ ಅಹ್ಮದಿ ಮುಸ್ಲಿಂ ರಾಷ್ಟ್ರವಾಗುವುದು. (ಇನ್‌ಶಾ ಅಲ್ಲಾಹ್)

ದೂರದ ಪೂರ್ವದಲ್ಲಿ ಇಸ್ಲಾಂ ಅಹ್ಮದಿಯತ್ ಬಹುವೇಗವಾಗಿ ಹರಡುವ ಸುದ್ದಿಯನ್ನು ನೀಡುತ್ತಾ ಇಂಡೋನೇಷ್ಯಾ ಪ್ರವಾಸದ ನಡುವೆ ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು (ರಹಾ) ನುಡಿದರು, ಇಂಡೋನೇಷ್ಯಾ ಜಮಾಅತಿನ ದೀರ್ಘಕಾಲೀನ ತಾಳ್ಮೆ ಮತ್ತು ಪ್ರಾರ್ಥನೆಗಳ ಫಲವಾಗಿ ಇಂದು ಆ ಸಮಯ ಬಂದಿದೆ. ಖಲೀಫತುಲ್ ಮಸೀಹ್ ನಿಮ್ಮ ನಡುವೆ ಉಪಸ್ಥಿತರಾಗಿದ್ದಾರೆ. ಹುಝೂರ್(ರಹ) ಹೇಳಿದರು. ನಾನು ನಿಮಗೆ ಭರವಸೆ ನೀಡುತ್ತೇನೆ. ಹೊಸ ಶತಮಾನದ ಅಂತ್ಯಕ್ಕಿಂತ ಮುಂಚೆ ಇಂಡೋನೇಷ್ಯಾ ಅತಿ ದೊಡ್ಡ ಅಹ್ಮದಿ ಮುಸ್ಲಿಂ ರಾಷ್ಟ್ರವಾಗುವುದು. (ಇನ್‌ಶಾಅಲ್ಲಾಹ್) (ಆಧಾರ: ವರದಿ ಇಂಡೋನೇಷ್ಯಾ ಪ್ರವಾಸ ಮುದ್ರಣ ಅಲ್‌ಫಝುಲ್, 7 ಜುಲೈ 2000, ಪುಟ–2)

**ಚೀನಿ ಸಮುದಾಯಕ್ಕಾಗಿ ಪ್ರಾರ್ಥಿಸಲು ಕೋರಿಕೆ**

ಮಸ್ಜಿದ್ ಮುಬಾರಕ್ ಇಸ್ಲಾಮಾಬಾದ್ (ಯು.ಕೆ) ಯ ಉದ್ಘಾಟನೆ ನಂತರ ಮುಂದಿನ ಶುಕ್ರವಾರ ಸಂದರ್ಭದಲ್ಲಿ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಪಂಚಮರು (ಅಬಿಅ) ಚೀನಿ ಸಮುದಾಯಕ್ಕೆ ಇಸ್ಲಾಂ ಅಹ್ಮದಿಯತ್ತಿನ ಸಂದೇಶ ತಲುಪಿಸುವ ಸಲುವಾಗಿ ಪ್ರಾರ್ಥಿಸಲು ಕರೆ ನೀಡುತ್ತಾ ಹೇಳಿದರು.

ಈ ಮಸೀದಿಯ ಅಡಿಗಲ್ಲು ಮಾನ್ಯ ಉಸ್ಮಾನ್ ಚೀನಿ ಸಾಹಿಬರು ಹಾಕಿದರು. ಆ ಬಗ್ಗೆ ನಾವು ಹೇಳಬಹುದು. ಅಲ್ಲಾಹನ ಅನುಗ್ರಹದಿಂದ ಚೀನಿ ಸಮುದಾಯದವರದ್ದು ಸಹ ಇದರಲ್ಲಿ ಪಾಲಿದೆ. ಆದುದರಿಂದ ನಮಗೆ ಪ್ರಾರ್ಥನೆ ಮಾಡಬೇಕಾಗಿದೆ. ಅಲ್ಲಾಹನು ಚೀನಾದಲ್ಲಿಯೂ ಸಹ ಇಸ್ಲಾಂ ಅತಿ ಶೀಘ್ರವಾಗಿ ತಲುಪಿಸುವ ಭಾಗ್ಯ ನಮಗೆ ದೊರೆಯುವಂತಾಗಲಿ. ಮು ಉಸ್ಮಾನ್ ಚೀನಿ ಸಾಹಿಬರಿಗೆ ತುಂಬಾ ಆಸೆಯಿತ್ತು. ಯಾವಾಗಲೂ ಇದೆ. ಚಿಂತೆಯಲ್ಲಿ ಇರುತ್ತಿದ್ದರು. ಯಾವುದೇ ರೀತಿಯಲ್ಲಿ ಚೀನಾದಲ್ಲಿ ಅಹ್ಮದಿಅತ್ ಯಥಾರ್ಥ ಇಸ್ಲಾಮಿನ ಸಂದೇಶ ತಲುಪುವಂತಾಗಲಿ ಎಂದು ನಾವು ಅವರಿಗಾಗಿ ಸ್ವರ್ಗದಲ್ಲಿ ಉನ್ನತ ದರ್ಜೆ ಲಭಿಸುವಂತಾಗಲಿ ಎಂದು ಪ್ರಾರ್ಥಿಸುವ ಜೊತೆಯಲ್ಲಿ ಚೀನಾದಲ್ಲೂ ಮತ್ತು ಲೋಕದ ಪ್ರತಿಯೊಂದು ದೇಶದಲ್ಲೂ ಅಹ್ಮದಿಅತ್ ಯಥಾರ್ಥ ಇಸ್ಲಾಂ ತಲುಪುವಂತಾಗಲು ಬಹಳಷ್ಟು ಪ್ರಾರ್ಥನೆಗಳನ್ನು ಮಾಡುವ ಅವಶ್ಯಕತೆ ಇದೆ. ಅಲ್ಲಾಹನು ಆ ಭಾಗ್ಯ ನಮಗೆ ದಯಪಾಲಿಸಲಿ. (ಅಲ್‌ಫಝುಲ್ ಇಂಟರ್‌ನ್ಯಾಷ್ನಲ್, ಜೂನ್ 10, 2019, ಪುಟ–9)

**ಪೂರ್ವ ಏಷ್ಯಾದಲ್ಲಿ ಜಪಾನನ್ನು ಇಸ್ಲಾಂ ಅಹ್ಮದಿಅತ್ತಿನ ಪ್ರಕಟಣೆಯ ಕೇಂದ್ರವಾಗಿಸುವ ಬಯಕೆ**

ಜಪಾನಿ ಜನರನ್ನು ಇಸ್ಲಾಂ ಅಹ್ಮದಿಯತ್ತಿನೊಂದಿಗೆ ಪ್ರಭುದ್ಧಗೊಳಿಸುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಯಕೆಯಾಗಿತ್ತು. ಈ ಉದ್ದೇಶದ ಅನುಸರಣೆಯಲ್ಲಿ ಜಪಾನ್ ದೇಶವು ಹಜ್‌ರತ್ ಮಸೀಹ್ ಮೌಊದ್(ಅ) ಅವರ ಖಲೀಫರುಗಳ ಅಸಾಮಾನ್ಯ ಪ್ರಾರ್ಥನೆ ಮತ್ತು ಆಸಕ್ತಿ ಕೇಂದ್ರಬಿಂದುವಾಗಿತ್ತು. ಸಯ್ಯದ್‌ನಾ ಹಝ್ರತ್ ಖಲಿಫತುಲ್ ಮಸೀಹ್ ದ್ವಿತೀಯ(ರ) ಜಪಾನನ್ನು ಪೂರ್ವ ಏಷ್ಯಾದಲ್ಲಿ ಅಹ್ಮದಿಅತ್ ಪ್ರಕಟಣಾ ಕೇಂದ್ರವನ್ನು ಅಹ್ಮದಿಯತ್ತಿನ ಪ್ರತಿಧ್ವನಿಗೆ ಸಮಾನ ಎಂದು ಬಣ್ಣಿಸುತ್ತಾ ಹೇಳಿದರು.

“ಜಪಾನ್ ಎಷ್ಟೊಂದು ಶ್ರೇಷ್ಠ ದೇಶವಾಗಿದೆ, ನಾವು ಅಲ್ಲಿ ಪ್ರಕಟಣಾ ಕೇಂದ್ರವನ್ನು ತೆರೆದರೆ, ಅಲ್ಲಾಹನು ಅಲ್ಲಿ ನಮ್ಮ ಜಮಾಅತ್ ಸ್ಥಾಪನೆಯಾಗುವಂತೆ ದಯಪಾಲಿಸಲಿ. ಆಗ ಅಹ್ಮದಿಯತ್ತಿನ ಧ್ವನಿ ಇಡೀ ಪೂರ್ವ ಏಷ್ಯಾದಲ್ಲಿ ಪ್ರತಿಧ್ವನಿಸುವಂತಾಗುವುದು. ( ಖುತ್ಬ ಜುಮುಅ 19 ನವೆಂಬರ್ 1954)

ದೂರದ ಪೂರ್ವ ದೇಶಗಳಲ್ಲಿ ಹಝ್ರತ್ ಮಸೀಹ್ ಮೌಊದ್ (ಅ) ಅವರ ಖಲೀಫರುಗಳ ಆಶ್ರಯಗಳಲ್ಲಿ ಇಸ್ಲಾಮ ಅಹ್ಮದಿಅತ್ ಪ್ರಸರಗೊಂಡ ಅತ್ಯಂತ ಕಿರು ನೋಟ ಪ್ರಸ್ತುತಪಡಿಸಲಾಗಿದೆ. ಉದಾಹರಣಾ ಸ್ವರೂಪದಲ್ಲಿ ಕೆಲವೇ ದೇಶಗಳ ವಿವರ ನೀಡಲಾಗಿದೆ. ಈ ದೇಶಗಳಲ್ಲದೇ ಇಂದು ಮಲೇಷ್ಯಾದಲ್ಲು ಇಸ್ಲಾಂ ಅಹ್ಮದಿಯತ್ತಿನ ಪ್ರಸಾರ ಕೇಂದ್ರಗಳು ಸ್ಥಾಪನೆಗೊಂಡಿವೆ. ಫಿಲ್‌ಪಾಯಿನ್ ದ್ವೀಪಗಳಲ್ಲೂ ಒಂದು ನಿಷ್ಠಾವಂತ ಜಮಾಅತ್ ಖಿಲಾಫತ್ತಿನ ವಿಧೇಯವಾಗಿದೆ. ಥೈಲ್ಯಾಂಡ್,, ಕಂಬೋಡಿಯಾ ಮತ್ತು ವೆತ್ನಾಂ ನಲ್ಲಿಯೂ ಸಹ ಇಸ್ಲಾಂ ಅಹ್ಮದಿಅತ್ತಿನ ಗಿ ನೆಡಲಾಗಿದೆ. ಕೊರಿಯಾದಲ್ಲೂ ಜಮಾಅತ್ ಸ್ಥಾಪನೆಗೊಂಡಿದೆ. ಫಿಸಿಫಕ್ ಮಹಾಸಾಗರ ಮತ್ತು ಹಿಂದೂ ಮಹಾಸಾಗರದಂತಹ ದೂರದ ದ್ವೀಪಗಳಲ್ಲೂ ಸಹ ಖಲೀಫರ ನಾಯಕತ್ವ ಮತ್ತು ಮಾರ್ಗದರ್ಶನದಲ್ಲಿ ಇಸ್ಲಾಂ ಅಹ್ಮದಿಅತ್ತಿನ ಪ್ರಕಾಶ ಮತ್ತು ಅಭಿಯಾನ ದಿನನಿತ್ಯ ಪ್ರಗತಿಪಥದಲ್ಲಿದೆ.

ಅಲ್ಲಾಹನ ವಾಗ್ದಾನವಿದೆ. ಪೂರ್ವದಲ್ಲಿಯೂ ಸಹ ಇಸ್ಲಾಂ ಅಹ್ಮದಿಅತ್ತಿನ ಪ್ರಸಾರವಾಗುವುದು ಮತ್ತು ಸೂರ್ಯನ ಕಿರಣಗಳು ಜಗತ್ತಿನಲ್ಲಿ ಮೊದಲು ಬೆಳಕನ್ನು ಪಡೆದಂತೆ, ಈ ಕ್ಷೇತ್ರವು ಇಸ್ಲಾಮ್ ಅಹ್ಮದಿಯತ್ತಿನ ಪ್ರಕಾಶದಿಂದ ಪ್ರಕಾಶಗೊಳ್ಳುವುದು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅನುವಾದ : ಅಲ್ಲಾಹನು ನನಗೆ ದಿವ್ಯವಾಣಿ ನೀಡಿರುವನು ಮತ್ತು ನನಗೆ ವಾಗ್ದಾನ ನೀಡಿರುವನು. ಅವನು ನನಗೆ ಸಹಕರಿಸುವನು ಎಲ್ಲಿಯವರೆಗೆ ಎಂದರೆ ನನ್ನ ಕಾರ್ಯ ಭೂಮಂಡಲದ ಪೂರ್ವಗಳ ಮತ್ತು ಪಶ್ಚಿಮಗಳವರೆಗೆ ತಲುಪುವುದು ಮತ್ತು ಸತ್ಯದ ಸಮುದ್ರಗಳ ಅಲೆಳು ಅಪ್ಪಳಿಸುವುವು. ಆ ಅಲೆಗಳು ಎಷ್ಟು ಎತ್ತರವಾಗಿ ಅಪ್ಪಳಿಸುವುದೆಂದರೆ ಜನರು ದಿಗ್ಭ್ರಾಂತರಾಗುವರು. **(ಲುಜ್ಜತುನ್ನೂರ್, ರೂಹಾನಿ ಖಝಾಈನ್, ಸಂಪುಟ–16, ಪುಟ–408)**

**********

# ಮಧ್ಯಪ್ರಾಚ್ಯದಲ್ಲಿ ಅಹ್ಮದಿಯಾ ಸಮುದಾಯದ ಅಭಿವೃದ್ಧಿಗಳು

**(ಶಮ್ಸುದ್ದೀನ್ ಮಲಬಾರಿ, ಪ್ಯಾಲೆಸ್ತೀನ್ ಮುಬಲ್ಲಿಗ್ ಇಂಚಾರ್ಜ್)**

ಮಧ್ಯಪ್ರಾಚ್ಯವು ಏಷ್ಯಾ, ಆಫ್ರಿಕಾ ಮತ್ತು ಯುರೋಪ್‌ನ ನಡುವಿನ ಪ್ರದೇಶವಾಗಿದೆ. ಇದು ಭೂಮಿಯ ಮೇಲಿನ ಪ್ರಮುಖ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರದೇಶವಾಗಿದೆ. ಅಲ್ಲಿ ನಾಗರಿಕತೆಗಳು ಮಾತ್ರವಲ್ಲ, ಆ ಸಮಯದಲ್ಲಿ ವಿಶ್ವದ ಮೂರು ಮಹಾನ್ ಧರ್ಮಗಳಾದ ಇಸ್ಲಾಂ, ಕ್ರಿಶ್ಚಿಯನ್ ಧರ್ಮ ಮತ್ತು ಯಹೂದಿ ಧರ್ಮವು ಮಧ್ಯಪ್ರಾಚ್ಯದಲ್ಲಿ ಸ್ಥಾಪಿಸಲಾಯಿತು. ಮತ್ತು ಈ ಧರ್ಮಗಳ ಪವಿತ್ರ ಸ್ಥಳಗಳು ಮಧ್ಯಪ್ರಾಚ್ಯದಲ್ಲಿವೆ. ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾದ ಪ್ರವಾದಿಗಳ ಘಟನೆಗಳು ಈ ಭೂಮಿಯಲ್ಲಿ ನಡೆದವು ಮತ್ತು ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾದ ಎಲ್ಲಾ ಹಣ್ಣುಗಳು ಈ ಭೂಮಿಯಲ್ಲಿ ಒಟ್ಟಿಗೆ ಬೆಳೆಯುತ್ತವೆ. ಆದ್ದರಿಂದ, ನಾವು ಪ್ರಪಂಚದ ಸಾವಿರಾರು ವರ್ಷಗಳ ಇತಿಹಾಸವನ್ನು ಪರಿಶೀಲಿಸಿದರೆ, ಮಧ್ಯಪ್ರಾಚ್ಯ ಪ್ರದೇಶದಷ್ಟು ಐತಿಹಾಸಿಕ, ಮತ್ತು ಸಾಂಸ್ಕೃತಿಕ ಪರಿಭಾಷೆಯಲ್ಲಿ ಶ್ರೀಮಂತ ಪ್ರದೇಶವು ಜಗತ್ತಿನಲ್ಲಿ ಇದನ್ನು ಹೊರತು ಪಡಿಸಿ ಮತ್ತೆ ಯಾವುದೂ ಇಲ್ಲ.

ಮಧ್ಯಪ್ರಾಚ್ಯದಲ್ಲಿನ ಜನಾಂಗೀಯ ಸಮುದಾಯಗಳಲ್ಲಿ ಆಫ್ರಿಕನ್ನರು, ಅರಬ್ಬರು, ಅರ್ಮೇನಿಯನ್ನರು, ಆಝುರಿ, ಬರ್ಬರ್ಸ್, ಗ್ರೀಕರು, ಯಹೂದಿಗಳು, ಕುರ್ದ್ಸ್, ಪರ್ಷಿಯನ್ನರು, ತಾಜಿಕ್ಸ್, ಟರ್ಕ್ಸ್ ಮತ್ತು ತುರ್ಕಮೆನ್ಸ್ ಸೇರಿದ್ದಾರೆ, ಆದರೆ ಈ ಪ್ರದೇಶದಲ್ಲಿ ಹೆಚ್ಚು ವ್ಯಾಪಕವಾಗಿ ಮಾತನಾಡುವ ಭಾಷೆ ನಿಸ್ಸಂದೇಹವಾಗಿ ಅರೇಬಿಕ್ ಆಗಿದೆ. ಆದರೆ ಇತರ ಭಾಷೆಗಳು ಅರ್ಮೇನಿಯನ್, ಆಝುರಿ, ಬರ್ಬರ್, ಹೀಬ್ರೂ, ಕುರ್ದಿಷ್, ಪರ್ಷಿಯನ್, ಮತ್ತು ತುರ್ಕಿಕ್ ಭಾಷೆಗಳು ಸೇರಿವೆ.

ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಹಝ್ರತ್ ಮಾಸಿಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರೇಮಿಗಳು ಈ ಪ್ರದೇಶದ ಎಲ್ಲಾ ದೇಶಗಳಲ್ಲಿ ಕಂಡುಬರುತ್ತಾರೆ. ಕೆಲವೊಮ್ಮೆ ಕಡಿಮೆ ಸಂಖ್ಯೆಯಲ್ಲಿ, ಕೆಲವೊಮ್ಮೆ ದೊಡ್ಡ ಸಂಖ್ಯೆಯಲ್ಲಿ, ಕೆಲವೊಮ್ಮೆ ತಥಾಕಥಿತ ವಿದ್ವಾಂಸರ ದೌರ್ಜನ್ಯಗಳನ್ನು ಎದುರಿಸುತ್ತ ಮತ್ತು ಕೆಲವೊಮ್ಮೆ ಬುದ್ಧಿವಂತಿಕೆಯಿಂದ ತಮ್ಮ ಈಮಾನ್ ಅನ್ನು ರಕ್ಷಿಸಿಕೊಳ್ಳುತ್ತ ರಹಸ್ಯವಾಗಿ ಅಲ್ಲಾಹನಲ್ಲಿ ದುಆ ಮಾಡುತ್ತ ಮತ್ತು ಹೆಚ್ಚಿನ ಸಂಖ್ಯೆಯ ಭಕ್ತರ ನಂಬಿಕೆಯ ರೂಪದಲ್ಲಿ ಕಾಲಘಟ್ಟದ ಇಮಾಮ್ ವಾಗ್ದಾತ್ತ ಮಸೀಹರ ಜಮಾಅತ್‌ನಲ್ಲಿ ಸೇರಿದ್ದಾರೆ.

ಮಧ್ಯಪ್ರಾಚ್ಯದ ಬಹುಪಾಲು ಜನರು ಅರಬ್ಬರಾಗಿದ್ದಾರೆ ಮತ್ತು ಹೆಚ್ಚು ಮಾತನಾಡುವ ಭಾಷೆ ಅರೇಬಿಕ್ ಆಗಿರುವುದರಿಂದ. ಅರೇಬಿಯಾದ ಶ್ರೇಷ್ಠ ಸ್ಥಾನ ಮತ್ತು ಅರೇಬಿಕ್ ಭಾಷಿಕರ ಸಮೃದ್ಧಿಯಿಂದಾಗಿ, ಅರಬ್ ದೇಶದ ಕುರಿತು ಇಲ್ಲಿ ವಿಶೇಷವಾಗಿ ಉಲ್ಲೇಖಿಸಲಾಗಿದೆ.

ಅಹ್ಮದಿಯತ್ತನ್ನು ಅರಬ್ಬರು ಸ್ವೀಕರಿಸುವ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಶುಭ ಸುದ್ದಿಗಳನ್ನು ನೀಡಿದ್ದಾನೆ. ಈ ದೈವಿಕ ಸುದ್ದಿಗಳ ಅಭಿವ್ಯಕ್ತಿಯು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಜೀವನದ ಆರಂಭದಲ್ಲಿಯೇ ಪ್ರಾರಂಭವಾಯಿತು ಮತ್ತು ರಸೂಲುಲ್ಲಾಹ್(ಸ) ಅವರ ಆಸ್ಥಾನದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಂದೇಶವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪವಿತ್ರ ಜೀವಿತ ಕಾಲದಲ್ಲಿಯೇ 1890 ರ ದಶಕದಲ್ಲಿ ತಲುಪಿದೆ. 1891 ರಲ್ಲಿ, ಹಝ್ರತ್ ಮುಹಮ್ಮದ್ ಬಿನ್ ಶೇಖ್ ಅಹ್ಮದ್ ಅಲ್-ಮಕಿ (ಶಬ್ ಅಮೇರ್ ನೆರೆಹೊರೆಯ ನಿವಾಸಿ) ಮತ್ತು ಹಝ್ರತ್ ಮುಹಮ್ಮದ್ ಅಲ್-ಸಯೀದ್ ಅಲ್-ಹಮೀದಿ ಟ್ರೈಬಲ್ಸಿ ಅಲ್-ಶಮಿ, ಅವರು ಹಝ್ರತ್ ಅಖಿದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅನುಗ್ರಹದಾಯಕ ಹಸ್ತದ ಮೇಲೆ ಬೈಅತ್ ಮಾಡಿದ್ದರು. ಇವರಿಬ್ಬರು ಸಹಾಬರವರು 313 ಸಹಾಬಗಳಲ್ಲಿ ಸೇರಿರುತ್ತಾರೆ. ಇವರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಅವರು ತಮ್ಮ ಬರಹಗಳಲ್ಲಿ ಉಲ್ಲೇಖಿಸಿದ್ದಾರೆ. ಅವರನ್ನು ಹೊರತುಪಡಿಸಿ, ಅನೇಕ ಅರಬ್ಬರು ಮತ್ತು ಪರಿಶುದ್ಧ ವ್ಯಕ್ತಿಗಳ ಆಧ್ಯಾತ್ಮದ ಕಣ್ಣುಗಳ ಮೂಲಕ ಅವರ ಸತ್ಯತೆಯನ್ನು ಅರಿತುಕೊಂಡರು ಮತ್ತು ಬೈಅತ್ ಮಾಡಿ ಜಮಾಅತ್ತಿನಲ್ಲಿ ಪ್ರವೇಶಿಸಿದರು. ಸುಲಹಾ ಎ ಅರಬ್ (ಅರಬ್ ದೇಶದ ಭಕ್ತರು) ಮತ್ತು ಅಬ್ದಲ್ ಅಲ್-ಶಾಮ್ (ಸೀರಿಯಾ ದೇಶದ ಭಕ್ತರು) ಅವರ ಒಂದು ಗುಂಪು ಹಝ್ರತ್ ಮಸೀಹ್ ಮೌಊದ್(ಅ) ಅವರ ಜೀವನದಲ್ಲಿಯೆ ತಮ್ಮಿಂದ ಅನುಗ್ರಹಗಳನ್ನು ಪಡೆದ ನಂತರ ಇಹಲೋಕ ತ್ಯಜಿಸಿದರು ಮತ್ತು ಭವಿಷ್ಯದಲ್ಲಿ ಬರುವ ಅರಬ್ಬರಿಗೆ ಅನುಕರಣೆಗೆ ಯೋಗ್ಯವಾದ ಉದಾಹರಣೆಗಳನ್ನು ಬಿಟ್ಟಿದರು.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಅವರ ಕಾಲಘಟ್ಟದಲ್ಲಿ, ಅರಬ್ಬರಲ್ಲಿ ತಬ್ಲೀಗ್‌ಗಾಗಿ (ಬೋಧನೆಗೆ) ವಿಶೇಷ ಗಮನ ನೀಡಲಾಯಿತು ಮತ್ತು ಅರೇಬಿಕ್ ತಿಳಿದಿರುವ ವಿದ್ವಾಂಸರು ಅದಕ್ಕಾಗಿ ಸಿದ್ಧಗೊಳಿಸಲಾಯಿತು. ಆದ್ದರಿಂದ ಹಝ್ರತ್ ಮೌಲ್ವಿ ಗುಲಾಮ್ ನಬಿ ಸಾಹಿಬ್(ರ) ಅವರನ್ನು ಈಜಿಪ್ಟ್‌ಗೆ ಕಳುಹಿಸಲಾಯಿತು. ನಂತರ 1913 ರಲ್ಲಿ, ಹಝ್ರತ್ ಝ್ಯೆನುಲ್ ಅಬಿದೀನ್ ವಲಿಯುಲ್ಲಾ ಶಾ ಸಾಹಿಬ್ ಮತ್ತು ಶೇಖ್ ಅಬ್ದುಲ್ ರಹಮಾನ್ ಮಿಸ್ರಿ ಅವರನ್ನು ಉಪದೇಶ ಮತ್ತು ಬೋಧನೆಗಾಗಿ ಈಜಿಪ್ಟ್‌ಗೆ ಕಳುಹಿಸಲಾಯಿತು.

ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್(ರ) ಅವರು ಮೊದಲ ಖಲೀಫತ್ ಕಾಲದಲ್ಲಿ ಹಜ್ ಯಾತ್ರೆಯ ಸಮಯದಲ್ಲಿ ಮೊದಲ ಬಾರಿಗೆ ಕೆಲವು ಅರಬ್ ದೇಶಗಳಿಗೆ ಪ್ರಯಾಣಿಸಿದರು ಮತ್ತು ಅಲ್ಲಿ ಅಹ್ಮದಿಯಾ ಪ್ರಚಾರದ ವಿಧಾನಗಳನ್ನು ಕಂಡುಕೊಂಡರು. ನಂತರ, ಅವರ ಖಿಲಾಫತ್ ಸ್ಥಾನವನ್ನು ಪಡೆದ ನಂತರ, 1922 ರಲ್ಲಿ, ಅವರು ಹಝ್ರತ್ ಶೇಖ್ ಮಹ್ಮೂದ್ ಅಹ್ಮದ್ ಸಾಹಿಬ್ ಇರ್ಫಾನಿ(ರ) ಅವರನ್ನು ಶಿಕ್ಷಣದ ಉದ್ದೇಶಕ್ಕಾಗಿ ಈಜಿಪ್ಟ್‌ಗೆ ಕಳುಹಿಸಿದರು ಮತ್ತು ಅವರಿಂದ ಜಮಾಅತ್ ಅನ್ನು ಈಜಿಪ್ಟ್‌ನಲ್ಲಿ ಸ್ಥಾಪಿಸಲಾಯಿತು. ನಂತರ ಅವರು ಸ್ವತಃ ಅರೇಬಿಯಾಕ್ಕೆ ಪ್ರಯಾಣಿಸಲು ನಿರ್ಧರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಖಲೀಫ ಹಝ್ರತ್ ಮುಸ್ಲಿಹ್ ಮೌಊದ್(ರ) ಅರಬ್ ದೇಶಕ್ಕೆ ಪ್ರಯಾಣಿಸುವ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಭವಿಷ್ಯವಾಣಿಯ ನೆರವೇರಿತು. ಈಸ ಮಸೀಹರು ಡಮಸ್ಕಸ್‌ನ ಪೂರ್ವದಿಕ್ಕಿನಲ್ಲಿ ಅವತರಿಸುವರು ಎಂಬುದರ ಬಗ್ಗೆ ವ್ಯಾಖ್ಯಾನಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ನುಡಿದಿದ್ದರು: **"ಸುಮ್ಮ ಯುಸಾಫಿರುಲ್ ಮಸೀಹುಲ್ ಮೌಊದು ಔ ಖಲೀಫತುನ್ ಮಿನ್ ಖುಲಫಾಇಹೀ ಇಲಾ ಅರ್ಝಿ ದಮಿಶ್ಕ್, ಫಹಾಝು ಮಾನಿಲ್ ಖೌಲಿಲ್ಲಝೀ ಜಾಅ ಫೀ ಹದೀಸಿ ಮುಸ್ಲಿಮಿನ್ ಇನ್ನ ಈಸ ಯನ್‌ಝಿಲು ಇಂದ ಮಿನಾರತಿ ದಮಿಶ್ಕ್; ಫಿನ್ನನ್ನಝೀಲು ಹುವಲ್ ಮುಸಾಫಿರುಲ್ ವಾದು ಮಿಮ್ಮುಲ್‌ಕಿ ಆಖರ"** (ಹಮಾಮತುಲ್ ಬುಶ್ರ, ರೂಹಾನಿ ಖಝಾಇನ್, ಸಂಪುಟ-7, ಪುಟ-225) ಅಂದರೆ ಮಸೀಹ್ ಮೌಊದ್ ಸ್ವತಃ ಅಥವಾ ಅವರ ಖಲೀಫರುಗಳಲ್ಲಿ ಒಬ್ಬರು ಡಮಾಸ್ಕಸ್‌ಗೆ ಹೋಗುತ್ತಾರೆ. ಹೀಗೆ, ಡಮಾಸ್ಕಸ್‌ನ ಮಿನಾರದ ಪೂರ್ವದಿಕ್ಕಿನಲ್ಲಿ ಮಸೀಹರು ಅವತರಿಸುತ್ತಾರೆ ಎಂಬುದು ಹೀಗೂ ನೆರವೇರಿತು ಏಕೆಂದರೆ ವಿದೇಶಿ ದೇಶದಿಂದ ಬರುವ ಪ್ರಯಾಣಿಕರು ಕೆಳಗಿಳಿಯುವಂತೆಯೂ ಇದೆ.

ಆದ್ದರಿಂದ, 1924 ರಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಯುರೋಪಿಗೆ ಪ್ರವಾಸ ಕೈಗೊಂಡಾಗ, ಅವರು ತಮ್ಮ ಭೇಟಿಯ ಮೂಲಕ ಪ್ರಸಿದ್ಧ ಅರಬ್ ನಗರಗಳಾದ ಅಡೆನ್, ಪೋರ್ಟ್ ಸೈದ್, ಕೈರೋ, ಬೈತ್ ಅಲ್-ಮುಖದ್ದಸ್, ಹೈಫಾ, ಡಮಾಸ್ಕಸ್ ಮತ್ತು ಬೈರುತ್ ಮುಂತಾದ ಪ್ರಸಿದ್ಧ ನಗರಗಳಿಗೆ ತಮ್ಮ ಪ್ರಯಾಣದ ಮೂಲಕ ಅನುಗ್ರಹಿಸಿದರು. ಅರಬ್ ದೇಶಗಳ ಪ್ರವಾಸದ ಸಮಯದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ತನ್ನ ಹನ್ನೆರಡು ಸಹಚರರೊಂದಿಗೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದ ಒಂದು ಕುತೂಹಲಕಾರಿ ಮತ್ತು ನಂಬಿಕೆ-ಸ್ಫೂರ್ತಿದಾಯಕ ಘಟನೆ ಸಂಭವಿಸಿದೆ. ಹಝ್ರತ್ ಡಾ. ಹಶ್ಮತುಲ್ಲಾ ಸಾಹಿಬ್ ಅವರ ಸ್ನೇಹಿತರೊಬ್ಬರು ಹೇಳುತ್ತಾರೆ, ಒಂದು ದಿನ ಹುಝೂರ್(ರ) ರವರು ಹಡಗಿನ ಅಂಗಳದಲ್ಲಿ ತಮ್ಮ ಸಹಚರರೊಂದಿಗೆ ನಮಾಝ್ ಅನ್ನು ನಿರ್ವಹಿಸುತ್ತಿದ್ದಾಗ, ಹಡಗಿನ ವೈದ್ಯರು (ಇಟಲಿ ನಿವಾಸಿ) ಹುಝೂರ್‌ನ ಕಡೆಗೆ ಸೂಚಿಸಿ ಮೃದುವಾಗಿ **"ಈಸ ಮಸೀಹ್ ಮತ್ತು ಅವರ ಹನ್ನೆರಡು ಶಿಶ್ಯರು"** ಎಂದು ಹೇಳಿದರು. ಇದನ್ನು ನಾನು ಕೇಳಿದಾಗ ನನಗೆ ಆಶ್ಚರ್ಯವಾಯಿತು ಸರ್ವಶಕ್ತನಾದ ಅಲ್ಲಾಹನು ಎಂತಹ ಸರ್ವಶಕ್ತನಾಗಿದ್ದಾನೆ ಯುರೋಪಿಯನ್ ವಸಾಹತುಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಯೊಬ್ಬನು ಅತ್ಯಂತ ನಿಜವಾದ ಮತ್ತು ಬುದ್ಧಿವಂತ ವಿಷಯನ್ನು ವ್ಯಕ್ತಪಡಿಸುತ್ತಿದ್ದಾನೆ. (ತಾರೀಖೆ ಅಹ್ಮದೀಯತ್, ಸಂಪುಟ-4, ಪುಟ-437)

ಈ ಪ್ರಯಾಣದ ಸಮಯದಲ್ಲಿ, ಹಝ್ರತ್ ಮುಸ್ಲೆಹ್ ಮೌಊದ್(ರ) ಕೆಲವು ದಿನಗಳ ಕಾಲ ಡಮಾಸ್ಕಸ್‌ನಲ್ಲಿ ತಂಗಿದ್ದರು. ಭೇಟಿಯ ಸಂದರ್ಭದಲ್ಲಿ ಅಲ್ಲಿನ ಓರ್ವ ಪ್ರಸಿದ್ಧ ವಿದ್ವಾಂಸರು, ಬರಹಗಾರರಾದ ಮಾನ್ಯ ಶೇಖ್ ಅಬ್ದುಲ್ ಖಾದಿರ್ ಸಾಹಿಬ್ ಮಗ್‌ರಬಿ ಅವರು ಹೇಳಿದರು ನೀವು ಒಂದು ಜಮಾಅತ್ತಿನ ಗೌರವಾನ್ವಿತ ಇಮಾಮ್ ಆಗಿರುವುದರಿಂದ ನಾವು ನಿಮ್ಮನ್ನು ಗೌರವಿಸುತ್ತೇವೆ. ಆದರೆ ಈ ಪ್ರದೇಶಗಳಲ್ಲಿ ಯಾರಾದರೂ ನಿಮ್ಮ ಆಲೋಚನೆಗಳಿಂದ

ಪ್ರಭಾವಿತರಾಗುತ್ತಾರೆ ಎಂದು ನೀವು ಭಾವಿಸಬಾರದು. ಏಕೆಂದರೆ ನಾವು ಅರಬ್ ಮೂಲದವರಾಗಿದ್ದೇವೆ ಮತ್ತು ಅರೇಬಿಕ್ ನಮ್ಮ ಮಾತೃಭಾಷೆಯಾಗಿದೆ ಮತ್ತು ಯಾವುದೇ ಹಿಂದಿ, ಅವರು ಎಷ್ಟೇ ಪಾಂಡಿತ್ಯಪೂರ್ಣರಾಗಿದ್ದರೂ ನಮಗಿಂತ ಹೆಚ್ಚಿನ ಖುರ್‌ಆನ್ ಮತ್ತು ಹದೀಸ್‌ನ ಅರ್ಥವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಅವರಿಗೆ ಇಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಸಂಭಾಷಣೆಯನ್ನು ಕೇಳಿ ಅವರ ಈ ಕಲ್ಪನೆಯನ್ನು ತಿರಸ್ಕರಿಸಿದರು ಮತ್ತು ಅದೇ ಸಮಯದಲ್ಲಿ ನಾವು ಇಡೀ ಜಗತ್ತಿಗೆ ಪ್ರಚಾರಕರನ್ನು ಕಳುಹಿಸಬೇಕಾಗಿದೆ ಎಂದು ಮುಗುಳು ನಗುತ್ತಾ ಹೇಳಿದರು. ಆದರೆ ಈಗ ನಾನು ಭಾರತಕ್ಕೆ ಹಿಂದಿರುಗಿದ ನಂತರ ನನ್ನ ಮೊದಲ ಕಾರ್ಯವೆಂದರೆ ನಿಮ್ಮ ದೇಶಕ್ಕೆ ಒಬ್ಬ ಬೋಧಕನನ್ನು ಕಳುಹಿಸುವುದು ಮತ್ತು ನೀವು ಅಲ್ಲಾಹನ ಧ್ವಜವನ್ನು ಹೊಂದಿರುವವರ ಮುಂದೆ ಹೇಗೆ ನಿಲ್ಲುತ್ತೀರಿ ಎಂದು ನೋಡುವುದು ಆಗಿದೆ. (ತಾರೀಖೆ ಅಹ್ಮದಿಯ್ಯತ್, ಸಂಪುಟ–4, ಪುಟ–443)

ಆದ್ದರಿಂದ ಅವರು ಹಾಗೆಯೇ ಮಾಡಿದರು. ಪ್ರಯಾಣದಿಂದ ಹಿಂದಿರುಗಿದ ನಂತರ, ಹಝ್ರತ್ ಮೌಲಾನಾ ಜಲಾಲುದ್ದೀನ್ ಶಮ್ಸ್ ಸಾಹಿಬ್ ಮತ್ತು ಹಝ್ರತ್ ಝ್ಯೆನುಲ್ ಅಬಿದೀನ್ ವಲಿಯುಲ್ಲಾ ಶಾ ಸಾಹಿಬ್ ಅವರನ್ನು ಸೀರಿಯಾಕ್ಕೆ ಕಳುಹಿಸಿದರು ಹೀಗೆ ಅಲ್ಲಿ ಜಮಾಅತ್ತಿನ ಔಪಚಾರಿಕ ಅಡಿಪಾಯವನ್ನು ಹಾಕಲಾಯಿತು. ಮೌಲಾನಾ ಶಮ್ಸ್ ಸಾಹಿಬ್ ಅವರ ಪ್ರಯತ್ನದಿಂದ ಜಮಾಅತ್ ಸೀರಿಯಾದಲ್ಲಿ ಪ್ರಗತಿ ಸಾಧಿಸಿತು.

ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಕಾಲದಲ್ಲಿ, ಕಬಾಬೀರ್ ಜೊತೆಗೆ, ಡಮಾಸ್ಕಸ್, ಬೈರುತ್, ಬಾಗ್ದಾದ್, ಜೋರ್ಡಾನ್, ಏಡನ್, ಈಜಿಪ್ಟ್, ಇರಾನ್ ಇತ್ಯಾದಿಗಳಲ್ಲಿ ಜಮಾಅತ್‌ಗಳನ್ನು ಸ್ಥಾಪಿಸಲಾಯಿತು. ಅಲ್ಲಿ ಅಹ್ಮದಿ (ಮುಬಲ್ಲಿಗ್‌ಗಳು) ಬೋಧಕರು ಹೋಗುತ್ತಿದ್ದರು. ಪವಿತ್ರ ಆತ್ಮಗಳನ್ನು ಅಲ್ಲಾಹನು ಜಮಾಅತ್ತನ್ನು ನೀಡುತ್ತಿದ್ದನು ತದನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು 1955ರಲ್ಲಿ ಮತ್ತೊಮ್ಮೆ ಸೀರಿಯಾದ ದೇಶಗಳ ಪ್ರವಾಸ ಕೈಗೊಂಡರು ಅಲ್ಲಿ ತಮ್ಮ ಕೈಯಿಂದ ನೆಟ್ಟ ಬೀಜವನ್ನು ಅಲ್ಲಾಹನು ತಮ್ಮ ಜಿವಿತಕಾಲದಲ್ಲಿಯೇ ಅದರ ಫಲವತ್ತಾದ ಮರದ ರೂಪದಲ್ಲಿ ಫಲವನ್ನು ತೋರಿಸಿದನು. ಹೀಗೆ ಅರಬ್ ರಾಷ್ಟ್ರಗಳು ಹಾಗೂ ಸೀರಿಯಾ ರಾಷ್ಟ್ರಗಳಲ್ಲಿ ವಿಷೇಶವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಮೂಲಕ ಆಧ್ಯಾತ್ಮಿಕ ಕ್ರಾಂತಿ ಹಾಗೂ ವಿಜಯಗಳು ಸಂಭವಿಸಲು ಪ್ರಾರಂಭವಾಗಲು ತೊಡಗಿತು. ಮತ್ತು ಓರ್ವ ಪ್ರಸಿದ್ಧ ಸೂಫಿ ಸಂತರಾದ ಹಝ್ರತ್ ಯಹ್ಯಾ ಬಿನ್ ಅಖಿಬ್(ರಹ) ಮುಅಲ್ಲಿಮ್ ಅಲ್–ಸಬಾಟ್ಯೆನ್ ಅವರ ಭವಿಷ್ಯವಾಣಿ **ವ ಮಹ್ಮೂದುನ್ ಸಯಝ್‌ಹರು ಬಅದ ಹಾಝ್ಹಾ, ವ ಯಮ್ಲಿಕುಶ್ಶಾಮ ಬಲಾ ಖಿತಾಲ್** (ಅಂದರೆ ತದನಂತರ ಮಹ್ಮೂದ್ ಅವರ ನಂತರ ಕಾಣಿಸಿಕೊಳ್ಳುತ್ತಾರೆ ಅವರು ಸೀರಿಯಾವನ್ನು ಯುದ್ಧವಿಲ್ಲದೆ ವಿಜಯಿಸಲ್ಪಡುತ್ತಾರೆ) ಮಹಾನ್ ವೈಭವದಿಂದ ನೆರವೇರಿತು. (ಸಂಪೂರ್ಣ ಭವಿಷ್ಯವಾಣಿಗಾಗಿ, ಶೇಖ್ ಅಹ್ಮದ್ ಬಿನ್ ಅಲಿ ಅಲ್–ಬುನಿ (ಮರಣ 622 ಹಿ) ಅವರ ಶಾಮ್ಸ್ ಅಲ್–ಮಾರಿಫ್ ಅಲ್–ಕುಬ್ರ ಪುಸ್ತಕವನ್ನು ನೋಡಿ)

ನಂತರ ಸಿರಿಯಾದಲ್ಲಿ, ಹಝ್ರತ್ ಜಲಾಲುದ್ದೀನ್ ಶಾಮ್ಸ್ ಸಾಹಿಬ್ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಯಿತು ಮತ್ತು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ದುಆದ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನು ಅವರನ್ನು ಗುಣಮುಖಗೊಳಿಸಿದನು. ನಂತರ, ಅಲ್ಲಾಹನ ಬುದ್ಧಿವಂತಿಕೆಯ ಅಡಿಯಲ್ಲಿ, ಮೌಲಾನಾ ಶಮ್ಸ್ ಸಾಹಿಬ್ ಹೈಫಾಗೆ ತೆರಳಬೇಕಾಯಿತು. ಆದ್ದರಿಂದ, 1928 ರಲ್ಲಿ, ಜಮಾಅತ್ ಅನ್ನು ಮೊದಲು ಹೈಫಾದಲ್ಲಿ ಮತ್ತು ನಂತರ ಕಬಾಬೀರ್‌ನಲ್ಲಿ ಸ್ಥಾಪಿಸಲಾಯಿತು. ಈ ಸಂದರ್ಭದಲ್ಲಿ ಕಬಾಬೀರ್ ಜಮಾಅತ್ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದು ಉಪಯುಕ್ತವಾಗಿದೆ.

### ಜಮಾಅತ್ ಕಬಾಬೀರ್

ಹಝ್ರತ್ ಮೌಲಾನಾ ಜಲಾಲುದ್ದೀನ್ ಸಾಹಿಬ್ ಶಾಮ್ಸ್ ಅವರು 1928 ರಲ್ಲಿ ಕಬಾಬೀರ್‌ನಲ್ಲಿ ಅಹ್ಮದಿಯಾ ಜಮಾಅತ್ ಅನ್ನು ಸ್ಥಾಪಿಸಿದರು. ಕಬಾಬೀರನ ಜಮಾಅತ್ ಮೊದಲಿನಿಂದಲೂ 100% ಅರಬ್ ಅಹ್ಮದೀಯರನ್ನು ಒಳಗೊಂಡಿದೆ. ಅವರಲ್ಲಿ ಹೆಚ್ಚಿನವರು ಪರಸ್ಪರ ಸಂಬಂಧ ಹೊಂದಿದ್ದಾರೆ. ಇಲ್ಲಿ ಮಸೀದಿಯನ್ನು 1931 ರಲ್ಲಿ ಸ್ಥಾಪಿಸಲಾಯಿತು, ಇದು ಅಹ್ಮದೀಯ ಸಮುದಾಯದ ಇತಿಹಾಸದಲ್ಲಿ ಅರೇಬಿಯಾದಲ್ಲಿ ನಿರ್ಮಿಸಲಾದ ಮೊದಲ ಮಸೀದಿಯಾಗಿದೆ. ಈ ಮಸೀದಿಯ ಹೆಸರು ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಕಡೆಗೆ ಸೂಚಿಸಲಾಗುತ್ತದೆ "ಜಾಮಿ ಸೈಯಸುನಾ ಮಹಮೂದ್" ಆಗಿದೆ. ಇದು ಕರ್ಮಾಲ್ ಪರ್ವತದ ಸಮುದ್ರದ ಸಮೀಪದಲ್ಲಿದೆ. 1979 ರ ನಂತರ, ಈ ಮಸೀದಿಯನ್ನು ವಿಸ್ತರಿಸಲಾಯಿತು. ಈ ಮಸೀದಿಯು ಎರಡು ಎತ್ತರದ ಮಿನಾರ್‌ಗಳನ್ನು ಹೊಂದಿದ್ದು, ತಿಲ್ ಅಬೀಬ್ ಹೈಫಾದ ಮುಖ್ಯ ರಸ್ತೆಯಲ್ಲಿ ದೂರದಿಂದ ನೋಡಬಹುದಾಗಿದೆ. ಯಾತ್ರಿಕರು ಆಗಾಗ್ಗೆ ಇಲ್ಲಿಗೆ ಭೇಟಿ ನೀಡುತ್ತಾರೆ ಮತ್ತು ಇಸ್ಲಾಮ್ ಅಹ್ಮದಿಯ್ಯತ್ ಬಗ್ಗೆ ಪರಿಚಯವನ್ನು ಪಡೆಯುತ್ತಾರೆ ಮತ್ತು ಅವರು ಈ ಸುಂದರವಾದ ಸ್ಥಳಕ್ಕೆ ಬಂದು ಸುಂದರವಾದ ಮಸೀದಿಯಲ್ಲಿ ನಿಜವಾದ ಇಸ್ಲಾಂನ ಸೌಂದರ್ಯವನ್ನು ಕಂಡುಕೊಂಡಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕಬಾಬೀರ್ ನಲ್ಲಿ ನೆಲೆಸಿದ ಕುಟುಂಬದ ಹೆಸರು "ಔದಾ". ಒಟ್ಟೋಮನ್ ಕ್ಯಾಲಿಫೇಟ್‌ನ ಕೊನೆಯಲ್ಲಿ, 1850 ರ ಸುಮಾರಿಗೆ, ಮುಸಮ್ಮಿ ಔದಾ ನದಿ ಸಾಹಿಬ್ ಎಂಬ ವ್ಯಕ್ತಿ ತನ್ನ ಐದು ಮಕ್ಕಳೊಂದಿಗೆ ಜೆರುಸಲೆಮ್ ಬಳಿಯ ನಲಿನ್ ಎಂಬ ಹಳ್ಳಿಯಿಂದ ವಲಸೆ ಬಂದು ಕರ್ಮಾಲ್ ಪರ್ವತದ ಒಂದು ಮೂಲೆಯಲ್ಲಿ ನೆಲೆಸಿದರು.

ನಂತರ, ಸರ್ವಶಕ್ತನಾದ ಅಲ್ಲಾಹನು ಈ ಕುಟುಂಬಕ್ಕೆ ಅಹ್ಮದಿಯ್ಯತ್ತನ್ನು ಸ್ವೀಕರಿಸುವ ಸೌಭಾಗ್ಯ ನೀಡಿದನು. ಆದ್ದರಿಂದ, ಔದಾ ಸಾಹಿಬ್ ಅವರ ಪುತ್ರರಲ್ಲಿ ಒಬ್ಬರು ನೂರು ವರ್ಷಗಳಿಗಿಂತ ಹೆಚ್ಚು ಕಾಲ ಬದುಕಿದ್ದರು ಮತ್ತು ಅವರ ಮಕ್ಕಳೊಂದಿಗೆ ಬೈಅತ್ ಮಾಡಲು ಸಾಧ್ಯವಾಯಿತು. ನಂತರ, ದಿವಂಗತ ಔದಾ ಸಾಹಿಬ್ ಅವರ ಎಲ್ಲಾ ಮೊಮ್ಮಕ್ಕಳು ಮತ್ತು ಅವರ ಮಕ್ಕಳು ಇಮಾಮ್ ಉಝ್ಝಮಾನ್‌ನ ಜಮಾಅತ್‌ಗೆ ಸೇರಿಕೊಂಡರು.

ಇಲ್ಲಿ ಧರ್ಮಪ್ರಚಾರಕರಾಗಿದ್ದ ಸರಪಳಿಯ ಹಿರಿಯ ವಿದ್ವಾಂಸರು ಕಬಾಬೀರ್ ಅನ್ನು ಮಧ್ಯಪ್ರಾಚ್ಯದ ಕೇಂದ್ರವನ್ನಾಗಿಸಿ ಮಹಾನ್ ವಿದ್ವತ್ ಮತ್ತು ಉಪದೇಶದ ಕಾರ್ಯವನ್ನು ಮಾಡಿದ್ದಾರೆ. 1932 ರಲ್ಲಿ, ಮೊದಲ ಅರೇಬಿಕ್ ನಿಯತಕಾಲಿಕೆ "ಅಲ್–ಬಿಶಾರಾತುಲ್ ಇಸ್ಲಾಮೀಯ ಅಲ್–ಅಹ್ಮದಿಯಾ" ವನ್ನು ಗೌರವಾನ್ವಿತ ಮೌಲಾನಾ ಅಬುಲ್ ಅತಾ ಸಾಹಿಬ್ ಜಾಲಂಧರಿ ಪ್ರಕಟಿಸಿದರು ಮತ್ತು ನಂತರ ಅದೇ ನಿಯತಕಾಲಿಕವನ್ನು 1935 ರಿಂದ "ಅಲ್–ಬುಶ್ರ" ಹೆಸರಿನಲ್ಲಿ ಪ್ರಕಟಿಸಲಾಯಿತು. ಅದು ಇಲ್ಲಿಯುವರೆಗೂ ಮುಂದುವರಿಯುತ್ತಿದೆ. ಮಕ್ಕಳ ತರಬೇತಿ ಹಾಗೂ ಶಿಕ್ಷಣಕ್ಕಾಗಿ "ಮದ್ರಸಾ ಅಹ್ಮದಿಯಾ" ಎಂಬ ಹೆಸರಿನಲ್ಲಿ ನಿಯಮಿತ ಶಾಲೆಯನ್ನು ಸ್ಥಾಪಿಸಲಾಯಿತು. ನಂತರ ನಿಧಾನವಾಗಿ ಜಮಾಅತ್ತಿನ ಸಂಪ್ರದಾಯಗಳನ್ನು ಪಾಲಿಸಿ ಖಲೀಫರ ಯೋಜನೆಗಳನ್ನು ಅನುಸರಿಸಿ ಜಮಾಅತ್ತಿನ ಸಮಾರಂಭಗಳನ್ನು ಆಯೋಜಿಸಲು ಪ್ರಾರಂಭಿಸಿತು. ಮತ್ತು 1968 ರಿಂದ ಯೌಮೆ ಮುಸ್ಲಿಹ್ ಮೌಊದ್(ರ), ಯೌಮೆ ಮಸೀಹ್ ಮೌಊದ್(ಅ), ಮತ್ತು ಯೌಮೆ ಖಿಲಾಫತ್ ಇತ್ಯಾದಿಗಳನ್ನು ಆಯೋಜಿಸಲಾಯಿತು. ಈ ನಿಟ್ಟಿನಲ್ಲಿ ಗೌರವಾನ್ವಿತ ಮಾನ್ಯ ಮೌಲಾನ ಬಶೀರುದ್ದೀನ್ ಉಬೈದುಲ್ಲಾಹ್ ಸಾಹಿಬ್, ದಿವಂಗತ ಬೋಧಕರ ಪ್ರಯತ್ನಗಳು ಉಲ್ಲೇಖಾರ್ಹ. 1986 ರಲ್ಲಿ, ಮೌಲಾನಾ ಮುಹಮ್ಮದ್ ಹಮೀದ್ ಕೌಸರ್ ಸಾಹಿಬ್ ಅವರ ಪ್ರಯತ್ನದಿಂದಾಗಿ, ಮಜ್ಲಿಸ್ ಖುದಾಮ್–ಉಲ್–ಅಹ್ಮದಿಯಾ ಅವರ ವಾರ್ಷಿಕ ಇಜ್ತಿಮಾವನ್ನು ಯೌಮೆ ಮುಸ್ಲಿಹ್ ಮೌಊದ್(ರ)ನ ಸಂದರ್ಭದಲ್ಲಿ ಒಟ್ಟಿಗೆ ಆಯೋಜಿಸಲು ಪ್ರಾರಂಭಿಸಿತು ಮತ್ತು ಈ ಸಭೆಗಳು ವಾಸ್ತವವಾಗಿ ವಾರ್ಷಿಕ ಸಮ್ಮೇಳನಕ್ಕೆ ಪೂರ್ವಭಾವಿಯೆಂದು ಸಾಬೀತಾಯಿತು.

### ಕಬಾಬೀರ್‌ನ ಆರಂಭಿಕ ಜಲ್ಸ ಸಾಲಾನಗಳು

1995 ರಲ್ಲಿ, ಕಬಾಬೀರಿನಲ್ಲಿ ಮೊದಲು ಸಾಮಾನ್ಯವಾಗಿ ಜಲ್ಸಾ ಸಾಲಾನವು ಪ್ರಾರಂಭವಾಯಿತು, ಇದರಲ್ಲಿ ಕಬಾಬೀರಿನ ಜನರಲ್ಲದೆ, ಹೊರಗಿನ ಪ್ರದೇಶಗಳ ಅತಿಥಿಗಳು ಸಹ ಬಂದರು. ನಂತರ ಏಪ್ರಿಲ್ 1996 ರಲ್ಲಿ, ಕಬಾಬೀರನ ಎರಡನೇ ಜಲ್ಸಾ ಸಾಲಾನ ನಡೆಯಿತು. ಈ ಮೂರು ದಿನಗಳ ಜಲ್ಸದಲ್ಲಿ ಒಂದು ದಿನವನ್ನು ಯೌಮೆ ತಬ್ಲೀಗ್ (ಉಪದೇಶದ ದಿನ) ವನ್ನಾಗಿ ಆಚರಿಸಲಾಯಿತು. ಅಂತೆಯೇ ಕಬಾಬೀರರ ಮೂರನೇ ಜಲ್ಸ ಸಾಲಾನವು ಏಪ್ರಿಲ್ 1997 ರಂದು ನಡೆಯಿತು. ನಂತರ ಕೆಲವು ಪ್ರತಿಕೂಲವಾದ ಸ್ಥಳೀಯ ಪರಿಸ್ಥಿತಿಗಳಿಂದ ಮೂರು ವರ್ಷಗಳವರೆಗೆ (1998 ರಿಂದ 2000) ಜಲ್ಸಗಳು ನಡೆಯಲಿಲ್ಲ. ಅದಾದ ನಂತರ 2001ರಿಂದ ಇಂದಿನವರೆಗೆ ಕಬಾಬೀರಿನಲ್ಲಿ ನಿತ್ಯವೂ ಜಲ್ಸ ಸಾಲಾನಗಳು ನಡೆಯುತ್ತಿವೆ.

### ಅರೇಬಿಯನ್ ಪೆನಿನ್ಸುಲಾದಲ್ಲಿನ ಪ್ರತಿಕೂಲ ಪರಿಸ್ಥಿತಿಗಳು

ಇಸ್ರಾಈಲ್ ಅನ್ನು 1948 ರಲ್ಲಿ ಸ್ಥಾಪಿಸಲಾಯಿತು. ಹೈಫಾ ಮತ್ತು ಇತರ ಪ್ರದೇಶಗಳಿಂದ ಮುಸ್ಲಿಮರು ಜೋರ್ಡಾನ್ ಮತ್ತು ಸಿರಿಯಾಕ್ಕೆ ವಲಸೆ ಬಂದರು. ಆದರೆ ಅಹ್ಮದೀಯ ಖಲೀಫರ ಅನುಗ್ರಹದಿಂದ, ಕಬಾಬೀರಿನ ಜನರು ಕಬಾಬೀರನ್ನು ಬಿಡಲಿಲ್ಲ ಮತ್ತು ತಮ್ಮ ಭೂಮಿಯನ್ನು ಯಹೂದಿಗಳ ಕೈಗೆ ಬಿಡಲಿಲ್ಲ ಮತ್ತು ಪ್ರತಿ ಕಷ್ಟಕರ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಿದ್ದರು. ಅಲ್ಲಾಹನ ಅನುಗ್ರಹದಿಂದ, ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ದುಆ ಮತ್ತು ಮಾರ್ಗದರ್ಶನದಲ್ಲಿ, ಕಬಾಬೀರ್‌ನ ಜನರು ಸುರಕ್ಷಿತವಾಗಿದ್ದರು ಮತ್ತು ತಮ್ಮ ಮಸೀದಿಯ ಸುತ್ತಲೂ ಒಳ್ಳೆಯ ನಡವಳಿಕೆಯನ್ನು ವ್ಯಕ್ತಪಡಿಸಿದರು ಮತ್ತು ಅವರು ತಮ್ಮ ನೈತಿಕತೆಯ ಅಸ್ತ್ರದಿಂದ ಶತ್ರುಗಳನ್ನು ಬೆದರಿಸಿದರು ಮತ್ತು ಅವರು ಇಲ್ಲಿಯವರೆಗೆ ಶಾಂತಿ ಮತ್ತು ಸಾಮರಸ್ಯದಿಂದ ವಾಸಿಸುತ್ತಿದ್ದಾರೆ. ಆದರೆ ಇತರ ಅರಬ್ ದೇಶಗಳ ಪರಿಸ್ಥಿತಿಯು ಹಾಗಲ್ಲ.

1960ರ ದಶಕದಲ್ಲಿ, ಅರಬ್ ದೇಶಗಳಲ್ಲಿ ಮಹತ್ತರವಾದ ರಾಜಕೀಯ ಬದಲಾವಣೆಗಳು ಸಂಭವಿಸಿದವು ಮತ್ತು ರಾಜಕೀಯ ಅಸ್ಥಿರತೆ ಸಂಭವಿಸಿತು, ಅದರಿಂದಾಗಿ ಅಹ್ಮದೀಯ ಜಮಾಅತ್‌ಗೆ ಅತ್ಯಂತ ಹಾನಿವುಂಟಾಯಿತು. ಹೀಗಾಗಿ ಅರೇಬಿಯನ್ ಪೆನಿನ್ಸುಲಾದಲ್ಲಿ ಉತ್ತುಂಗಕ್ಕೇರಿದ್ದ ಅಹ್ಮದಿಯಾ ಜಮಾಅತ್‌ನ ಚಟುವಟಿಕೆಗಳು ಮತ್ತೊಮ್ಮೆ ಸೀಮಿತವಾಗಿ ಉಳಿದುಕೊಂಡಿತು. ತಬ್ಲೀಗ್‌ನ ಕೊರತೆಯಿಂದಾಗಿ, ನವ ಅಹ್ಮದೀಯರ ಸಂಖ್ಯೆ ಶೂನ್ಯಕ್ಕೆ ಇಳಿಯಿತು ಅದೇ ರೀತಿ ಹಳೆಯ ಅಹ್ಮದೀಯರು ನಿರಂತರ ತೊಂದರೆಗಳಿಂದ ಹಾಗೂ ಮಾನಸಿಕ ಹಿಂಸೆಯಿಂದ ಕೇಂದ್ರದೊಂದಿಗೆ ತಮ್ಮ ಸಂಬಂಧವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಹೀಗಾಗಿ, ಅಹ್ಮದಿಯರು ಈ ಪ್ರದೇಶಗಳಲ್ಲಿ ಕೆಲವು ಸ್ಥಳಗಳಲ್ಲಿ ಮಾತ್ರ ಉಳಿದುಕೊಂಡರು. ಆದರೆ ಅಹ್ಮದಿಯ್ಯತ್‌ನ ಬಲವಾದ ಮತ್ತು ಸಕ್ರಿಯ ಮತ್ತು ಪ್ರಮುಖ ಅಸ್ತಿತ್ವವು ದೃಶ್ಯದಿಂದ ಕಣ್ಮರೆಯಾಯಿತು.

**ಅರೇಬಿಯನ್ ಪೆನೆನ್ಸುಲದಲ್ಲಿ ಜಮಾಅತ್‌ನ ಪುನರುತ್ಥಾನ**

ಖಿಲಾಫತೆ ರಾಬಿಯಾದಲ್ಲಿ (ಚತುರ್ಥ ಖಿಲಾಫತ್ ಕಾಲಘಟ್ಟದಲ್ಲಿ), MTA ಮೂಲಕ ಮತ್ತು ವಿಶೇಷವಾಗಿ 'ಲಿಖಾ ಮಾಅಲ್ ಅರಬ್' ಕಾರ್ಯಕ್ರಮದ ಮೂಲಕ ಅರಬ್ಬರು ಜ್ಞಾನವನ್ನು ಅಭಿವೃದ್ಧಿಯಾಯಿತು ಪ್ರತಿಯೊಂದು ಸ್ಥಳಗಳಲ್ಲಿ ಜಮಾಅತ್‌ನ ಬಗ್ಗೆ ಚರ್ಚೆಗಳು ಪ್ರಾರಂಭವಾಯಿತು. ನಂತರ ಖಿಲಾಫತೆ ಖಾಮಿಸ್ (ಪಂಚಮ ಖಲೀಫರ ಕಾಲಘಟ್ಟದಲ್ಲಿ) ಅವಧಿಯು ಅರಬ್ಬರ ಧಾರ್ಮಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ದೊಡ್ಡ ಕ್ರಾಂತಿಯನ್ನು ಸೃಷ್ಟಿಸಿದೆ. ಅರಬ್ ದೇಶಗಳಲ್ಲಿ ಖಿಲಾಫತೆ ಖಾಮಿಸದಲ್ಲಿ ಆಗಿರುವ ಅಭಿವೃದ್ಧಿಗಳನ್ನು ಉಲ್ಲೇಖಿಸಲು ದೀರ್ಘಕಾಲಬೇಕಾಗಿದೆ. ಇಲ್ಲಿ ಕೆಲವು ಪ್ರಮುಖ ವಿಷಯಗಳನ್ನು ಪ್ರಸ್ತಾಪಿಸಲಾಗುವುದು.

**ಪಂಚಮ ಖಿಲಾಫತ್ ಕಾಲಘಟ್ಟದಲ್ಲಿ**
**ಅರಬ್ ದ್ವೀಪದಲ್ಲಿ ಜಮಾಅತ್ತಿನ ಬೆಳವಣಿಗೆಗಳು**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರು ಖಿಲಾಫತ್ ಪೀಠವನ್ನು ತಲುಪಿದಾಗ ಒಮ್ಮೆ ನಮ್ಮ ಪ್ರಾಮಾಣಿಕ ಅರಬ್ ಸಹೋದರರಾದ ಮಾನ್ಯ ಮುನೀರ್ ಔದಾ ಸಾಹಿಬ್ ಅವರಿಗೆ ಹೇಳಿದರು, ನನ್ನ ಕಾಲಘಟ್ಟದಲ್ಲಿ ಅರಬ್ಬರಲ್ಲಿ ತಬ್ಲೀಗ್‌ಗಾಗಿ ದಾರಿ ತೆರೆಯುತ್ತದೆ ಮತ್ತು ಅರಬ್ಬರಲ್ಲಿ ಅಹ್ಮದೀಯತ್ ಪ್ರವೇಶಿಸುತ್ತದೆ ಮತ್ತು ಅವರು ಹೆಚ್ಚಿನ ಸಂಖ್ಯೆಯಲ್ಲಿ ಅಹ್ಮದೀಯತ್‌ನಲ್ಲಿ ಪ್ರವೇಶಿಸುತ್ತಾರೆ. ಹಾಗಾಗಿ ಹುಝೂರ್ ಅನ್ವರ್(ಅತಬಿಅ) ರವರ ಈ ಮಾತುಗಳು ಇಂದು ಅರಬ್ಬರಲ್ಲಿ ಜಮಾಅತ್‌ನ ವಿಜಯಗಳು ವ್ಯವಸ್ಥಿತ ರೂಪದಲ್ಲಿ ನೆರವೇರುತ್ತಿವೆ. ಎಂ.ಟಿ.ಎ 3 ಅಲ್ ಅರೇಬಿಯಾ ಕೂಡ ಈ ಸರಪಳಿಯ ಕೊಂಡಿಯಾಗಿತ್ತು. ಆ ಸಮಯದಲ್ಲಿ, ಒಂದು ಶಾಶ್ವತ ಅರೇಬಿಕ್ ಚಾನೆಲ್ ಮತ್ತು ಅದಕ್ಕಾಗಿ ನಿರಂತರ ಕಾರ್ಯಕ್ರಮವನ್ನು ಸಿದ್ಧಪಡಿಸುವುದು ಸಂಪೂರ್ಣವಾಗಿ ಅಸಾಧ್ಯವಾಗಿತ್ತು, ಆದರೆ ಸರ್ವಶಕ್ತನಾದ ಅಲ್ಲಾಹನ ಸರ್ವೋಚ್ಚ ನಾಯಕರ ಆಸೆ ಹಾಗೂ ಉದ್ದೇಶಗಳನ್ನು ಹೇಗೆ ನಿಲ್ಲಿಸಬಹುದು?

**ಹುಝೂರ್ ಅನ್ವರ್(ಅತಬಿಅ) ರವರ ಅರಬ್ಬರನ್ನು ಉದ್ದೇಶಿಸಿ ಬೋಧನೆ**

ಜೂನ್ 8, 2008 ರಂದು ಅಲ್-ಹವ್ವಾರ್ ಅಲ್-ಮುಬಾಶಿರ್ ಕಾರ್ಯಕ್ರಮವೊಂದರಲ್ಲಿ, ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್ (ಅತಬಿಅ) ಅವರು ಅರಬ್ಬರನ್ನು ಉದ್ದೇಶಿಸಿ ಹೇಳಿದರು:

"ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕತಹೂ. ಓ, ಎಲ್ಲಾ ಅರಬ್ಬರೇ! ನಿಮ್ಮ ಮೇಲೆ ಅಲ್ಲಾಹನ ಅನೇಕ ಅನುಗ್ರಹಗಳು, ಪ್ರತಿಫಲಗಳು ಮತ್ತು ಕರುಣೆ ಇದೆ, ಈ ಸಮಯದಲ್ಲಿ ನಿಮ್ಮ ಸಂಖ್ಯೆಯು ಪ್ರಪಂಚದ ದೃಷ್ಟಿಯಲ್ಲಿ ಅಲ್ಪವಾಗಿದೆ, ಆದರೆ ಈ ಸಮಯದಲ್ಲಿ ನಿಮ್ಮ ಹೃದಯಗಳು ಪ್ರಕಾಶದಿಂದ ತುಂಬಿವೆ ಮತ್ತು ಶೀಘ್ರದಲ್ಲೇ ಈ ಸಂಖ್ಯೆಯು ಸಾವಿರ, ಲಕ್ಷ ಮತ್ತು ಕೋಟಿಗಳಾಗಿ ಬದಲಾಗಲಿದೆ ಎಂದು ನನಗೆ ವಿಶ್ವಾಸವಿದೆ ಇನ್‌ಶಾಅಲ್ಲಾಹ್........ ನಾನು ಇಂದು ನನ್ನ ಎಲ್ಲಾ ಅರಬ್ ಅಹ್ಮದಿ ಸಹೋದರರಿಗೆ ಈ ಸಂದೇಶವನ್ನು ನೀಡುತ್ತೇನೆ, ಇಂದು ನಿಮ್ಮನ್ನು ಅಲ್ಲಾಹನು ಅನುಗ್ರಹಿಸಿರುವ ಇಸ್ಲಾಮ್ ಧರ್ಮವನ್ನು ನೀವು ಇಡೀ ಪ್ರಪಂಚಾದಾದ್ಯಂತ ಹರಡಿಸಬೇಕು ಮತ್ತು ಇಡೀ ಅರಬ್ ರಾಷ್ಟ್ರವವನ್ನು ಮಸೀಹ್ ಮುಹಮ್ಮದಿಯ ಪಾದದಡಿಗೆ ಸೇರಿಸವರೆಗೂ ಸುಮ್ಮನೆ ಕುಳುತುಕೊಳ್ಳಬೇಡಿ. ಮತ್ತು ಇದು ಮಸೀಹ್ ಮುಹಮ್ಮದಿಯ ಪಾದದ ಕೆಳಗೆ ತರುವುದು ಮಸೀಹ್ ಮುಹಮ್ಮದಿಯ ಮಹಿಮೆ ಎಂಬ ಕಾರಣದಿಂದಲ್ಲ. ಇದು ನಿಜವಾಗಿಯೂ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪಾದದ ಕೆಳಗೆ ತರುವ ವಿಷಯವಾಗಿದೆ, ಇಂದು ಜಗತ್ತು ಈ ವಿಷಯವು ಮರೆತಿದೆ.......... ಮೇ 27 ರಂದು ಯೌಮೆ ಖಿಲಾಫತ್ (ಖಿಲಾಫತ್ ದಿನದಂದು) ನಾನು ಎಲ್ಲಾ ಅಹ್ಮದೀಯರಿಂದ ಒಂದು ಪ್ರತಿಜ್ಞೆ ತೆಗೆದುಕೊಂಡಿದ್ದೆ, ಅಂದರೆ ನೀವು ಪ್ರತಿ ತ್ಯಾಗಕ್ಕೂ ಸಿದ್ಧರಾಗಿರುತ್ತೀರಿ ಮತ್ತು ರಸೂಲುಲ್ಲಾಹ್(ಸ) ಅವರ ಧ್ವಜವನ್ನು ಇಡೀ ಪ್ರಪಂಚದಾದ್ಯಂತ ಆರೋಹಿಸುವವರೆಗೆ ಕುಳಿತುಕೊಳ್ಳುವುದಿಲ್ಲ ಎಂದು. ಸರ್ವಶಕ್ತನಾದ ಅಲ್ಲಾಹನಲ್ಲಿ ನಾನು ದುಆ ಮಾಡುತ್ತೇನೆ ಮತ್ತು ನಾನು ಅರಬ್ ಜಗತ್ತಿನಲ್ಲಿ ನೆಲೆಸಿರುವ ನಿಮ್ಮಲ್ಲಿರುವ ಪ್ರತಿಯೊಬ್ಬ ಅಹ್ಮದಿಯೂ ನನ್ನ ಸುಲ್ತಾನ್ ಉನ್ನಸೀರ್ ಆಗಿ ಈ ಕಾರ್ಯಕ್ಕೆ ಕೈಜೋಡಿಸಲಿ ಎಂದು ಆಶಿಸುತ್ತೇನೆ. ಅಲ್ಲಾಹನು ನಿಮಗೆ ತೌಫೀಕ್ ನೀಡಲಿ. ಆಮೀನ್."

**ಯನ್ಸುರುಕ ರಿಜಾಲನ್ ನೂಹಿ ಅಲೈಹಿಮ್ ಮಿನಸ್ಸಮಾಇ**

MTA ಅಲ್-ಅರೇಬಿಯಾದ ಮೂಲಕ, ತಬ್ಲೀಗ್ ಮಾರ್ಗವನ್ನು ತೆರೆಯಲಾಗಿದ್ದರೂ, ಮಾರ್ಗದರ್ಶನ ನೀಡುವುದು ಸರ್ವಶಕ್ತನಾದ ಅಲ್ಲಾಹನ ಕೈಯಲ್ಲಿದೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಅನೇಕ ಒಳ್ಳೆಯ ಸ್ವಭಾವದ ಪವಿತ್ರ ಆತ್ಮಗಳನ್ನು ನಿಜವಾದ ದೈವದರ್ಶನದ ಮೂಲಕ ರಸೂಲುಲ್ಲಾಹ್(ಸ)ರವರ ನಿಜವಾದ ಪ್ರೇಮಿಯಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಮಹಾನ್ ಖಲೀಫರ ಚಿತ್ರಗಳನ್ನು ತೋರಿಸಿದನು ಮತ್ತು ನಂತರ MTA ಮೂಲಕ ಅವರು ಆ ಚಿತ್ರಗಳನ್ನು ತಮ್ಮ ಕಣ್ಣುಗಳಿಂದ ವೀಕ್ಷಿಸಿದರು ಮತ್ತು ಅಲ್ಲಾಹನ ಮಾರ್ಗದರ್ಶನವನ್ನು ಪಡೆದರು ಈ ರೀತಿಯಲ್ಲಿ ಮಾರ್ಗದರ್ಶನ ಪಡೆದ ಅನೇಕ ಜನರಿದ್ದಾರೆ. ಒಂದು ಉದಾಹರಣೆಯನ್ನು ಕೆಳಗೆ ನೀಡಲಾಗಿದೆ.

ಕಬಾಬೀರ್‌ನಿಂದ ನೇರ ಪ್ರಸಾರವಾಗುವ ಒಂದು ಕಾರ್ಯಕ್ರಮ ಮಜ್ಲಿಸ್-ಎ-ಅರ್ಫಾನ್‌ನ ಸಂದರ್ಭದಲ್ಲಿ, ಈಜಿಪ್ಟ್‌ನ ಓರ್ವ ಸ್ನೇಹಿತ, ಮಾನ್ಯ ಅಬು ಮುಹಮ್ಮದ್ ಸಾಹಿಬ್ ರವರು ಕರೆ ಮಾಡಿ ಅಳುತ್ತಾ ಹೇಳಿದರು, "ಐದಾರು ವರ್ಷಗಳ ಹಿಂದೆ, ನಾನು ಕನಸಿನಲ್ಲಿ ರಸೂಲುಲ್ಲಾಹ್(ಸ) ಅವರು ಬಂದು ನನ್ನನ್ನು ತಮ್ಮ ತೋಳುಗಳಲ್ಲಿ ಇರಿಸಿದರು ಮತ್ತು ನಾನು ತಣ್ಣಗಾಗುತ್ತಿರುವಾಗ ನನ್ನನ್ನು ಬಿಗಿಯಾಗಿ ಹಿಡಿದಿದ್ದರು. ನಂತರ, ರಸೂಲುಲ್ಲಾಹ್(ಸ) ನನ್ನನ್ನು ಖಾಲಿ ಸ್ಥಳಕ್ಕೆ ಕರೆದೊಯ್ದರು. ಆ ಸಮಯದಲ್ಲಿ ನಾನು ಬೇರೆ ಯಾವುದೋ ಕಾರಣಕ್ಕಾಗಿ ಕೋಪಗೊಂಡಿದ್ದೆ, ರಸೂಲುಲ್ಲಾಹ್(ಸ) ನನಗೆ ಹೇಳಿದರು, "ನಮ್ಮ ಮುಂದೆ ಇರುವ ಈ ಮನೆಯನ್ನು ನೋಡು, ನಾನು ಆ ಮನೆಯಯನ್ನು ನೋಡಿದಾಗ ಒಂದು ಕೊಳಕು ಸೈತಾನನ ರೂಪದಲ್ಲಿ ಓರ್ವ ವ್ಯಕ್ತಿಯು ಹೊರಬರುತ್ತಿರುವುದಾಗಿ ನೋಡಿದೆ. ಇದಕ್ಕೆ ರಸೂಲುಲ್ಲಾಹ್(ಸ) ಹೇಳಿದರು, "ಇವನು ಸೈತಾನನಾಗಿದ್ದಾನೆ, ಇವನು ಕೋಪದ ಸ್ಥಿತಿಯಲ್ಲಿ ಒಬ್ಬ ವ್ಯಕ್ತಿಯ ಮೇಲೆ ತನ್ನನ್ನು ತಾನೇ ಹೇರುತ್ತಾನೆ ಮತ್ತು ಕೋಪಗೊಳ್ಳದಿರಲು ನಾನು ನಿನಗೆ ಸಲಹೆ ನೀಡುತ್ತೇನೆ. ಹೀಗೆ ರಸೂಲುಲ್ಲಾಹ್(ಸ)ರವರು ನನಗೆ ಈ ಸಲಹೆಯನ್ನು ಮೂರು ಬಾರಿ ಪುನರಾವರ್ತಿಸಿದರು. ನಂತರ ನನ್ನನ್ನು ಕರೆದುಕೊಂಡು ಹೊರಟು ಹೋದರು. ನನ್ನ ಪ್ರೀತಿಯ ಯಜಮಾನ ನನಗೆ ಸಲಹೆ ನೀಡಲು ಬಂದಿದ್ದಾರೆ ಎಂದು ಹೇಳುತ್ತಾ ಹೋಗುತ್ತಿದ್ದೆ.

ಸ್ವಲ್ಪ ಕಾಲಾವಧಿಯ ನಂತರ ನಾನು ಟೀ.ವಿ ನಲ್ಲಿ ಚಾನೆಲ್‌ಗಳನ್ನು ಬದಲಾಯಿಸುತ್ತಿದ್ದೆ ಮತ್ತು ನನ್ನ ಯಜಮಾನ ಸಯ್ಯದ್‌ನಾ ಅಹ್ಮದ್ ಅಲೈಹಿಸ್ಸಲಾಮ್ ಅವರನ್ನು ನೋಡಿದೆ ಮತ್ತು ನಾನು ಹೇಳಿದೆ, ಅಲ್ಲಾಹನ ಆಣೆ!! ಇವರು ರಸೂಲುಲ್ಲಾಹ್(ಸ) ಅವರ ರೂಪದಲ್ಲಿ ನಾನು ಕಂಡ ವ್ಯಕ್ತಿಯಾಗಿದ್ದಾರೆ. ಈ ದೃಶ್ಯವನ್ನು ನಾನು ಈ ಹಿಂದೆ ಅನೇಕ ಬಾರಿ ನನ್ನ ಕನಸಿನಲ್ಲಿ ನೋಡಿದ್ದೆ ಆದರೆ ಅದನ್ನು ಗುರುತಿಸಲಿಲ್ಲ. ಇವರು ನನ್ನ ಗುರು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲಯಹಿಸ್ಸಲಾಮ್ ಅವರ ರೂಪ ಎಂದು ನನಗೆ ಖಚಿತವಾಯಿತು. ಆದರೆ ಅವರು ತಮ್ಮ ಹಳೆಯ ನಂಬಿಕೆಗಳನ್ನು ಬಿಟ್ಟುಕೊಡಲು ಸಾಧ್ಯವಿಲ್ಲ ಆದ್ದರಿಂದ ಬೈಅತ್ ಮಾಡಲಿಲ್ಲ ಎಂಬ ವಾಸ್ತವದ ಹೊರತಾಗಿಯೂ, ಇವೆಲ್ಲವೂ ಸುಮಾರು ನಾಲ್ಕು ವರ್ಷಗಳ ಹಿಂದೆಯ ವಿಷಯವಾಗಿದೆ. ಈಗ ಒಂದು ವಾರದ ಹಿಂದೆ ಯಾವಾಗ ನಾನು ನಿದ್ರೆಯಿಂದ ಎಚ್ಚರವಾದಾಗ, "ನೀವು ಎಲ್ಲವನ್ನೂ ನಂಬುತ್ತೀರಿ, ಆದರೆ ಸರ್ವಶಕ್ತನಾದ ಅಲ್ಲಾಹನು ಆಕಾಶದಿಂದ ಕಳುಹಿಸಿದ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರನ್ನು ನೀವು ನಂಬುವುದಿಲ್ಲ" ಎಂದು ದೊಡ್ಡ ಧ್ವನಿ ಕೇಳಿದೆ. ಅಲ್ಲಾಹನ ಆಣೆ!! ಹೀಗೆಯೇ ಆಯಿತು. ನಾನು ತಕ್ಷಣ ಎದ್ದು ನನ್ನ ಹೆಂಡತಿ ಮಕ್ಕಳಿಗೆ ಹೇಳಿದೆನು ಇಂದಿನಿಂದ ನೀವೆಲ್ಲರೂ ಅಹ್ಮದಿಯರಾಗಿದ್ದೀರಿ ಮತ್ತು ಅಹಮದಿಯಾಗದೆ ನಿಮ್ಮ ಮೇಲೆ ಸಾವು ಬರಬಾರದು ಎಂದು ನಾನು ನಿಮಗೆ ಉಯಿಲು ಬರೆಯುತ್ತೇನೆ.

**ದಾರ್ ಅಲ್-ಅಮನ್ (ವೆಸ್ಟ್ ಬ್ಯಾಂಕ್ ಪ್ಯಾಲೆಸ್ಟೈನ್)**

2000ರ ಮೊದಲ ದಶಕದಲ್ಲಿ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ವೆಸ್ಟ್ ಬ್ಯಾಂಕ್ ಪ್ಯಾಲೆಸ್ಟೈನ್‌ನಲ್ಲಿ ಅನೇಕ ಪವಿತ್ರ ಹೃದಯದ ಜನರು ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರಿದರು. ಖಿಲಾಫತೆ ಖಾಮಿಸದ ಕಾಲಘಟ್ಟದಲ್ಲಿ ಅರಬ್ಬರ ನಡುವೆ ಜಮಾಅತ್ ಎಷ್ಟು ಬೇಗನೆ ಪ್ರಸಿದ್ಧಿ ಹೊಂದಿತು ಎಂಬುದಕ್ಕೆ ವೆಸ್ಟ್ ಬ್ಯಾಂಕ್ ಜಮಾಅತ್ ಅತ್ಯುತ್ತಮ ಉದಾಹರಣೆಯಾಗಿದೆ. ವೆಸ್ಟ್ ಬ್ಯಾಂಕ್‌ನ ಅನೇಕ ಪ್ರದೇಶಗಳಲಿ ಬೈಅತ್ ಮಾಡಿದರೂ, ಬಹುಪಾಲು ತುಲ್ಕರ್ಮ್ ನಗರದ ಉಪನಗರಗಳಲ್ಲಿ ಉಳಿದಿದೆ. ತುಲ್ಕರ್ಮ್ ನಗರದ ಅಡಿಯಲ್ಲಿ

ಕಫ್ರ್ ಸುರ್ ಎಂಬ ಹಳ್ಳಿಯೂ ಇದೆ, ಅಲ್ಲಿ ಮಾನ್ಯ ಅಬ್ದುಲ್ ಖಾದಿರ್ ಮದ್‌ಲಲ್ ಸಾಹಿಬ್ ಅವರ ಕುಟುಂಬವು ಚತುರ್ಥ ಖಿಲಾಫತ್ ಕಾಲಘಟ್ಟದ ಅಂತ್ಯದಲ್ಲಿ ಬೈಯತ್ ಮಾಡಿದರು. ಈಗ ಈ ಪ್ರದೇಶದ ಅನೇಕ ಇತರ ಸ್ನೇಹಿತರು ಸಹ ಖಿಲಾಫತ್ ಖಾಮಿಸದಲ್ಲಿ ಬೈಅತ್ ಮಾಡಿದರು. ಇದರ ಮೇಲೆ, ಮಾನ್ಯ ಅಬ್ದುಲ್ ಖಾದಿರ್ ಸಾಹಿಬ್ ಅವರು ತಮ್ಮ ಮನೆಯ ಒಂದು ಭಾಗವನ್ನು ಮಸೀದಿ ಮತ್ತು ಮಿಷನ್ ಹೌಸ್ ಆಗಿ ಬಳಸಲು ಪ್ರಾರಂಭಿಸಿದರು, ಅಲ್ಲಿ ಶುಕ್ರವಾರದಂದು ಅಹ್ಮದಿ ಸ್ನೇಹಿತರು ಸೇರುತ್ತಿದ್ದರು ಮತ್ತು ತಿಂಗಳಿಗೊಮ್ಮೆ ಜಲ್ಸಾ ಕೂಡ ನಡೆಸುತ್ತಿದ್ದರು.

ನಂತರ MTA ಅಲ್-ಅರೇಬಿಯಾ ಮತ್ತು ಸ್ಥಳೀಯ ಅಹ್ಮದಿಗಳ ಸೌಹಾರ್ದ ತಬ್ಲೀಗ್‌ನ ಅಭಿಯಾನಗಳ ಮೂಲಕ ಪ್ರದೇಶದಲ್ಲಿ ಮತ್ತಷ್ಟು ಬೈಅತ್‌ಗಳು ಆದವು. ಇಲ್ಲಿ ಶಾಶ್ವತ ಕೇಂದ್ರವನ್ನು ನಿರ್ಮಿಸಲು ನಿರ್ಧರಿಸಲಾಯಿತು, ವೆಸ್ಟ್ ಬ್ಯಾಂಕ್ ಪ್ಯಾಲೆಸ್ಟೈನ್‌ನಲ್ಲಿ ಮಸೀದಿ ಮತ್ತು ಮಿಷನ್ ಸಿದ್ಧಪಡಿಸುವುದು ಇತರ ಅರಬ್ ಮುಸ್ಲಿಂ ರಾಷ್ಟ್ರಗಳಂತೆ ನಮ್ಮ ಸಮುದಾಯಕ್ಕೆ ಕಷ್ಟಕರವಾದ ಮತ್ತು ಅಸಾಧ್ಯವಾದ ಕೆಲಸವಾಗಿತ್ತು, ಆದರೆ ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸಿದನು. ಇದು ಖಂಡಿತವಾಗಿಯೂ ಮಸೀದಿ ಅಲ್ಲ, ಆದರೆ ಅಲ್ಲಾಹನು ಎರಡು ಅಂತಸ್ತಿನ ಕಟ್ಟಡವನ್ನು ನಿರ್ಮಿಸುವ ಅವಕಾಶವನ್ನು ನೀಡಿದ್ದಾನೆ. ಆದ್ದರಿಂದ ಏಪ್ರಿಲ್ 18, 2012 ರಂದು, ಸೈಯ್ಯದ್‌ನಾ ಹುಝೂರ್ ಅನ್ವರ್(ಅತಬಿಅ) ರವರು ಕಳುಹಿಸಿದ ಅನುಗ್ರಹದಾಯಕವಾದ ಕಲ್ಲಿನಿಂದ ಕಟ್ಟಡದ ಅಡಿಪಾಯವನ್ನು ಹಾಕಲಾಯಿತು ಮತ್ತು ಶೀಘ್ರದಲ್ಲೇ ಕೆಲಸ ಮಾಡಲಾಯಿತು. ಇದರ ಸುಮಾರು ವೆಚ್ಚವನ್ನು ಕಬಾಬೀರ್‌ನ ಲಜ್ನಾ ವಹಿಸಿದರು. **ಫಜಝಾ ಹುಮುಲ್ಲಾಹು ಖೈರಲ್ ಜಝಾ.**

ವೆಸ್ಟ್ ಬ್ಯಾಂಕ್ ಪ್ಯಾಲೆಸ್ತೀನ್‌ನ ಮಿಷನ್‌ಗೆ ಸೈಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಾಸಿಹ್ ಖಾಮಿಸ್(ಅತಬಿಅ) ಅವರು "ದಾರ್ ಅಲ್-ಅಮನ್" ಎಂಬ ಹೆಸರನ್ನು ಸಹಾನುಭೂತಿಯಿಂದ ನೀಡಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಈ ಕಟ್ಟಡ ಪ್ಯಾಲೆಸ್ತೀನ್‌ನ ಶಾಂತಿಯ ಕೇಂದ್ರವಾಗಿದೆ. ಜೀವನದ ವಿವಿಧ ಹಂತಗಳ ಪ್ಯಾಲೆಸ್ತೀನ್‌ನ ಜನರು ತಮ್ಮ ಎಲ್ಲಾ ಲೌಕಿಕ ವ್ಯವಹಾರಗಳನ್ನು ಬದಿಗಿಟ್ಟು ಶಾಂತಿ ಮತ್ತು ಸೌಹಾರ್ದತೆಯ ಮಾತುಗಳನ್ನು ಆಲಿಸಲು, ಕಲಿಯಲು ಮತ್ತು ಇತರರಿಗೆ ಕಲಿಸಲು ಮತ್ತೆ ಮತ್ತೆ ಈ ಕೇಂದ್ರದಲ್ಲಿ ಸೇರುತ್ತಾರೆ.

### ಅಲ್‌ಖಲೀಲ್‌ನಲ್ಲಿ ಜಮಾಅತ್

ಅಲ್ಲಾಹನ ಅನುಗ್ರಹದಿಂದ, 2019 ರಿಂದ ದಕ್ಷಿಣ ಪ್ಯಾಲೆಸ್ಟೈನ್‌ನ ಅಲ್‌ಕಲೀಲ್‌ನಲ್ಲಿ ಜಮಾಅತ್ ಅನ್ನು ಸ್ಥಾಪಿಸಲಾಗಿದೆ. ಹೀಗೆ ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್(ಅತಬಿಅ) ಹೇಳುತ್ತಾರೆ: ಕಬಾಬೀರ್‌ನ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ ಅಲ್ಲಾಹನ ಅನುಗ್ರಹದಿಂದ ದಕ್ಷಿಣ ಪ್ಯಾಲಸ್ತೈನ್‌ನ ನಗರದಲ್ಲಿ ಕೆಲವು ವರ್ಷಗಳ ಕಾಲದಿಂದ ಅಹ್ಮದೀಯರು ಇರುತ್ತಿದ್ದರು ಆದರೆ ಅಲ್ಲಿ ಯಾವುದೇ ಸಂಘಟಿತ ಜಮಾಅತ್ ಇರಲಿಲ್ಲ. ಅಲ್ಲಾಹನ ಅನುಗ್ರಹದಿಂದ, ಈ ವರ್ಷ ಇಲ್ಲಿ ನಿಯಮಿತವಾದ ಜಮಾಅತ್ ಅನ್ನು ಸ್ಥಾಪಿಸಲಾಗಿದೆ ಮತ್ತು ಹಝ್ರತ್ ಇಬ್ರಾಹಿಂ(ಅ) ಅವರ ಸ್ಥಳವಾದ ಅಲ್‌ಖಲೀಲ್ ಮತ್ತು ಇಲ್ಲಿ ಹಝ್ರತ್ ಇಬ್ರಾಹಿಂ(ಅ), ಹಝ್ರತ್ ಇಸ್ಹಾಕ್(ಅ), ಹಝ್ರತ್ ಯಾಖೂಬ್(ಅ) ಮತ್ತು ಅವರ ಧರ್ಮ ಪತ್ನಿಗಳ ಸಮಾಧಿಗಳು ಇವೆ. ಇದು ಒಂದು ಹಳೆಯ ಐತಿಹಾಸಿಕ ನಗರವಾಗಿದೆ. ಈ ನಗರದಲ್ಲಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಮ್ಮ 27 ಅಹ್ಮದಿಯರು ವಾಸಿಸುತ್ತಿದ್ದಾರೆ, ಸಾಮಾನ್ಯ ಜಮಾಅತ್ ಅನ್ನು ಸ್ಥಾಪಿಸಲಾಗಿದೆ ಮತ್ತು ಒಬ್ಬ ಅಹ್ಮದಿ ತನ್ನ ಮನೆಯ ಒಂದು ಭಾಗವನ್ನು ಮಸೀದಿಯಾಗಿ ನಮಾಝನ್ನು ನಿರ್ವಹಿಸಲು ಮೀಸಲಿಟ್ಟಿದ್ದಾರೆ. (ಖುತ್ಬ ಜುಮುಅ, ಆಗಸ್ಟ್ 7, 2020)

ವಿವಿಧ ಅಹ್ಮದೀಯರ ಮನೆಗಳಲ್ಲಿ, ಶುಕ್ರವಾರದ ಪ್ರಾರ್ಥನೆಗಳನ್ನು ಪರ್ಯಾಯವಾಗಿ ನಿರ್ವಹಿಸಲಾಗುತ್ತದೆ ಮತ್ತು ಜಲ್ಸಗಳನ್ನು ಸಹ ಆಯೋಜಿಸಲಾಗುತ್ತದೆ.

### ಮಸ್ರೂರ್ ಸೆಂಟರ್ ಕಬಾಬೀರ್

ಜಾಮಿ ಸೈಯದ್‌ನಾ ಮಹಮೂದ್ ಕಬಾಬೀರ್ ಅನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಅದರ ನಿರ್ಮಾಣ ಹಂತಗಳು ಕ್ರಮೇಣ ಮುಂದುವರೆಯಿತು. ಎರಡು ಎತ್ತರದ ಮಿನಾರ್‌ಗಳನ್ನು ಅಂತಿಮವಾಗಿ 1990 ರ ದಶಕದಲ್ಲಿ ಪೂರ್ಣಗೊಳಿಸಲಾಯಿತು. ಈಗ ಸುಮಾರು ಹದಿನೈದು ವರ್ಷಗಳ ನಂತರ ಅಲ್ಲಾಹನು ಕಬಾಬೀರ್‌ನ ಸದಸ್ಯರಿಗೆ ಹೊಸ ಕಟ್ಟಡ "ಮಸ್ರೂರ್ ಸೆಂಟರ್" ನಿರ್ಮಿಸುವ ಅವಕಾಶವನ್ನು ನೀಡಿದ್ದಾನೆ. ಇದೊಂದು ಎರಡು ಅಂತಸ್ತಿನ ಕಟ್ಟಡವಾಗಿದೆ. ಅದರ ಒಂದು ಭಾಗದಲ್ಲಿ ಎಂ.ಟಿ.ಎ ಸ್ಟುಡಿಯೋವನ್ನು ನಿರ್ಮಿಸಲಾಗಿದೆ ಜಮಾಅತ್ತಿಗೆ ಇದು ತುಂಬಾ ಅಗತ್ಯವಾಗಿತ್ತು. ಅಲ್ಲಾಹನ ಅನುಗ್ರಹದಿಂದ ಆಧುನಿಕ ಶೈಲಿಯಲ್ಲಿ ಅತ್ಯಂತ ಸುಂದರವಾದ ಸ್ಟುಡಿಯೋವನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದ ಭಾಗಗಳಲ್ಲಿ ಸಮ್ಮೇಳನ ಸಭಾಂಗಣ, ಸ್ವಾಗತ ಕೊಠಡಿ, ಕಚೇರಿಗಳು, ಸಭಾಭವನ ಮತ್ತು ಗ್ರಂಥಾಲಯ ಇತ್ಯಾದಿಗಳನ್ನು ನಿರ್ಮಿಸಲಾಗಿದೆ.

### ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಿಅ) ಅವರ ಭವಿಷ್ಯದ ಸುದ್ದಿಗಳು ಮತ್ತು ಅದರ ಆರಂಭಿಕ ನೋಟಗಳು

ಜೂನ್ 5, 2021 ರಂದು, ಹುಝೂರ್ ಅನ್ವರ್(ಅತಬಿಅ) ಅವರು ಕಬಾಬೀರ್ ಜಮಾಅತ್‌ನ ಜೊತೆಗಿನ ವರ್ಚುವಲ್ ಸಭೆಯಲ್ಲಿ ಹೀಗೆ ಹೇಳಿದರು: "ಅಲ್ಲಾಹನ ಅನುಗ್ರಹದಿಂದ, ಜಮಾಅತ್‌ನ ಪ್ರಗತಿ ಮತ್ತು ಜಮಾಅತ್ ಹರಡುತ್ತಿರುವ ರೀತಿಯಲ್ಲಿ, ಪ್ರತಿ ದೇಶದಲ್ಲಿ ಮತ್ತು ಪ್ರತಿ ದೇಶದ ಅನೇಕ ನಗರಗಳಲ್ಲಿ ಸಂಖ್ಯೆ ಹೆಚ್ಚುತ್ತಿದೆ ಮತ್ತು ಜಮಾಅತ್ ಅನ್ನು ಪರಿಚಯಿಸಲಾಗಿದೆ ಮತ್ತು ಪ್ರಪಂಚದ ದೊಡ್ಡ ದೊಡ್ಡ ಕಟ್ಟಡಗಳಲ್ಲಿ ಜಮಾಅತ್ ಅನ್ನು ಪರಿಚಯಿಸಲಾಗಿದೆ. ಆದ್ದರಿಂದ ಶೀಘ್ರದಲ್ಲೇ, ಇನ್‌ಶಾಅಲ್ಲಾಹ್, ಮುಂದಿನ 20 ರಿಂದ 25 ವರ್ಷಗಳು ಜಮಾಅತ್ ಅಭಿವೃದ್ಧಿಗೆ ಬಹಳ ಮುಖ್ಯವಾದ ವರ್ಷಗಳು ಎಂದು ನಾವು ಭಾವಿಸುತ್ತೇವೆ ಮತ್ತು ಬಹುಪಾಲು ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಧ್ವಜದ ಅಡಿಯಲ್ಲಿ ಬರುವುದನ್ನು ನೀವು ನೋಡುತ್ತೀರಿ. ಕನಿಷ್ಠ ಬಹುಪಾಲು ಮುಸ್ಲಿಮರು ಅಹ್ಮದೀಯತ್ ನಿಜವಾದ ಇಸ್ಲಾಮ್ ಆಗಿದೆ ಎಂದು ಒಪ್ಪಿಕೊಳ್ಳುವವರಾಗಿರುತ್ತಾರೆ."

ಹುಝೂರ್ ಅನ್ವರ್ (ಅತಬಿಅ) ಹೇಳಿದರು: "ಇನ್‌ಶಾಅಲ್ಲಾಹ್, ಮುಸ್ಲಿಂ ಉಮ್ಮಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಧ್ವಜದ ಅಡಿಯಲ್ಲಿ ಕಾಅ್‌ಬವನ್ನು ಪ್ರವೇಶಿಸುವ ದಿನ ಬರುತ್ತದೆ."

ಹುಝೂರ್ ಅನ್ವರ್(ಅತಬಿಅ) ರವರು ಕಬಾಬೀರ್ ಜಮಾಅತ್‌ನೊಂದಿಗೆ ನಡೆದ ಸಭೆಯಲ್ಲಿ ಈ ವಿಷಯಗಳನ್ನು ಹೇಳಿದರು. ಈ ಸಮಯದಲ್ಲಿ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಕಾಲಘಟ್ಟದ ಖಲೀಫರ ಧ್ವನಿಯು ಅರೇಬಿಯಾ ದ್ವೀಪದ ಮತ್ತು ಮಧ್ಯಪ್ರಾಚ್ಯದಲ್ಲಿ ಮಾಧ್ಯಮಗಳು ಮತ್ತು ಇತರ ವಿವಿಧ ಸಂವಹನ ವಿಧಾನಗಳ ಮೂಲಕ ಬಲವಾದ ರೀತಿಯಲ್ಲಿ ತಲುಪುತ್ತಿದೆ.

ಹ್ಯುಮಾನಿಟಿ ಫಸ್ಟ್ ಎಂಬ ಸಂಘಟನೆಯ ಮೂಲಕ ಮಧ್ಯಪ್ರಾಚ್ಯದಲ್ಲಿ ಜಮಾಅತ್‌ನ ಕಾರ್ಯವೂ ಉತ್ತಮವಾಗಿ ನಡೆಯುತ್ತಿದೆ. ಇತ್ತೀಚೆಗೆ ನಾವು ಪ್ಯಾಲೆಸ್ಟೈನ್ ಸರ್ಕಾರದ ಅನುಮೋದನೆಯೊಂದಿಗೆ ಪ್ಯಾಲೆಸ್ಟೈನ್‌ನ ರಾಮಲ್ಲಾಹ್ ನಗರದಲ್ಲಿ ಹ್ಯುಮಾನಿಟಿ ಫಸ್ಟ್‌ನ ಕಚೇರಿಯನ್ನು ತೆರೆಯಲು ಸಾಧ್ಯವಾಯಿತು.

### ಅಂತಿಮ ಮಾತು

ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್(ಅತಬಿಅ) ರವರ ಕ್ರಾಂತಿಕಾರಿ ಯುಗದಲ್ಲಿ, ಕಳೆದುಹೋದ ಸಾವಿರಾರು ಜನರು ಅರೇಬಿಯಾದಲ್ಲಿ ತಮ್ಮ ಮಾರ್ಗವನ್ನು ಕಂಡುಕೊಂಡರು ಮತ್ತು ಅಸಂಖ್ಯಾತ ಮಾರ್ಗದರ್ಶಕರು ನಿಧಾನವಾಗಿ ತಮ್ಮ ಉದ್ದೇಶಕ್ಕೆ ತಲುಪಿದರು. ನೂರಾರು ಅರಬ್ಬರು ವಸಿಯ್ಯತ್ ನಿಝಾಮ್‌ಗೆ ಸೇರಿದರು, ಅರಬ್ಬರಲ್ಲಿ ವಾಖಿಫೀನೆ ಝಿಂದಗಿ ಹಾಗೂ ಮುಬಲ್ಲಿಗರು ಸಿದ್ಧರಾದರು ಮತ್ತು ತಯಾರಾಗುತ್ತಿದ್ದಾರೆ. ತೆಹ್ರೀಕ್ ವಕ್ಫ್ ನೌಗೆ ಸೇರುವವರ ಸಂಖ್ಯೆಯೂ ಹೆಚ್ಚುತ್ತಲೇ ಇರುತ್ತಿದೆ.

ಈ ದೃಢಸಂಕಲ್ಪವುಳ್ಳ ಖಲೀಫರ ಹೃತ್ಪೂರ್ವಕ ಹಂಬಲ ಮತ್ತು ಹೃತ್ಪೂರ್ವಕ ಬಯಕೆಯನ್ನು ನೋಡಿದರೆ, ಪ್ರವಾದಿಗಳ ಕೊನೆಯ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅವರ ಧ್ವಜವು ಎಲ್ಲಾ ವಿಶ್ವದ ಧ್ವಜಗಳಿಗಿಂತ ಎತ್ತರದಲ್ಲಿ ಹಾರುವುದನ್ನು ನಾವು ನೋಡುವ ದಿನ ದೂರವಿಲ್ಲ ಎಂದು ನಮಗೆ ಖಚಿತವಾಗಿದೆ. ಆ ಸಮಯದಲ್ಲಿ, ಎಲ್ಲಾ ಅರಬ್ಬರು ಮತ್ತು ಮಧ್ಯಪ್ರಾಚ್ಯದ ನಿವಾಸಿಗಳು ಪವಿತ್ರ ಖುರ್‌ಆನ್‌ನ ಭಾಷೆಯಲ್ಲಿ ಅಧಿಕಾರವಿಲ್ಲದೆ **ವಖುಲ್ ಜಾಅಲ್ ಹಖ್ಖು ವಝಹಖ್ಖಲ್ ಬಾತಿಲ್ ಇನ್ನಲ್ ಬಾತಿಲ ಕಾನ ಝಹೂಖ** ಎಂದು ಮಾತನಾಡುತ್ತಾರೆ ಮತ್ತು **ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್ವಾಜ** ಎಂದು ಅವರು ಕಣ್ಣಾರೆ ನೋಡುತ್ತಾರೆ.

...*...*...*...

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ(ಸ).

***(ಸಿರಾಜೆ ಮುನೀರ್; ರೂಹಾನೀ ಖಝಾಇನ್ ಸಂಪುಟ 12, ಪುಟ 82)***

# ಆಫ್ರಿಕಾದಲ್ಲಿ ಅಹ್ಮದಿಯಾ ಜಮಾಅತ್‌ನ ಬೆಳವಣಿಗೆಗಳು

## ಬುರ್ಕಿನಾ ಫಾಸೊದಲ್ಲಿ ಅಹ್ಮದೀಯ ಜಮಾಅತ್ತಿನ ಬೆಳವಣಿಗೆಗಳು

(ಚೌಧರಿ ನಯೀಮ್ ಅಹ್ಮದ್ ಬಾಜ್ವಾ, ಪ್ರಾಂಶುಪಾಲ ಜಾಮಿಯತುಲ್ ಮುಬಶ್ಶಿರೀನ್ ಬುರ್ಕಿನಾ ಫಾಸೊ)

### ಬುರ್ಕಿನಾ ಫಾಸೊದಲ್ಲಿ ಅಹ್ಮದಿಯ್ಯತ್‌ನ ಪರಿಚಯ

1932 ರಲ್ಲಿ ಅಹ್ಮದಿಯಾಗಿದ್ದ ಘಾನಾದ ಉತ್ತರ ಪಟ್ಟಣವಾದ WA ಯಿಂದ ಪ್ರಾಮಾಣಿಕ ಅಹ್ಮದಿಯಾದ ಅಲ್ಹಾಜ್ ಸಲೇಹ್ ಸಾಹಿಬ್ ಅವರು 1950ರ ದಶಕದ ಆರಂಭಿಕ ವರ್ಷಗಳಲ್ಲಿ ಅಹಮದಿಯತ್ತಿನ ಸಂದೇಶವನ್ನು ಅಪರ್ವೋಲ್ಟಾಗೆ ತಲುಪಿತು. ಈ ಸಂದೇಶಕ್ಕೆ ಪ್ರತಿಕ್ರಿಯಿಸಿದ ಆರಂಭಿಕ ವಿಶ್ವಾಸಿಗಳು ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರಿಂದ ವಿರೋಧವನ್ನು ಎದುರಿಸಬೇಕಾಯಿತು.

ಜಮಾಅತ್ ಘಾನಾದ ಮಾಜಿ ಅಮೀರ್ ಮಾನ್ಯ ಅಬ್ದುಲ್ ವಹಾಬ್ ಬಿನ್ ಆಡಮ್ ಸಾಹಿಬ್ ಅವರ ಪ್ರಯತ್ನದಿಂದ ಜನವರಿ 2, 1986 ರಂದು ಬುರ್ಕಿನಾ ಫಾಸೊದಲ್ಲಿ ಜಮಾಅತ್ ಅನ್ನು ನೊಂದಾಯಿಸಲಾಯಿತು. ಅಷ್ಟರಲ್ಲಿ (ಮುಬಲ್ಲಿಗ್‌ಗಳು) ಬೋಧಕರು ಇಲ್ಲಿಗೆ ಭೇಟಿ ನೀಡುತ್ತಲೇ ಇದ್ದರು. ಬುರ್ಕಿನಾ ಫಾಸೋ ಜಮಾಅತ್‌ನ ಮೊದಲ ಅಮೀರ್ ಮಾನ್ಯ ಮುಹಮ್ಮದ್ ಇದ್ರೀಸ್ ಶಾಹಿದ್ ಸಾಹಿಬ್ ಅವರು ಜನವರಿ 1990 ರಲ್ಲಿ ಇಲ್ಲಿಗೆ ಆಗಮಿಸಿದರು.

### ಹೊಸ ಜಮಾತ್‌ನ ಆರಂಭಿಕ ಗುಣಲಕ್ಷಣಗಳು

1990 ರಿಂದ 2004 ರವರೆಗಿನ ವರ್ಷಗಳನ್ನು ಆರಂಭಿಕ ಗುಣಲಕ್ಷಣಗಳು ಹೊರಹೊಮ್ಮುವಿಕೆಯ ವರ್ಷಗಳು ಎಂದು ಕರೆಯಬಹುದು. ಈ ಸಮಯದಲ್ಲಿ, ಮಜ್ಲಿಸ್ ಶೂರಾ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು ಮತ್ತು ಜಲ್ಸಾ ಸಾಲಾನ ಪ್ರಾರಂಭವಾಯಿತು. ಹೀಗೆ ಉಪ-ಸಂಘಟನೆಗಳನ್ನು ಸ್ಥಾಪಿಸಲಾಯಿತು ಮತ್ತು ಜಮಾಅತ್ತಿನ ಸಂದೇಶವು ಬುರ್ಕಿನಾ ಫಾಸೊದ ಜನರಿಗೆ ತಲುಪಲು ಪ್ರಾರಂಬವಾಯಿತು.

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರ 2004 ರ ಭೇಟಿ:

1990 ರಲ್ಲಿ, ಬುರ್ಕಿನಾ ಫಾಸೊದ ಅಮೀರ್ ಮಾನ್ಯ ಮುಹಮ್ಮದ್ ಇದ್ರಿಸ್ ಸಾಹಿಬ್ ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ) ಅವರಿಗೆ ಒಂದು ಪತ್ರವನ್ನು ಕಳುಹಿಸಿದರು, ಅದರಲ್ಲಿ ಅವರು ಬುರ್ಕಿನಾ ಫಾಸೊದಿಂದ ಓರ್ವ ಅಹ್ಮದಿಯ ಒಂದು ಕನಸನ್ನು ಬರೆದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಮಾನ್ಯ ಅಮೀರ್ ಸಾಹಿಬ್ ಅವರಿಗೆ ಬರೆದ ಪತ್ರದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ) ರಿಂದ ಈ ಕೆಳಗಿನ ಉಪದೇಶವನ್ನು ಸ್ವೀಕರಿಸಲಾಯಿತು:

"ಕನಸ್ಸು ಅನುಗ್ರಹಿಸಲ್ಪಟ್ಟಿದೆ ಮತ್ತು ಇದರರ್ಥ ದೇಶದ ಮಣ್ಣು ಸತ್ಯವನ್ನು ಸ್ವೀಕರಿಸಲು ಫಲವತ್ತಾಗಿದೆ ಮತ್ತು ನನ್ನ ಭೇಟಿಯ ನಂತರ, ಇನ್‌ಶಾಅಲ್ಲಾಹ್, ಅದು ಸತ್ಯವನ್ನು ಸ್ವೀಕರಿಸಿ ಪ್ರಕಾಶಮಾನವಾಗುತ್ತದೆ. ಅಲ್ಲಾಹನು ಹಾಗೆಯೇ ಮಾಡಲಿ." (ಪತ್ರ ಮಾನ್ಯ ಅಡೀಶ್ನಲ್ ವಕೀಲುತ್ತಬ್‌ಶೀರ್ ಸಾಹಿಬ್ ಲಂಡನ್, T.3360, 19 Jun 1990)

ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರ) ಅವರು ಬುರ್ಕಿನಾ ಫಾಸೋಗೆ ಭೇಟಿ ನೀಡಲು ಸಾಧ್ಯವಾಗದಿರಬಹುದು, ಆದರೆ ಸರ್ವಶಕ್ತನಾದ ಅಲ್ಲಾಹ ವಿಧಿಯಡಿಯಲ್ಲಿ, ಅವರ ಉತ್ತರಾಧಿಕಾರಿ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಐದನೇ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್(ಅತಬಿಅ) ರವರು ಬುರ್ಕಿನಾ ಫಾಸೋವಿನ ಭೂಮಿಗೆ ಪಾದಾರ್ಪಣೆಯ ಗೌರವವನ್ನು ನೀಡಿದರು. ಈ ಐತಿಹಾಸಿಕ ಮತ್ತು ಮಂಗಳಕರ ಭೇಟಿಯ ನಂತರ, ಬುರ್ಕಿನಾ ಫಾಸೊದ ಮಣ್ಣು ಮಾರ್ಗದರ್ಶನದ ಪ್ರಕಾಶದಿಂದ ಹೊಳೆಯಿತು ಮತ್ತು ಅಹ್ಮದಿಯ್ಯತ್‌ನ ಈ ಕಾರವಾನವು ವೇಗವಾಗಿ ಪ್ರಗತಿ ಹೊಂದಲು ಪ್ರಾರಂಭಿಸಿತು.

ಮಾರ್ಚ್ 25, 2004 ಈ ದೇಶದ ಇತಿಹಾಸದಲ್ಲಿ ಸ್ಮರಣೀಯ ದಿನವಾಗಿತ್ತು, ಖಲೀಫತುಲ್ ಮಸೀಹ್ ಅವರ ಅನುಗ್ರಹದಾಯಕ ಪಾದಗಳು ಮೊದಲ ಬಾರಿಗೆ ಈ ಭೂಮಿಗೆ ಬಂದಿವೆ. ಅವರ ಭೇಟಿಯು ಏಪ್ರಿಲ್ 4 ರವರೆಗೆ ಮುಂದುವರೆಯಿತು. ಈ ಅನುಗ್ರಹದಾಯಕ ದಿನಗಳಲ್ಲಿ, ಹುಝೂರ್ ಅನ್ವರ್(ಅತಬಿಅ) ಅವರು ಜಮಾಅತ್‌ಗಳಿಗೆ ಭೇಟಿ ನೀಡಿದರು, ಶಂಕುಸ್ಥಾಪನೆಗಳು ಮತ್ತು ಉದ್ಘಾಟನಾ ಸಮಾರಂಭಗಳು ನಡೆದವು. ಪ್ರಮುಖ ಅಧಿಕೃತ ಮತ್ತು ಅನಧಿಕೃತ ಸಭೆಗಳನ್ನು ನಡೆಸಿದರು. ಜಲ್ಸ ಸಾಲಾನ ಬುರ್ಕಿನಾ ಫಾಸೊದಲ್ಲಿ ಸಭಿಕರನ್ನು ಉದ್ದೇಶಿಸಿ ಉಪನ್ಯಾಸವನ್ನು ನೀಡಿದರು. ರಾಷ್ಟ್ರೀಯ ಕಾರ್ಯಕಾರಿ ಸಮಿತಿ, ಅಂಗಸಂಸ್ಥೆಗಳ ಕಾರ್ಯಕಾರಿ ಸಮಿತಿಗಳು ಮತ್ತು ಮುಬಲ್ಲಿಗರೊಂದಿಗೆ ಸಭೆಗಳನ್ನು ನಡೆಸಿದರು. ಅತ್‌ಫಾಲ್‌ಗಳು ಹಾಗೂ ನಾಸಿರಾತ್‌ಗಳು ನೇರವಾಗಿ ತರಗತಿಯಲ್ಲಿ ಭಾಗಿಯಾಗಿ ತಮ್ಮ ಪ್ರೀತಿಯ ಇಮಾಮರಿಂದ ಅನುಗ್ರಹವನ್ನು ಪಡೆದರು. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ, ಈ ದೂರದ ದೇಶದ ಅಹ್ಮದಿಯರು ತಮ್ಮ ಪ್ರೀತಿಯ ಇಮಾಮ್ ಅನ್ನು ಭೇಟಿ ಮಾಡುವ ಮೂಲಕ ಆಧ್ಯಾತ್ಮಿಕ ಉಲ್ಲಾಸವನ್ನು ಪಡೆದರು. ಭೇಟಿಯ ಸಂಕ್ಷಿಪ್ತ ಅವಲೋಕನ ಇಲ್ಲಿದೆ:

ಮಾರ್ಚ್ 26, 2004 ರಂದು, ಹಝ್ರತ್ ಖಲೀಫತುಲ್ ಮಸೀಹ್(ಅತಬಿಅ) ಅವರು ಬುರ್ಕಿನಾ ಫಾಸೊದ ಪ್ರಧಾನ ಮಂತ್ರಿ ಪರಮಾಂಗ ಅರ್ನೆಸ್ಟ್ ಯೋನ್ಲಿಗೆ ಸಭೆಯ ಗೌರವವನ್ನು ನೀಡಿದರು. ಹುಝೂರ್ ಅನ್ವರ್(ಅತಬಿಅ) ಅವರು ನಾನು ಬುರ್ಕಿನಾ ಫಾಸೋವಿನ ಜನರ ಸೌಹಾರ್ದತೆ ಮತ್ತು ಆತಿಥ್ಯದ ಮನೋಭಾವದಿಂದ ಬಹಳವಾಗಿ ಪ್ರಭಾವಿತನಾಗಿದ್ದೇನೆ ಎಂದು ಹೇಳಿದರು.

ಅದೇ ದಿನ, ಮಾರ್ಚ್ 26, 2004 ರಂದು, ಬುರ್ಕಿನಾ ಫಾಸೊ ಅಧ್ಯಕ್ಷರು (ಅವರ Exc. ಬ್ಲೇಸ್ ಕಂಪೋರ್ ಅವರನ್ನು ಭೇಟಿಯಾದರು. ಹುಝೂರ್ ಅನ್ವರ್(ಅತಬಿಅ) ರಾಷ್ಟ್ರಪತಿಗಳ ಕಚೇರಿಗೆ ಭೇಟಿ ನೀಡಿದಾಗ ಅಧ್ಯಕ್ಷರು ಹುಝೂರ್ ಅನ್ವರ್(ಅತಬಿಅ) ಅವರನ್ನು ಸ್ವಾಗತಿಸಲು ಕಾಯುತ್ತಿದ್ದರು. ಹುಝೂರ್ ಅನ್ವರ್(ಅತಬಿಅ) ಅವರು ಅಧ್ಯಕ್ಷರನ್ನು ಭೇಟಿಯಾಗಿ ಧನ್ಯವಾದವನ್ನು ಅರ್ಪಿಸಿದರು ಮತ್ತು ಬುರ್ಕಿನಾ ಫಾಸೋ ಜನರ ನೈತಿಕತೆಯಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ ಎಂದು ಹೇಳಿದರು. ಅಧ್ಯಕ್ಷರಿಗೆ ಸಲಹೆ ನೀಡಿದ ಅವರು, "ನೀವು ಕಠಿಣ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ, ಶೀಘ್ರದಲ್ಲೇ ನೀವು ಆಫ್ರಿಕಾದ ಪ್ರಮುಖ ರಾಷ್ಟ್ರಗಳಲ್ಲಿ ಸೇರುತ್ತೀರಿ."

### ಜಲ್ಸ ಸಭಾಂಗಣಕ್ಕೆ ಆಗಮನ

### ಬುರ್ಕಿನಾ ಫಾಸೊದಿಂದ ಶುಕ್ರವಾರದ ಮೊದಲ ಲೈವ್ ಖುತ್ಬ

ಮಾರ್ಚ್ 26, 2004 ಬುರ್ಕಿನಾ ಫಾಸೊದಿಂದ ಮೊದಲ ಬಾರಿಗೆ MTA ದಲ್ಲಿ ಖಲೀಫರ ಶುಕ್ರವಾರದ (ಖುತ್ಬವನ್ನು) ಧರ್ಮೋಪದೇಶವನ್ನು ನೇರ ಪ್ರಸಾರ ಮಾಡಿದ ಐತಿಹಾಸಿಕ ದಿನವಾಗಿದೆ. ಟೆಲಿಫೋನ್ ಲೈನ್ ಮೂಲಕ ಧರ್ಮೋಪದೇಶವನ್ನು ಪ್ರಸಾರ ಮಾಡಲಾಯಿತು. ರೇಡಿಯೋ ಇಸ್ಲಾಮಿಕ್ ಅಹ್ಮದಿಯಾ ಬೋಬೋಜಲಾಸುನಿಂದ ಈ ಖುತುಬವನ್ನು ಲೈವ್ ಆಗಿ ಕೇಳಲಾಯಿತು. ವಾಗಡೌ ಗೋ ಮಿಷನ್‌ನಲ್ಲಿ ಸಿದ್ಧಗೊಂಡ ಸಭಾಂಗಣದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರು ಈ ಖುತುಬವನ್ನು ನೀಡಿದರು. ಆ ಸಮಯದಲ್ಲಿ ಹದಿಮೂರು ಸಾವಿರಕ್ಕೂ ಹೆಚ್ಚು ಜನರು ಸಭಾಂಗಣದಲ್ಲಿ ಸೇರಿದ್ದರು.

ಮಾರ್ಚ್ 27 ರಂದು ಹುಝೂರ್ ಅನ್ವರ್(ಅತಬಿಅ) ಜಲ್ಸದ ಸಮಾರೋಪ ಭಾಷಣ ಮಾಡಿದ ನಂತರ ದುಆ ಮಾಡಿಸಿದರು. ಜಲ್ಸ ಸಾಲಾನದಲ್ಲಿ ದೇಶದ 425 ಜಮಾಅತ್‌ಗಳ 13,755 ಜನರು ಭಾಗವಹಿಸಿದ್ದರು. ಇದಲ್ಲದೇ ನೈಜೀರಿಯಾ, ಐವರಿ ಕೋಸ್ಟ್ ಮತ್ತು ಘಾನಾ ದೇಶದವರೂ ಸೇರಿಕೊಂಡರು.

ಮಾರ್ಚ್ 28 ರಂದು, ಸೆಂಟ್ರಲ್ ಮಿಷನ್ ಹೌಸ್‌ನ ಬೈತುಲ್ ಮಹದಿ ಮಸೀದಿಯಲ್ಲಿ ಫಜ್ರ್ ನಮಾಝನ್ನು ಅನುಷ್ಠಿಸುವ ಮುಖಾಂತರ ಮಸೀದಿಯನ್ನು ಉದ್ಘಾಟಿಸಲಾಯಿತು. ಮಾರ್ಚ್ 30, 2004 ರಂದು, ಡೋರಿಯಲ್ಲಿ ಮೊದಲ ಅಹ್ಮದಿಯಾ ಪ್ರಾಥಮಿಕ ಶಾಲೆಯ ಶಿಲಾನ್ಯಾಸವನ್ನು ಮಾಡಲಾಯಿತು. ಹುಝೂರ್(ಅತಬಿಅ) ಅವರು ಮಾರ್ಚ್ 31, 2004 ರಂದು ಕಯಾದಲ್ಲಿ ಹುದಾ ಮಸೀದಿಯನ್ನು ಉದ್ಘಾಟಿಸಿದರು ಮತ್ತು ಮಿಷನ್ ಹೌಸ್‌ನ ಶಂಕುಸ್ಥಾಪನೆ ಮಾಡಿದರು.

ಏಪ್ರಿಲ್ 3, 2004 ರಂದು, ಆರೋಗ್ಯ ಸಚಿವರು ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಮಿಷನ್ ಹೌಸ್‌ನಲ್ಲಿ ಗೌರವಯುತ ಸಭೆ ನಡೆಸಲು ಬಂದರು. ಸಭೆಯ ನಂತರ ಹುಝೂರ್ ಅನ್ವರ್(ಅತಬಿಅ) ಅವರು ವಾಗಡು ಅಹ್ಮದಿಯಾ ಆಸ್ಪತ್ರೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ಅವರೊಂದಿಗೆ ಸಚಿವರು ಆಸ್ಪತ್ರೆಯ ಅಂಗಳದಲ್ಲಿ ಮಾವಿನ ಗಿಡವನ್ನು ನೆಟ್ಟರು.

### ಭೇಟಿಯು ಭವ್ಯವಾದ ಫಲಿತಾಂಶಗಳನ್ನು ತೋರಿಸುತ್ತದೆ

ಈ ಐತಿಹಾಸಿಕ ಭೇಟಿಯ ನಂತರ, ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಅವರು ಜಮಾಅತ್ ಬುರ್ಕಿನಾ ಫಾಸೊದ ಅಮೀರ್

ಸಾಹಿಬ್ ಅವರಿಗೆ ಪತ್ರ ಬರೆದರು:

"ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಬುರ್ಕಿನಾ ಫಾಸೊ ಭೇಟಿಯು ಅಸಾಮಾನ್ಯ ಮತ್ತು ಸಂತೋಷದಾಯಕವಾಗಿತ್ತು. ಅಲ್ಹಮ್ದುಲಿಲ್ಲಾಹ್ ಅಲಾ ಝಾಲಿಕ್... ಜಮಾತ್‌ನ ಎಲ್ಲಾ ಸದಸ್ಯರು, ಪುರುಷರು, ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಪ್ರಾಮಾಣಿಕತೆ ಮತ್ತು ಭಕ್ತಿಯನ್ನು ತೋರಿಸಿದ್ದಾರೆ..... ಬುರ್ಕಿನಾ ಫಾಸೋ ನಾಡಿನಲ್ಲಿ ಬಿತ್ತಿದ ಅಹ್ಮದಿಯಾ ಬೀಜವು ಶೀಘ್ರದಲ್ಲೇ ಶಾಶ್ವತ ಫಲವನ್ನು ನೀಡುತ್ತದೆ ಎಂದು ನನಗೆ ಸಂಪೂರ್ಣ ವಿಶ್ವಾಸವಿದೆ. ಬುರ್ಕಿನಾ ಫಾಸೊದ ಜನರು ನಿಜವಾಗಿಯೂ ಮಹಾನ್ ವ್ಯಕ್ತಿಗಳು ಮತ್ತು ನಾನು ಸಂತೋಷವಾಗಿದ್ದೇನೆ ಆ ಅಲ್ಲಾಹನು ಅಹ್ಮದಿಯಾರ ಪ್ರಕಾಶದಿಂದ ಅವರನ್ನು ಬೆಳಗಿಸಿದನು. ಬುರ್ಕಿನಾ ಫಾಸೊದ ಜನರಲ್ಲಿ ನಾನು ಕಂಡ ಜಾಗೃತಿ ಅದ್ಭುತವಾಗಿದೆ. ಇನ್ನೆರಡು ಮೂರು ವರ್ಷಗಳಲ್ಲಿ ಈ ಭೇಟಿಯು ಮಹತ್ತರವಾದ ಫಲಿತಾಂಶಗಳು ತೋರಿ ಜಮಾಅತ್ ಶೀಘ್ರವಾಗಿ ಬೆಳೆಯಲಿ ಎಂದು ಆಶಿಸಲಾಗಿದೆ. ಇನ್‌ಶಾಅಲ್ಲಾಹ್." (T.9653/1.5.2004)

ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಅವರ ಅನುಗ್ರಹದಾಯಕ ಭೇಟಿಯ ನಂತರ, ಅಹ್ಮದಿಯಾ ಬುರ್ಕಿನಾ ಫಾಸೊ ಅಭಿವೃದ್ಧಿಯ ಹೊಸ ಯುಗವನ್ನು ಪ್ರವೇಶಿಸಿತು. ಈ ಸಂದರ್ಭದಲ್ಲಿ, ಬುರ್ಕಿನಾ ಫಾಸೊದಲ್ಲಿನ ಅಹ್ಮದೀಯ ಸಮುದಾಯದ ಅನುಗ್ರಹವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ. ಈ ಎಲ್ಲಾ ಅನುಗ್ರಹಗಳು ಖಿಲಾಫತೆ ಅಹ್ಮದಿಯಾದ ಸಹಾನುಭೂತಿ, ಮಾರ್ಗದರ್ಶನ ಹಾಗೂ ದುಆವಿನ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳಿಂದ ಈ ದೂರದ ಮರುಭೂಮಿಯ ಸ್ಥಿತಿಯನ್ನು ಬದಲಾಯಿಸಿದೆ. ಈ ನೆಲದಲ್ಲಿ, ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಭಕ್ತರು ಮತ್ತು ಅಲ್ಲಾಹನನ್ನು ಮಾತ್ರ ಆರಾಧಿಸುವ ಹಕ್ಕನ್ನು ಹೊಂದಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರೇಮಿಗಳು ಹುಟ್ಟುತ್ತಿದ್ದಾರೆ. ಈ ಭಕ್ತರು ಪ್ರತಿಯೊಂದು ಬಲಿದಾನಗಳನ್ನು ನೀಡಲು ಸಿದ್ಧರಿದ್ದಾರೆ ಮತ್ತು ದಿನನಿತ್ಯ ನಿಷ್ಠೆಯಲ್ಲಿ ವೃದ್ಧಿಸುತ್ತಿದ್ದಾರೆ.

**ಮಸೀದಿಗಳು, ಮಿಷನ್ ಹೌಸ್‌ಗಳ ನಿರ್ಮಾಣ ಮತ್ತು ಜಮಾಅತ್‌ಗಳ ಸಂಖ್ಯೆ**

ಬುರ್ಕಿನಾ ಫಾಸೊದಲ್ಲಿ ಪ್ರತಿ ವರ್ಷ ಮಸೀದಿಗಳು ಮತ್ತು ಮಿಷನ್ ಹೌಸ್‌ಗಳ ನಿರ್ಮಾಣ ಮುಂದುವರಿಯುತ್ತದೆ. 2004ರ ನಂತರ ಈ ಕಾರ್ಯಗಳಲ್ಲಿ ಅಸಮಾನ್ಯ ತೀಕ್ಷತೆ ಬಂದಿದೆ. ಸದ್ಯ ಎಲ್ಲ ಕ್ಷೇತ್ರಗಳಲ್ಲೂ ಜಮಾಅತ್‌ಗಳಿವೆ. 2022 ರ ವೇಳೆಗೆ, ಬುರ್ಕಿನಾ ಫಾಸೊದಲ್ಲಿ ಒಟ್ಟು 493 ಮಸೀದಿಗಳಿದ್ದು, 132 ಮಿಷನ್ ಹೌಸ್‌ಗಳನ್ನು ನಿರ್ಮಿಸಲಾಗಿದೆ, ಆದರೆ 132 ಮಿಷನ್ ಹೌಸ್‌ಗಳು ಪೂರ್ಣಗೊಂಡಿವೆ. ಬುರ್ಕಿನಾ ಫಾಸೊದಲ್ಲಿ 741 ಜಮಾಅತ್‌ಗಳನ್ನು ಸ್ಥಾಪಿಸಲಾಗಿದೆ.

**ಬುಸ್ತಾನ್ ಮೆಹದಿ**

ಜಮಾಅತ್ ಅಹ್ಮದಿಯಾ ಬಿರ್ಕಿನಾಫಾಸೊ ಮೇಲೆ ಸರ್ವಶಕ್ತನಾದ ಅಲ್ಲಾಹನ ಹಲವಾರು ಅನುಗ್ರಹಗಳಲ್ಲಿ ಒಂದು "ಬುಸ್ತಾನ್ ಮಹದಿ"ಯ ರೂಪದಲ್ಲಿದೆ. ಬುಸ್ತಾನ್ ಮಹದಿ ಔಗಾಡೌಗೌ ನಗರದಲ್ಲಿ 37.5 ಎಕರೆ ಸಮುದಾಯದ ಮಾಲೀಕತ್ವದ ಭೂಮಿಯಾಗಿದ್ದು, ಔಗಾಡೌಗೌದಿಂದ ಘಾನಾಕ್ಕೆ ಹೆದ್ದಾರಿಯಲ್ಲಿದೆ.

ಈ ಮಾರ್ಗದ ಮೂಲಕ ಸಯ್ಯದ್‌ನಾ ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಅವರು ಘಾನಾದಿಂದ ಬುರ್ಕಿನಾ ಫಾಸೊಗೆ ಬಂದರು, ರಾಷ್ಟ್ರೀಯ ಹೆದ್ದಾರಿಯಲ್ಲಿ, ಬುಸ್ತಾನ್ ಮಹದಿಯ ಸುಂದರವಾದ ಬೋರ್ಡ್ ಅನ್ನು ಪ್ರದರ್ಶಿಸಲಾಗಿದೆ, ಇದು ಪ್ರತಿ ದಾರಿಹೋಕರಿಗೆ ವಾಗ್ದಾತ್ತ ಮಹದಿಯ ಜಮಾಅತ್‌ನ ಸ್ಥಾಪನೆ ಮತ್ತು ಅಭಿವೃದ್ಧಿಯ ಮೈಲಿಗಲ್ಲನ್ನು ತಿಳಿಸುತ್ತದೆ. ಜಾಮಿಯತುಲ್ ಮುಬಶ್ಶಿರೀನ್ ಬುಸ್ತಾನ್ ಮಹದಿಯಲ್ಲಿದೆ. ಒಂದು ಸಣ್ಣ ಸ್ವಚ್ಛ ಮಸೀದಿಯಿದ್ದು, ಅದರ ಮಿನಾರ್‌ಗಳು ರಸ್ತೆಯಿಂದ ಗೋಚರಿಸುತ್ತವೆ. ಇತರ ನಿರ್ಮಾಣಗಳಲ್ಲಿ ಮಸ್ರೂರ್ ಕಣ್ಣಿನ ಆಸ್ಪತ್ರೆ, ನಿವಾಸ ಗೃಹಗಳು, ಅತಿಥಿ ಗೃಹ ಮತ್ತು ಕಾಲೇಜ್ ಆಫ್ ಹ್ಯುಮಾನಿಟಿ ಫಸ್ಟ್ ಸೇರಿವೆ. ಅಹ್ಮದಿಯಾ ಬುರ್ಕಿನಾ ಫಾಸೊನ ಜಲ್ಸದ ಸಭಾಂಘಣವು ಸಹ ಇಲ್ಲಿ ನೆಲೆಗೊಂಡಿದೆ.

**ಜಲ್ಸಾ ಸಾಲಾನ**

ಬುರ್ಕಿನಾ ಫಾಸೊದಲ್ಲಿ, ಜಲ್ಸ ಸಾಲಾನದ ವ್ಯವಸ್ಥೆಯನ್ನು ದೃಢವಾಗಿ ಸ್ಥಾಪಿಸಲಾಗಿದೆ ಮತ್ತು 1990 ರಲ್ಲಿ ಮೊದಲ ಜಲ್ಸ ಸಾಲಾನದಿಂದ, ಜಲ್ಸವು ಪ್ರತಿ ವರ್ಷ ಪ್ರಗತಿಯಲ್ಲಿದೆ. ಕೆಲವು ವರ್ಷಗಳನ್ನು ಹೊರತುಪಡಿಸಿ, ಪ್ರತಿ ವರ್ಷವೂ ಜಲ್ಸಾವನ್ನು ನಿಯಮಿತವಾಗಿ ನಡೆಸಲಾಗುತ್ತಿದೆ. 2016 ರಿಂದ, ಬುಸ್ತಾನ್ ಮೆಹದಿಯಲ್ಲಿ ಸಭಾ ಭವನವನ್ನು ನಿರ್ಮಿಸಲಾಗಿದೆ. ಅತಿಥಿಗಳ ಅನುಕೂಲಕ್ಕಾಗಿ ಪ್ರಬುದ್ಧ ವೇದಿಕೆ, ಜಲ್ಸಾದ ಸ್ಟೂಡ್‌ಯೋಗಳು ಮತ್ತು ಅತಿಥಿಗಳ ಅನುಕೂಲಕ್ಕೆ ಶಾಶ್ವತ ಸ್ನಾನಗೃಹಗಳನ್ನು ನಿರ್ಮಿಸಲಾಗಿದೆ. 2022 ರಲ್ಲಿ ಮೂವತ್ತನೇ ಜಲ್ಸಾವನ್ನು ನಡೆಸಲಾಯಿತು, ಇದರಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಪ್ರೇಮಿಗಳು ಭಾಗವಹಿಸಿದ್ದರು. ಪ್ರತೀ ವರ್ಷವು ಬುರ್ಕಿನಾ ಫಾಸೊವಿನ ಜಲ್ಸಾ ಸಾಲಾನದಲ್ಲಿ ಅತಿಥಿಗಳು ಬಂದು ಸೇರುತ್ತಾರೆ. 2022 ರ ಮುಖ್ಯ ಅತಿಥಿ ಮಾನ್ಯ ಮುಹಮ್ಮದ್ ಶರೀಫ್ ಔದಾ ಸಾಹಿಬ್ ಆಗಿದ್ದರು.

**ಮಜ್ಲಿಸ್ ಶೂರಾ**

ಮಜ್ಲಿಸ್ ಶೂರಾ ವ್ಯವಸ್ಥೆಯು ಮೂಲಭೂತ ವ್ಯವಸ್ಥೆಯಾಗಿದೆ. ಮಜ್ಲಿಸ್ ಶೂರಾ 1990 ರಲ್ಲಿ ಬುರ್ಕಿನಾ ಫಾಸೊದಲ್ಲಿ ಮೊದಲ ಜಲ್ಸಾ ಸಾಲಾನದೊಂದಿಗೆ ಪ್ರಾರಂಭವಾಯಿತು. ಈ ವ್ಯವಸ್ಥೆಯು ಪ್ರತಿ ವರ್ಷವೂ ಸುಧಾರಿಸುತ್ತಿದೆ. ಜೂನ್ 2022 ರಲ್ಲಿ, ಬುರ್ಕಿನಾ ಫಾಸೊದ 32ನೇ ಮಜ್ಲಿಸ್ ಶೂರಾವು ಸೆಂಟ್ರಲ್ ಹೌಸ್ ಸುಮಗಂಡೆಯಲ್ಲಿರುವ ಮಸ್ಜಿದ್ ಬೈತುಲ್ ಮಹದಿಯಲ್ಲಿ ಅದರ ಸುಂದರ ಸಂಪ್ರದಾಯಗಳೊಂದಿಗೆ ನಡೆಯಿತು.

**ಜಾಗತೀಕ ಅಹ್ಮದೀಯ ಜಮಾಅತ್ತಿನ ಮೊದಲ ರೇಡಿಯೋ ಕೇಂದ್ರ**

ಅಲ್ಹಮ್ದುಲಿಲ್ಲಾಹ್, ಡಿಸೆಂಬರ್ 2002 ರಿಂದ, ಜಾಗತೀಕ ಅಹ್ಮದಿಯಾ ಜಮಾಅತ್ತಿನ ಮೊದಲ ರೇಡಿಯೋ ಸ್ಟೇಷನ್ ಬುರ್ಕಿನಾ ಫಾಸೊದ ಬೊಬೋ ಜಲಾಸ್ಸೊದಲ್ಲಿ ಪ್ರಾರಂಭವಾಯಿತು. ಮತ್ತು ಇಂದಿನವರೆಗೂ, ಖಿಲಾಫತ್ ಅಹ್ಮದಿಯಾದ ಧ್ವನಿಯಾಗುವ ಮೂಲಕ ಇಸ್ಲಾಂ ಸೇವೆಯಲ್ಲಿ ತೊಡಗಿಸಿಕೊಂಡಿದೆ. 2004ರಲ್ಲಿ, ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ರವರು ಇಲ್ಲಿಗೆ ಭೇಟಿ ನೀಡಿದಾಗ, ಅವರು ರೇಡಿಯೊ ಅಹ್ಮದಿಯಾವನ್ನು ಸಹ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಹುಝೂರ್ ಅನ್ವರ್(ಅತಬಿಅ) ರವರು ನೇರ ಪ್ರಸಾರವಾದ ಈ ಕೆಳಗಿನ ಸಂದೇಶವನ್ನು ನೀಡಿದರು.

ರೇಡಿಯೋ ಇಸ್ಲಾಮಿಕ್ ಅಹ್ಮದಿಯಾ ಕೇಳುಗರಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹ್. ಅಲ್ಲಾಹನು ನಿಮ್ಮೆಲ್ಲರನ್ನು ಸಂರಕ್ಷಿಸಲಿ.(ಅಲ್–ಫಝುಲ್ ಇಂಟರ್‌ನ್ಯಾಶನಲ್, ಏಪ್ರಿಲ್ 16, 2004)

ನಂತರ, ಬುರ್ಕಿನಾ ಫಾಸೊದಲ್ಲಿ ಹೆಚ್ಚಿನ ರೇಡಿಯೊ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ರೇಡಿಯೋಗಳ ಹೆಸರಿಗೆ ಸಂಬಂಧಿಸಿದಂತೆ ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರು "ರೇಡಿಯೋ ಇಸ್ಲಾಮಿಕ್ ಅಹ್ಮದಿಯಾ" ಎಂದು ಎಲ್ಲೆಡೆ ಹೆಸರಿಸಬೇಕು" ಎಂದು ಹೇಳಿದರು. ( T.10353, ದಿನಾಂಕ ಜುಲೈ 7, 2007)

ಪ್ರಸ್ತುತ, ಇಲ್ಲಿ ನಾಲ್ಕು ಇಸ್ಲಾಮಿಕ್ ಅಹ್ಮದಿಯಾ ರೇಡಿಯೋಗಳು ಕಾರ್ಯನಿರ್ವಹಿಸುತ್ತಿವೆ. ಈ ರೇಡಿಯೋಗಳು ಡೋರಿ, ಲೆವ್, ಡೋಗೊ ಮತ್ತು ಬೋಬೋ ಜಲಸೊದಲ್ಲಿ ನೆಲೆಗೊಂಡಿವೆ. ಆದರೆ ಜಮಾಅತ್‌ನ ಸಂದೇಶವು ವಿವಿಧ ಭಾಷೆಗಳಲ್ಲಿ 33 ವಿವಿಧ ಖಾಸಗಿ ರೇಡಿಯೊಗಳಲ್ಲಿ ಹಗಲು ರಾತ್ರಿ ಪ್ರಸಾರವಾಗುತ್ತಿದೆ. ಅಹ್ಮದಿಯಾ ರೇಡಿಯೊಗಳು ಸಹ ಗೌರವವನ್ನು ಹೊಂದಿವೆ ಬುರ್ಕಿನಾ ಫಾಸೊದಲ್ಲಿ ಪ್ರತಿ ವರ್ಷ ಜಲ್ಸಾ ಸಂದರ್ಭದಲ್ಲಿ ರೇಡಿಯೋ ಜಲ್ಸಾವನ್ನು ಸ್ಥಾಪಿಸಲಾಗುತ್ತದೆ, ಅದರ ಮೂಲಕ ಎಲ್ಲಾ ಅಹ್ಮದಿಯಾ ರೇಡಿಯೋಗಳನ್ನು ಸಂಪರ್ಕಿಸಲಾಗುತ್ತದೆ ಮತ್ತು ಜಲ್ಸಾದ ಎಲ್ಲಾ ಕಾರ್ಯಕ್ರಮಗಳನ್ನು ದೇಶಾದ್ಯಂತ ನೇರ ಪ್ರಸಾರ ಮಾಡಲಾಗುತ್ತದೆ.

**ಆರೋಗ್ಯ ಕ್ಷೇತ್ರದಲ್ಲಿ ಸೇವೆಗಳು (ಅಹ್ಮದಿಯಾ ಆಸ್ಪತ್ರೆ ವಾಗದೋಗೋ)**

1997ರಲ್ಲಿ ಬಾಡಿಗೆ ಮನೆಯಲ್ಲಿ ಸದ್ಭಾವನೆ ಹಾಗೂ ಸೇವಾ ಮನೋಭಾವನೆಯಿಂದ ಆರಂಭವಾದ ಸಫರಾಬ್ ಆಸ್ಪತ್ರೆ ನಮ್ಮ ಮುಂದಿದೆ. ಅಲ್ಲಾಹನ ಅನುಗ್ರಹದಿಂದ 2004ರಿಂದ ಈ ಆಸ್ಪತ್ರೆ ಜಮಾಅತ್‌ನ ಸೈಟ್‌ನಲ್ಲಿ ಮತ್ತು ಕೇಂದ್ರ ಮಿಷನ್ ಹೌಸ್‌ನಲ್ಲಿ ಇದೆ. 2004 ರಲ್ಲಿ ಬುರ್ಕಿನಾ ಫಾಸೊಗೆ ಭೇಟಿ ನೀಡಿದಾಗ, ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರು ಅಹ್ಮದಿಯಾ ಆಸ್ಪತ್ರೆಗೆ ಭೇಟಿ ನೀಡಿದರು ಮತ್ತು ಅದನ್ನು ಉದ್ಘಾಟಿಸಿದರು.

**(2021 ರಲ್ಲಿ ಆಸ್ಪತ್ರೆಯ ಕಾರ್ಯಕ್ಷಮತೆ)**

2021ರಲ್ಲಿ ಆಸ್ಪತ್ರೆಯ ಕಾರ್ಯಕ್ಷಮತೆಯ ಸಂಕ್ಷಿಪ್ತ ವಿಮರ್ಶೆಯು ಈ ಆಸ್ಪತ್ರೆಯು ಸೇವಾ ವಿತರಣಾ ಕ್ಷೇತ್ರದಲ್ಲಿ ಎಷ್ಟು ಪ್ರಗತಿ ಸಾಧಿಸುತ್ತಿದೆ ಎಂಬುದನ್ನು ಅಳೆಯಲು ಸಾಕು. ಪ್ರಸ್ತುತ, 9 ವೈದ್ಯರು, 16 ನರ್ಸಿಂಗ್

ಸಿಬ್ಬಂದಿ, 13 ಹೆರಿಗೆ ಕೆಲಸಗಾರರು, ಔಷಧಾಲಯ ಕಾರ್ಮಿಕರು ಮತ್ತು ಪ್ರಯೋಗಾಲಯ ತಂತ್ರಜ್ಞರು ಇದ್ದಾರೆ. ಅಲ್ಲದೆ 44 ಸಂದರ್ಶಕ ವೈದ್ಯರು ಸೇರಿದ್ದಾರೆ. ಸ್ತ್ರೀರೋಗ ವಿಭಾಗದಲ್ಲಿ ಒಟ್ಟು 20,772 ರೋಗಿಗಳಿಗೆ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುವುದು. 1,273 ಡೆಲಿವರಿ ಪ್ರಕರಣಗಳು ಕಂಡುಬಂದಿವೆ. ಕ್ಯಾನ್ಸರ್‌ನಲ್ಲಿ 106 ಪ್ರಮುಖ ಕಾರ್ಯಾಚರಣೆಗಳನ್ನು ನಡೆಸಲಾಯಿತು. 1950 ರಲ್ಲಿ, ಗರ್ಭಿಣಿಯರಿಗೆ ಲಸಿಕೆ ಹಾಕಲಾಯಿತು. 4161 ನವಜಾತ ಶಿಶುಗಳಿಗೆ ಲಸಿಕೆ ಹಾಕಲಾಗಿದೆ. ವರ್ಷದಲ್ಲಿ, ಒಟ್ಟು ಎಪ್ಪತ್ತೊಮ್ಮರು ಸಾವಿರದ ಮುನ್ನೂರ ಎಂಬತ್ತೊಂಬತ್ತು ರೋಗಿಗಳು ಚಿಕಿತ್ಸೆ ಪಡೆದರು.

**(ಕೊರೊನಾ ಲಸಿಕೆ ಕೇಂದ್ರ)**

ಇಡೀ ದೇಶದಲ್ಲಿ ಕೇವಲ ಐದು ಆಸ್ಪತ್ರೆಗಳನ್ನು ಮಾತ್ರ ಸರ್ಕಾರ ಕರೋನಾ ಲಸಿಕೆ ಕೇಂದ್ರಗಳನ್ನಾಗಿ ಮಾಡಿದೆ. ಈ ಐದರಲ್ಲಿ, ಒಂದು ಅಹ್ಮದೀಯ ಆಸ್ಪತ್ರೆಯೂ ಸೇರಿದೆ ಮತ್ತು ಇತರ ನಾಲ್ಕು ಕ್ರಿಶ್ಚಿಯನ್ ಚರ್ಚ್ ಆಸ್ಪತ್ರೆಗಳಾಗಿವೆ.

**(ರಕ್ತದಾನ)**

ಪ್ರತಿ ವರ್ಷ, ಬುರ್ಕಿನಾ ಫಾಸೊದ ಬಹುತೇಕ ಎಲ್ಲಾ ಪ್ರದೇಶಗಳಲ್ಲಿ ರಕ್ತದಾನ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಸಾಮಾನ್ಯವಾಗಿ, ಈ ಮಹತ್ವದ ಸೇವೆಯಲ್ಲಿ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮುಂಚೂಣಿಯಲ್ಲಿದ್ದಾರೆ. ಈ ಕ್ಷೇತ್ರದಲ್ಲಿ ಅಹ್ಮದಿಯಾ ಬುರ್ಕಿನಾ ಫಾಸೊ ಅವರ ಉತ್ತಮ ಹೆಸರು ಎಷ್ಟಿದೆಯೆಂದರೆ ಹೆಚ್ಚು ಕಡಿಮೆ ಪ್ರತಿ ವರ್ಷ ವಿವಿಧ ಆಸ್ಪತ್ರೆಗಳು ಅಗತ್ಯ ಸಮಯದಲ್ಲಿ ರಕ್ತದಾನಕ್ಕಾಗಿ ಅಹ್ಮದಿಯಾ ಜಮಾಅತ್ ಅನ್ನು ಸಂಪರ್ಕಿಸುತ್ತವೆ. ಪ್ರತಿ ವರ್ಷ ಸುಮಾರು ಐನೂರು ಚೀಲ ರಕ್ತದಾನ ಮಾಡಲಾಗುತ್ತದೆ.

**(ಕಣ್ಣುಗಳ ಉಚಿತ ಶಸ್ತ್ರಚಿಕಿತ್ಸೆ)**

2005 ರ ಕೊನೆಯಲ್ಲಿ, ಬುರ್ಕಿನಾ ಫಾಸೊ ಸಮುದಾಯದ ಅಮೀರ್ ಮಾನ್ಯ ಮಹ್ಮೂದ್ ನಾಸಿರ್ ಸಾಕಿಬ್ ಸಾಹಿಬ್ ಅವರು ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸಿಹ್ ಖಾಮಿಸ್(ಅತಬಿಅ) ಅವರಲ್ಲಿ ಚಾರಿಟಿಯಾಗಿ ಬುರ್ಕಿನಾ ಫಾಸೊದಲ್ಲಿ ಐವತ್ತು ಕಣ್ಣಿನ ಶಸ್ತ್ರಚಿಕಿತ್ಸೆಗಳನ್ನು ಮಾಡಲು ಅನುಮತಿ ಕೇಳಿದರು. ಏಪ್ರಿಲ್ 2006 ರ ವೇಳೆಗೆ 100 ಶಸ್ತ್ರಚಿಕಿತ್ಸೆಗಳನ್ನು ಪೂರ್ಣಗೊಳಿಸಿದ ನಂತರ, 100 ಕ್ಕೂ ಹೆಚ್ಚು ವಿನಂತಿಗಳನ್ನು ಅನುಮೋದಿಸಲಾಗಿದೆ. ನಂತರ, ಬ್ರಿಟನ್‌ನ ವಾರ್ಷಿಕ ಜಲ್ಸದ ಸಂದರ್ಭದಲ್ಲಿ ಕಚೇರಿಯ ಸಭೆಯಲ್ಲಿ, ಸೈಯ್ಯದ್‌ನಾ ಹುಝೂರ್ ಅನ್ವರ್(ಅತಬಿಅ) ಅವರು ಕಾರ್ಯಾಚರಣೆಯನ್ನು ಮುಂದುವರಿಸಲು ಮಾನ್ಯ ಅಮೀರ್ ಸಾಹಿಬ್‌ಗೆ ಸೂಚಿಸಿದರು. ಅಂದಿನಿಂದ ಈ ಅಭಿಯಾನ ನಿರಂತರವಾಗಿ ನಡೆಯುತ್ತಿದ್ದು, ಇಲ್ಲಿಯವರೆಗೆ ಸುಮಾರು 15 ಸಾವಿರ ಕಣ್ಣಿನ ಉಚಿತ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

**(ಮಸ್ರೂರ್ ಐ ಇನ್ಸ್ಟಿಟ್ಯೂಟ್)**

ನೂರು ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಮಾಡಿಸುವ ಮೂಲಕ ಆರಂಭವಾದ ನಿರಂತರ ದಾನದಲ್ಲಿ ಅಲ್ಲಾಹನು ಎಷ್ಟರ ಮಟ್ಟಿಗೆ ಅನುಗ್ರಹಿಸಿದನು ಎಂದರೆ ದೊಡ್ಡ ಕಣ್ಣಿನ ಆಸ್ಪತ್ರೆ ನಿರ್ಮಾಣದ ಮಾತುಗಳು ಕೇಳಿ ಬಂದಿತು. ಈ ಪ್ರಸ್ತಾವನೆಯನ್ನು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಅವರು ನೀಡಿದರು ಮತ್ತು ಅವರು ಇದನ್ನು ಬುರ್ಕಿನಾ ಫಾಸೊದಲ್ಲಿ ನಿರ್ಮಿಸಲು ಅನುಮತಿ ನೀಡಿದರು ಮತ್ತು ಅದರ ನಿರ್ಮಾಣದ ಜವಾಬ್ದಾರಿಯನ್ನು ಮಜ್ಲಿಸ್ ಅನ್ಸಾರುಲ್ಲಾ ಯುಕೆ ಅವರಿಗೆ ವಹಿಸಲಾಯಿತು. 2017 ರಲ್ಲಿ, ಈ ಯೋಜನೆಯ ಅಡಿಪಾಯವನ್ನು ಬುಸ್ತಾನ್ ಮಹದಿಯಲ್ಲಿ ಹಾಕಲಾಯಿತು. "ಮಸ್ರೂರ್ ಐ ಇನ್‌ಸ್ಟಿಟ್ಯೂಟ್" ಹೆಸರಿನಲ್ಲಿ ನಿರ್ಮಾಣವಾಗುತ್ತಿರುವ ಈ ಆಸ್ಪತ್ರೆಯು ಈ ಪ್ರದೇಶದಲ್ಲಿ ವಿಶಿಷ್ಟವಾದ ಕಣ್ಣಿನ ಆಸ್ಪತ್ರೆಯಾಗಿದೆ ಮತ್ತು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ಆಸ್ಪತ್ರೆಗೆ ಇಪ್ಪತ್ತೇಳು ಎಕರೆ ಪ್ರದೇಶವನ್ನು ಮೀಸಲಿಡಲಾಗಿದೆ ಮತ್ತು ಅದರ ಮೇಲೆ ಸುಂದರವಾದ ಆಸ್ಪತ್ರೆ ಕಟ್ಟಡವನ್ನು ನಿರ್ಮಿಸಲಾಗಿದೆ.

**ಹ್ಯುಮ್ಯಾನಿಟಿ ಫಸ್ಟ್‌ನ ಸೇವೆಗಳು**

ಬುರ್ಕಿನಾ ಫಾಸೊದಲ್ಲಿ ಭಯೋತ್ಪಾದನೆಯಿಂದಾಗಿ ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ ಮತ್ತು ಸರ್ಕಾರ ಮತ್ತು ನೆರವು ಏಜೆನ್ಸಿಗಳ ಕರುಣೆಯಲ್ಲಿದ್ದಾರೆ. ಈ ಜನರಿಗೆ ಸಹಾಯ ಮಾಡಲು, ಹ್ಯುಮಾನಿಟಿ ಫಸ್ಟ್ ಬುರ್ಕಿನಾ ಫಾಸೊ, ಈ ಜನರಿಗೆ ಪಡಿತರ ವಿತರಣೆ, ಆಹಾರವನ್ನು ತಯಾರಿಸುವುದು ಮತ್ತು ವಿತರಿಸುವುದು, ಬಟ್ಟೆ ಮತ್ತು ಇತರ ಅಗತ್ಯ ವಸ್ತುಗಳನ್ನು ವಿತರಿಸುವುದು ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ರಚಿಸಿದೆ. ಕೇವಲ ಎರಡು ವರ್ಷಗಳಲ್ಲಿ ಟನ್‌ಗಟ್ಟಲೆ ಆಹಾರ ಪದಾರ್ಥಗಳು ಮತ್ತು ಇತರ ವಸ್ತುಗಳನ್ನು ಈ ಜನರಿಗೆ ತಲುಪಿಸಲಾಗಿದೆ.

**ಹ್ಯುಮಾನಿಟಿ ಫಸ್ಟ್ ಹೊಲಿಗೆ ಕೇಂದ್ರ ಔಗಾಡೌಗೌ**

2002 ರಿಂದ ಹ್ಯುಮಾನಿಟಿ ಫಸ್ಟ್ ಅಡಿಯಲ್ಲಿ ಒಂದು ಹೊಲಿಗೆ ಕೇಂದ್ರವನ್ನು ಬುರ್ಕಿನಾ ಫಾಸೊದ ರಾಜಧಾನಿ ಔಗಾಡೌಗೌನಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರದ ಅಡಿಯಲ್ಲಿ ವರ್ಷವಿಡೀ ತರಗತಿಗಳು ನಡೆಯುತ್ತವೆ. ನೂರಾರು ವಿದ್ಯಾರ್ಥಿಗಳು ಈ ಹೊಲಿಗೆ ಕೇಂದ್ರದಿಂದ ವೃತ್ತಿಪರ ಹೊಲಿಗೆ ಕಲಿತು ಉದ್ಯೋಗಸ್ಥರಾಗಿದ್ದಾರೆ. 2004 ರಲ್ಲಿ ಹುಝೂರ್ ಅನ್ವರ್(ಅತಬಿಅ) ಅವರ ಭೇಟಿಯ ಸಮಯದಲ್ಲಿ, ಹಝ್ರತ್ ಬೇಗಂ ಸಾಹಿಬಾ ಮದ್ದ ಝಿಲ್ಲುಹ ಅವರು ಔಗಾಡೌಗೌದಲ್ಲಿ 50 ಅರ್ಹ ಮತ್ತು ಅಗತ್ಯವಿರುವ ಮಹಿಳೆಯರಿಗೆ ಮತ್ತು ಬೊಬೋ ಜಲಾಸ್ಸೊದಲ್ಲಿ ಹತ್ತು ಮಂದಿಗೆ ಹೊಲಿಗೆ ಯಂತ್ರಗಳನ್ನು ಉಡುಗೊರೆಯಾಗಿ ನೀಡಿದರು.

ಹ್ಯುಮಾನಿಟಿ ಫಸ್ಟ್‌ನ ಹೊಲಿಗೆ ಕೇಂದ್ರವು ಯಶಸ್ವಿಯಾಗಿ ನಡೆಯುವುದು ಮಾತ್ರವಲ್ಲದೆ ಬೆಳವಣಿಗೆಯ ಹಾದಿಯಲ್ಲಿದೆ. ಕೋವಿಡ್-19 ರ ದಿನಗಳಲ್ಲಿ ಎಲ್ಲೆಡೆ ಫೇಸ್ ಮಾಸ್ಕ್‌ಗಳ ಕೊರತೆ ಇತ್ತು, ಸ್ವಲ್ಪ ಸ್ಟಾಕ್ ಇದ್ದವರು ಅವುಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡಲು ಪ್ರಾರಂಭಿಸಿದರು. ಇಂತಹ ಸಂದರ್ಭದಲ್ಲಿ ಹ್ಯುಮಾನಿಟಿ ಫಸ್ಟ್ ತಮ್ಮ ಕೇಂದ್ರದಲ್ಲಿ ಮಾಸ್ಕ್‌ಗಳನ್ನು ತಯಾರಿಸಲು ಪ್ರಾರಂಭಿಸಿದರು. ಮತ್ತು ಜನರಿಗೆ ಉಚಿತವಾಗಿ ವಿತರಿಸಲು ಪ್ರಾರಂಭಿಸಿತು.

ಕೇಂದ್ರದ ಅತ್ಯುತ್ತಮ ಕೆಲಸ ಮತ್ತು ಗುಣಮಟ್ಟದ ಪ್ಯಾಕೇಜಿಂಗ್ ಅನ್ನು ನೋಡಿದ ಕೆಲವು ಸಂಸ್ಥೆಗಳು ಮತ್ತು ಕಲ್ಯಾಣ ಸಂಸ್ಥೆಗಳು ಮಾಸ್ಕ್‌ಗಳನ್ನು ತಯಾರಿಸಲು ಆರ್ಡರ್ ನೀಡಿತು. ಹೊಲಿಗೆ ಕೇಂದ್ರಗಳ ಕಾರ್ಮಿಕರು ಹಗಲಿರುಳು ಶ್ರಮಿಸಿ ಸಾವಿರಾರು ಸುಂದರ ಮಾಸ್ಕ್‌ಗಳನ್ನು ತಯಾರಿಸಿದರು. 2004ರ ಹ್ಯುಮಾನಿಟಿ ಫಸ್ಟ್ ಚಟುವಟಿಕೆಗಳನ್ನು ಪರಿಶೀಲಿಸಿದ ನಂತರ, ಹುಝೂರ್ ಅನ್ವರ್(ಅತಬಿಅ) ರವರು ಹ್ಯುಮಾನಿಟಿ ಸೆಂಟರ್‌ನ ಸಂದರ್ಶಕರ ಪುಸ್ತಕದಲ್ಲಿ ಬರೆದಿದ್ದಾರೆ:

"ಮಾಶಾಅಲ್ಲಾಹ್! ಹ್ಯುಮಾನಿಟಿ ಫಸ್ಟ್‌ನ ಮೂಲಕ ಉತ್ತಮ ಕೆಲಸಗಳು ನಡೆದಿವೆ. ಸರ್ವಶಕ್ತನದ ಅಲ್ಲಾಹನು ನಿಮ್ಮೆಲ್ಲರನ್ನು ಮದಲಿಗಿಂತಲು ಹೆಚ್ಚು ಮಾನವ ಸೇವೆ ಮಾಡಲು ತೌಫೀಖ್ ನೀಡಲಿ. ಆಮೀನ್"

**International Association of Ahmadi Achitects and engineers IAAAE**

ಈ ಸಂಸ್ಥೆಯ ಮೂಲಕ, ಬುರ್ಕಿನಾ ಫಾಸೊದಲ್ಲಿ ಹಲವಾರು ಸೇವಾ ಯೋಜನೆಗಳನ್ನು ನಡೆಸಲಾಗುತ್ತಿದೆ. ಬುರ್ಕಿನಾ ಫಾಸೊದ ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರಿನ ಪ್ರವೇಶವು ಕಷ್ಟಕರ ಮತ್ತು ನೋವಿನಿಂದ ಕೂಡಿದ ಸಂಗತಿಯಾಗಿದೆ. ವಾಟರ್ ಫಾರ್‌ಲೈಫ್ (ಜೀವನಕ್ಕೆ ನೀರು) ಕಾರ್ಯಕ್ರಮದಡಿಯಲ್ಲಿ ದೂರದ ಗ್ರಾಮಗಳಲ್ಲಿ ನಲ್ಲಿಗಳನ್ನು ಸರಿಪಡಿಸಿ ಮತ್ತು ಕೊಳವೆಬಾವಿಗಳನ್ನು ತೋಡುವ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸುವ ಮೂಲಕ ನೀರಿನ ಸೌಕರ್ಯವನ್ನು ಒದಗಿಸಲು ಮೇಲೆ ತಿಳಿಸಿದ ಸಂಸ್ಥೆಯಿಂದ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

**(ಮಾಡಲ್ ವಿಲೇಜಸ್ (ಮಾದರಿ ಗ್ರಾಮಗಳು))**

ಇದೇ ಸಂಸ್ಥೆಯ ಅಡಿಯಲ್ಲಿ ಮಾದರಿ ಗ್ರಾಮಗಳನ್ನೂ ನಿರ್ಮಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ದೂರದ ಗ್ರಾಮವನ್ನು ಆಯ್ಕೆ ಮಾಡುವ ಮೂಲಕ ಸೋಲಾರ್ ವ್ಯವಸ್ಥೆ ಮೂಲಕ ಶುದ್ಧ ಕುಡಿಯುವ ನೀರು, ಪ್ರತಿ ಮನೆಗೆ ವಿದ್ಯುತ್, ಬೀದಿ ಮತ್ತು ರಸ್ತೆಗಳಲ್ಲಿ ವಿದ್ಯುತ್, ಮಸೀದಿ ಮತ್ತು ಪ್ರಾರ್ಥನಾ ಗೃಹಗಳಲ್ಲಿ ವಿದ್ಯುತ್ ಸೌಲಭ್ಯ, ಜೊತೆಗೆ ಗ್ರಾಮದ ಇತರ ಸಣ್ಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಮಾದರಿ ಗ್ರಾಮ ಯೋಜನೆಯು ಗ್ರಾಮಸ್ಥರ ಜೀವನವನ್ನು ಪರಿವರ್ತಿಸುತ್ತದೆ.

ಬುರ್ಕಿನಾ ಫಾಸೊದ ಡೋರಿ ಪ್ರದೇಶದ ಮೆಹದಿಯಾಬಾದ್ ಗ್ರಾಮವು IAAAE ಯ ಮೊದಲ ಮಾದರಿ ಗ್ರಾಮ ಯೋಜನೆಯಾಗಿದೆ. ಅದರ ನಂತರ 'ಸೀನೆ' ಮತ್ತು 'ಮೊರಪಿಟಿ"ಯಲ್ಲಿ ಇನ್ನೂ ಎರಡು ಮಾದರಿಗಳನ್ನು ಮಾಡಲಾಗಿದೆ. ಬಾನಪುರಕೆ ಪ್ರದೇಶದಲ್ಲಿ ನಾಲ್ಕನೇ ಮಾದರಿ ಗ್ರಾಮ 'ಲಿಟಿ ಫಾಸೊ' ನಿರ್ಮಿಸಲು ಸಿದ್ಧತೆಗಳು ನಡೆಯುತ್ತಿವೆ.

**ಶೈಕ್ಷಣಿಕ ಕ್ಷೇತ್ರದಲ್ಲಿ ಸೇವೆಗಳು**

ಮಾರ್ಚ್ 30, 2004 ರಂದು, ಡೋರಿಯಲ್ಲಿ ಮೊದಲ ಅಹ್ಮದಿಯಾ ಪ್ರಾಥಮಿಕ ಶಾಲೆಯ ಶಿಲಾನ್ಯಾಸವನ್ನು ಸಯ್ಯದ್‌ನಾ ಹಝ್ರತ್ ಅಮೀರುಲ್ ಮೂಮಿನೀನ್(ಅತಬಿಅ) ಅವರ ಅನುಗ್ರಹದಾಯಕ ಹಸ್ತಗಳಿಂದ ನೀಡಲಾಯಿತು. ಅದರ ನಂತರ, ಅಹ್ಮದಿಯಾ ಬುರ್ಕಿನಾ ಫಾಸೊ ಈ ಕ್ಷೇತ್ರದಲ್ಲಿ ಮತ್ತಷ್ಟು ಪ್ರಗತಿ ಸಾಧಿಸಿತು ಮತ್ತು ಈಗ 2022 ರ ವೇಳೆಗೆ,

ಈ ಕೆಳಗಿನ ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಮಾತ್ರವಲ್ಲ, ನೂರಾರು ಮಕ್ಕಳನ್ನು ಮೌಲ್ಯಯುತ ಶಿಕ್ಷಣದೊಂದಿಗೆ ಸಜ್ಜುಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

ಪ್ರಸ್ತುತ, ಐದು ಅಹ್ಮದೀಯ ಪ್ರಾಥಮಿಕ ಶಾಲೆಗಳು ಡೋರಿ, ಕಾಯಾ, ಲೆವ್, ಬಾನ್‌ಫೊರಾ, ಟಿಂಕುಡು ಗೋದಲ್ಲಿ ನೆಲೆಗೊಂಡಿದೆ, ಕಾಲೇಜುಗಳು ಕದಗು, ದಡ್ಗು ಮತ್ತು ಬುಸ್ತಾನ್ ಮೆಹದಿಯಲ್ಲಿ ನಡೆಯುತ್ತಿವೆ. ಬಾನ್‌ಫೊರಾದಲ್ಲಿ ಕಾಲೇಜು ನಿರ್ಮಾಣ ಹಂತದಲ್ಲಿದೆ.

### ಐವಾನೆ ಮಸ್ರೂರ್

ಐವಾನೆ ಮಸ್ರೂರ್ ಅನ್ನು ಮಜ್ಲಿಸ್ ಅನ್ಸರುಲ್ಲಾ ಯುಕೆ ಅವರು ಸೆಂಟ್ರಲ್ ಮಿಷನ್ ಹೌಸ್ ಸೋಮಗಂಡೆಯಲ್ಲಿ ನಿರ್ಮಿಸಿದ್ದಾರೆ. ಇದು ಐವಾನೆ ಮಸ್ರೂರ್‌ನ ಬಹುಪಯೋಗಿ ಮಲ್ಟಿ ಪರ್ಪಝ್ ಹಾಲ್ ಆಗಿದೆ. ಇದನ್ನು ವಿವಿಧ ಸಮಾರಂಭಗಳು ಮತ್ತು ಕ್ರೀಡಾ ಸ್ಪರ್ಧೆಗಳಿಗೆ ಬಳಸಲಾಗುತ್ತದೆ. ಅಲ್ಲಾಹನ ಅನುಗ್ರಹದಿಂದ ಬುರ್ಕಿನಾ ಫಾಸೊದಲ್ಲಿ ಅಹ್ಮದಿಯಾ ಬ್ಯಾಡ್ಮಿಂಟನ್ ಕ್ಲಬ್ ಅನ್ನು ನೋಂದಾಯಿಸಲಾಗಿದೆ. ಐವಾನ್ ಮಸ್ರೂರಿನಲ್ಲಿರುವ ಈ ಕ್ಲಬ್ ಅಡಿಯಲ್ಲಿ ರಾಷ್ಟಮಟ್ಟದ ಬ್ಯಾಡ್ಮಿಂಟನ್ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತದೆ.

### ಜಾಮಿಯತುಲ್ ಮುಬಶ್ಶಿರೀನ್ ಬುರ್ಕಿನಾ ಫಾಸೊ

ಫ್ರೆಂಚ್ ರಾಷ್ಟ್ರದಲ್ಲಿ ಈ ರೀತಿಯ ಮೊದಲನೆಯ ಜಾಮಿಯತುಲ್ ಮುಬಶ್ಶಿರೀನ್ 2017 ರಲ್ಲಿ ಬುರ್ಕಿನಾ ಫಾಸೊದಲ್ಲಿ ಸ್ಥಾಪಿಸಲಾಯಿತು. ಇದು ಸಂಪೂರ್ಣವಾಗಿ ಫ್ರೆಂಚ್ ಮಧ್ಯಮ ವಿಶ್ವವಿದ್ಯಾಲಯವಾಗಿದೆ. ಸಯ್ಯದ್‌ನಾ ಅಮೀರುಲ್ ಮೊಮಿನೀನ್(ಅತಬಿಅ) ಅವರ ಅಸಾಧಾರಣ ಸಹಾನುಭೂತಿ ಮತ್ತು ಮಾರ್ಗದರ್ಶನದೊಂದಿಗೆ, ಈ ವಿಶ್ವವಿದ್ಯಾಲಯವು ಫ್ರೆಂಚ್ ದೇಶಗಳು ಮತ್ತು ಫ್ರೆಂಚ್ ರಾಷ್ಟಗಳ ಮೊದಲ ಮತ್ತು ಏಕೈಕ ವಿಶ್ವವಿದ್ಯಾಲಯ ಎಂಬ ಅನನ್ಯ ಗೌರವವನ್ನು ಹೊಂದಿದೆ. ಮೊದಲ ವರ್ಷದಲ್ಲಿ ಕೇವಲ ಮೂರು ಕೊಠಡಿಗಳನ್ನು ನಿರ್ಮಿಸಿ ಜಾಮಿಯಾವನ್ನು ಪ್ರಾರಂಭಿಸಲಾಯಿತು. ಅಲ್ಹಮ್ದುಲಿಲ್ಲಾಹ್ ಮೊದಲ ವರ್ಷವೇ ಜಾಮಿಯತುಲ್ ಮುಬಶ್ಶಿರೀನ್ ಬುರ್ಕಿನಾ ಫಾಸೋದಲ್ಲಿ ನಾಲ್ಕು ಫ್ರೆಂಚ್ ರಾಷ್ಟ್ರಗಳ ಪ್ರತಿನಿಧಿಗಳು ಇದ್ದಾರೆ ಮತ್ತು ಮೊದಲ ಕ್ಲಾಸ್ ತಮ್ಮ ಶಿಕ್ಷಣವನ್ನು ಪಡೆದು ತೆರಳಿದ್ದಾರೆ. ಇದುವರೆಗೆ ಮೂರು ಕ್ಲಾಸ್‌ಗಳು ಈ ಜಾಮಿಯಾದಿಂದ (ವಿಶ್ವವಿದ್ಯಾಲಯದಿಂದ) ಪದವಿ ಪಡೆದಿವೆ ಮತ್ತು ಕ್ರಿಯಾ ಕ್ಷೇತ್ರವನ್ನು ಪ್ರವೇಶಿಸಿವೆ. ಈ ಮೂರು ವರ್ಷಗಳಲ್ಲಿ, ಬುರ್ಕಿನಾ ಫಾಸೊ, ನೈಜರ್, ಬೆನಿನ್, ಮಾಲಿ, ಕಾಂಗೋ ಕಿನ್ಶಾಸಾ ಮತ್ತು ಕಾಂಗೋ ಬ್ರ್ಯಾಜಾವಿಲ್ಲೆಗಳಿಂದ 49 (ಮುಬಲ್ಲಿಗ್‌ಗಳು) ಬೋಧಕರು ಈ ವಿಶ್ವವಿದ್ಯಾಲಯದಿಂದ ಉತ್ತೀರ್ಣರಾಗಿದ್ದಾರೆ. ಪ್ರಸ್ತುತ, ಒಂಬತ್ತು ಫ್ರೆಂಚ್ ದೇಶಗಳ ಎಂಟು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

ಮೊದಲ ಪ್ರಮಾಣಪತ್ರ ಸಮಾರಂಭದ ಸಂದರ್ಭದಲ್ಲಿ ಸಯ್ಯದ್‌ನಾ ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಅವರು ತಮ್ಮ ವಿಶೇಷ ಸಂದೇಶವನ್ನು ಕಳುಹಿಸಿದ್ದರು. ಇದರಲ್ಲಿ ಜಾಮಿಯತುಲ್ ಮುಬಶ್ಶಿರೀನ್ ಬುರ್ಕಿನಾ ಫಾಸೋವಿನ ಬಗ್ಗೆ ಒಂದು ಪಂಕ್ತಿಯೂ ಹೀಗಿದೆ:

This will be Great Source Pride not only for the members of jamaat in French- speaking Countries but for everyone in the whole world of Ahmadiyyat.

ಇದು ಫ್ರೆಂಚ್ ಮಾತನಾಡುವ ದೇಶಗಳಲ್ಲಿರುವ ಜಮಾಅತ್‌ನ ಸದಸ್ಯರಿಗೆ ಮಾತ್ರವಲ್ಲದೆ ಇಡೀ ಅಹ್ಮದಿಯತ್ ಪ್ರಪಂಚದ ಎಲ್ಲರಿಗೂ ಹೆಮ್ಮೆಯ ಮೂಲವಾಗಿದೆ.

ಸರ್ವಶಕ್ತನಾದ ಅಲ್ಲಾಹನು ಖಿಲಾಫತ್ ತತ್ವದ ಪ್ರಕಾರ ಜಾಮಿಯತುಲ್–ಮುಬಶ್ಶಿರೀನ್ ಬುರ್ಕಿನಾಫಾಸೋಗೆ ಅನುಸರಿಸುವಂತೆ ಮಾಡಲಿ, ಇದರಿಂದ ಎಲ್ಲಾ ಅಹ್ಮದಿಯಾ ಜಗತ್ತು ಹೆಮ್ಮೆಪಡುವಂತೆ ಮಾಡಲಿ.

### ಪ್ರಿಂಟಿಂಗ್ ಪ್ರೆಸ್ ಅಹ್ಮದಿಯಾ ಔಗಾಡೌಗೋ

2008 ರಿಂದ ಬುರ್ಕಿನಾ ಫಾಸೊದಲ್ಲಿ ಮುದ್ರಣಾಲಯವನ್ನು ಸ್ಥಾಪಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಈ ಪತ್ರಿಕಾ ಪ್ರಚಾರ ಕ್ಷೇತ್ರದಲ್ಲಿ ಪುಸ್ತಕಗಳು ಮತ್ತು ಸಾಹಿತ್ಯವನ್ನು ಒದಗಿಸಲು ಸಹಕಾರಿಯಾಗಿದೆ.

### ಅಧೀನ ಸಂಸ್ಥೆಗಳು

1990 ಬುರ್ಕಿನಾ ಫಾಸೊದಲ್ಲಿ ಅಧೀನ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿರುವ ವರ್ಷವಾಗಿತ್ತು. ಜುಲೈ 1990 ರಲ್ಲಿ, ಉಪ–ಸಂಘಟನೆಗಳ ಸ್ಥಾಪನೆ ಮತ್ತು ಅವುಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಿಸಿದಂತೆ ಬುರ್ಕಿನಾ ಫಾಸೊದ ಅಮೀರ್ ಸಾಹಿಬ್ ಅವರ ಪತ್ರಕ್ಕೆ ಪ್ರತಿಕ್ರಿಯೆಯಾಗಿ, ಹಝ್ರತ್ ಖಲೀಫತುಲ್ ಮಸಿಹ್ ರಾಬಿ(ರಹ) ಹೀಗೆ ಉತ್ತರಿಸಿದರು: ಈಗ ನೇಮಕಮಾಡಿ ಮಜ್ಲಿಸ್‌ಗಳನ್ನು ತರಬೇತಿ ಮಾಡಿ ಚುನಾವಣೆಯ ಹಂತವು ನಂತರ ಬರುತ್ತದೆ." (ತಾರೀಖ್ ಅಹ್ಮದೀಯತ್ ಬುರ್ಕಿನಾ ಫಾಸೊ, ಫೈಲ್ 1990)

ಅಲ್ಹಮ್ದುಲಿಲ್ಲಾಹ್, ಬುರ್ಕಿನಾ ಫಾಸೊದಲ್ಲಿನ ಎಲ್ಲಾ ಮೂರು ಉಪ–ಸಂಘಟನೆಗಳು ಈಗ ಈ ಮೈಲಿಗಲ್ಲನ್ನು ತಲುಪಿವೆ ಮತ್ತು ಸಂಸ್ಥೆಗಳು ಈಗ ಮಜ್ಲಿಸ್ ಶೂರಾವನ್ನು ನಡೆಸುತ್ತವೆ, ಇದರಲ್ಲಿ ಅವರು ತಮ್ಮ ಅಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ.

### (ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ)

ಬುರ್ಕಿನಾ ಫಾಸೊದಲ್ಲಿ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿದೆ. ಎಲ್ಲಾ ಪ್ರದೇಶಗಳಲ್ಲಿ ಸಾಂಸ್ಥಿಕ ರಚನೆಯನ್ನು ಸ್ಥಾಪಿಸಲಾಗಿದೆ. ಮಜ್ಲಿಸ್ ಮತ್ತು ಪ್ರದೇಶಗಳ ನಾಯಕರು ಆಯಾ ಪ್ರದೇಶಗಳಲ್ಲಿ ತಮ್ಮ ಮಜ್ಲಿಸ್ ಮತ್ತು ಖುದ್ದಾಮ್‌ನ ಕಲ್ಯಾಣಕ್ಕಾಗಿ ಶ್ರಮಿಸುತ್ತಾರೆ. ಪ್ರಾದೇಶಿಕ ಸಭೆಗಳು ನಡೆಯುತ್ತವೆ.

### (ಫರ್ಝ್ಲೋ ಉಮರ್ ತರಬೇತಿ ಕ್ಲಾಸ್)

ಖುದ್ದಾಮ್ ಮತ್ತು ಅತ್ಫಾಲ್‌ನ ತರಬೇತಿಗಾಗಿ, ಮಜ್ಲಿಸ್ ಖುದ್ದಾಮುಲ್ ಅಹ್ಮದೀಯಾ ಸಂಸ್ಥೆಯ ಫರ್ಝ್ಲೋ ಉಮರ್ ತರಬೇತಿ ತರಗತಿಯನ್ನು ಪ್ರತಿ ವರ್ಷ ಬೇಸಿಗೆ ರಜೆಯಲ್ಲಿ ಆಯೋಜಿಸಲಾಗುತ್ತದೆ. ಈ ಕಾರ್ಯಕ್ರಮ ಯಶಸ್ವಿಯಾಗಿ ಮುಂದುವರೆಯುತ್ತಿದೆ. ಈ ತರಗತಿಗಳು ಜಾಮಿಯತುಲ್ ಮುಬಶಿರೀನ್‌ಗೆ ಪ್ರವೇಶಕ್ಕಾಗಿ ಕಳುಹಿಸಲಾದ ಅಭ್ಯರ್ಥಿಗಳ ಆರಂಭಿಕ ತರಬೇತಿ ಮತ್ತು ಅವರನ್ನು ವಕ್ಫ್‌ಗೆ ಸಿದ್ಧಪಡಿಸುವ ಉತ್ತಮ ಸಾಧನವಾಗಿದೆ.

### (ಲಜ್ನಾ ಇಲಾಅಲ್ಲಾಹ್ ಪಶ್ಚಿಮ ಆಫ್ರಿಕಾದ ರಿಫ್ರೆಶರ್ ಕೋರ್ಸ್)

2019 ರ ಕೊನೆಯಲ್ಲಿ, ಲಜ್ನಾ ಇಮಾಅಲ್ಲಾಹ್ ಕೇಂದ್ರದಿಂದ ಸಯ್ಯದ್‌ನಾ ಹಝ್ರತ್ ಅಮೀರುಲ್ ಮೊಮಿನೀನ್(ಅತಬಿಅ) ಅವರ ಅನುಮೋದನೆಯೊಂದಿಗೆ ಪಶ್ಚಿಮ ಆಫ್ರಿಕಾದ ಲಜ್ನಾ ಇಮಾಅಲ್ಲಾಹ್ ಅಧಿಕಾರಿಗಳಿಗೆ ರಿಫ್ರೆಶರ್ ಕೋರ್ಸ್ ನಡೆಯಿತು. ಹುಝೂರ್ ಅನ್ವರ್(ಅತಬಿಅ) ಈ ರಿಫ್ರೆಶರ್ ಕೋರ್ಸ್ ಅನ್ನು ಆಯೋಜಿಸಲು ಬುರ್ಕಿನಾ ಫಾಸೊಗೆ ಅವಕಾಶ ನೀಡಿದರು. ಈ ರಿಫ್ರೆಶರ್ ಕೋರ್ಸ್‌ನಲ್ಲಿ, ಮಾಲಿ, ಬೆನಿನ್, ನೈಜರ್, ಮೊರಾಕೊ ಮತ್ತು ಅಲ್ಜೀರಿಯಾ ಸೇರಿದಂತೆ 6 ದೇಶಗಳ ಲಜ್ನಾ

*(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)*

---

**ಪುಟ ಸಂಖ್ಯೆ 01ರ ಉಳಿದ ಭಾಗ**

ಬಂದಹಾಗೆ ಮಾತ್ರ ಬರೆಯಲಾಗಿತ್ತು, ನಿಜವಾಗಿ ಈ ಸಂಖ್ಯೆ ಮಿತಿ ಎಂದು ಅಲ್ಲ, ಬದಲಿಗೆ ನಾವು ನಮ್ಮ ಲೇಖನವೊಂದರಲ್ಲಿ ಸ್ಪಷ್ಟವಾಗಿ ಪ್ರಕಟಿಸಿದ್ದೇವೆ ನಮ್ಮ ಜಮಾಅತ್ತಿನ ಸಂಖ್ಯೆ ಈಗ ಎಂಟು ಸಾವಿರಕ್ಕಿಂತ ಕಡಿಮೆ ಇಲ್ಲ ಎಂದು. ಆದರೆ ಇದು ಆ ಒಂದು ಅವಧಿಯ ವಿಷಯವಾಗಿದೆ ಮತ್ತು ಈ ಸಮಯದಲ್ಲಿ ನಾವು ಇನ್ನೂ ಎರಡು ಸಾವಿರ ಹೆಚ್ಚಾಗಿದ್ದೇವೆ. ನಮ್ಮ ಜಮಾಅತ್ ಆ ಸಮಯದಲ್ಲಿ ಹತ್ತು ಸಾವಿರಕ್ಕಿಂತ ಕಡಿಮೆಯಿಲ್ಲ ಎಂದು ನಾವು ಖಚಿತವಾಗಿ ಹೇಳಬಹುದು ಅದು ಪೇಶಾವರದಿಂದ ಬಾಂಬೆ, ಕಲ್ಕತ್ತಾ, ಕರಾಚಿ, ಹೈದರಾಬಾದ್ ಡೆಕ್ಕನ್, ಮದ್ರಾಸ್, ಅಸ್ಸಾಂ, ಬುಖಾರಾ, ಘಜ್ನಿ, ಮಕ್ಕಾ ಮದೀನಾ ಮತ್ತು ಸೀರಿಯಾದವರೆಗೆ ಹರಡಿದೆ ಮತ್ತು ಪ್ರತಿ ವರ್ಷ ಕನಿಷ್ಠ ಮುನ್ನೂರು ನಾಲ್ಕು ನೂರು ಜನರು ನಮ್ಮ ಜಮಾಅತ್‌ಗೆ ಬೈಅತ್ ಮಾಡಿ ಪ್ರವೇಶಿಸುತ್ತಾರೆ. ಯಾರಾದರು ಖಾದಿಯಾನ್‌ಗೆ ಬಂದು ಹತ್ತು ದಿವಸ ಇದ್ದರೆ, ಸರ್ವಶಕ್ತನಾದ ಅಲ್ಲಾಹನ ಅನುಗ್ರಹವು ಜನರನ್ನು ನಮ್ಮೆಡೆಗೆ ಎಷ್ಟು ವೇಗವಾಗಿ ಸೆಳೆಯುತ್ತಿದೆ ಎಂದು ತಿಳಿಯುತ್ತದೆ, ಕುರುಡರು ಮತ್ತು ದೃಷ್ಟಿ ಇಲ್ಲದವರಿಗೆ ಈ ಸರಪಳಿಯು ಎಷ್ಟು ಶ್ರೇಷ್ಠತೆಗೆ ತಲುಪಿದೆ ಮತ್ತು ಅದು ಹೇಗೆ **ಯದ್‌ಖುಲೂನ ಫೀ ದೀನಿಲ್ಲಾಹಿ ಅಫ್ವಾಜ** ಸತ್ಯವು ಅಲ್ಲಾಹನ ಧರ್ಮವನ್ನು ಪ್ರವೇಶಿಸುತ್ತದೆ ಮತ್ತು ಸೈನ್ಯಗಳಿಗೆ ಉದಾಹರಣೆಯಾಗುತ್ತಿದೆ ಎಂಬುದರ ಬಗ್ಗೆ ಏನು ತಿಳಿದಿದ್ದಾರೆ? (ಅಲ್‌ಬಲಾಗ್, ಫರ್ಯಾದೆ ದರ್ದ್, ರೂಹಾನಿ ಖಝಾಇನ್, ಸಂಪುಟ–13, ಪುಟ–422)

ಮತ್ತು ಇಂದು, ಅಲ್ಲಾಹನ ಅನುಗ್ರಹದಿಂದ ಲಕ್ಷಾಂತರ ಜನರು ಪ್ರತಿ ವರ್ಷ ಜಮಾಅತ್ತಿಗೆ ಸೇರುತ್ತಾರೆ ಹೀಗೆ 2019 ರಲ್ಲಿ ಬೈಅತ್ ಮಾಡಿ ಜಮಾಅತ್‌ಗೆ ಸೇರಿದವರ ಸಂಖ್ಯೆ 6 ಲಕ್ಷ 68 ಸಾವಿರದ 527 ಆಗಿತ್ತು. ಜೂನ್ 7, 2015 ರಂದು ಜರ್ಮನಿಯಲ್ಲಿ ನಡೆದ ವಾರ್ಷಿಕ ಸಮ್ಮೇಳನದಲ್ಲಿ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್

ಖಾಮಿಸ್[ಅತಬಿಅ] ತಮ್ಮ ಸಮಾರೋಪ ಭಾಷಣದಲ್ಲಿ ಹೇಳುತ್ತಾರೆ:

ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇಲ್ಲಿಯೂ (ಅಂದರೆ ಜರ್ಮನಿಯಲ್ಲಿ) ಮತ್ತು ಪ್ರಪಂಚದ ಪ್ರತಿಯೊಂದು ದೇಶದಲ್ಲಿಯೂ ಜಮಾಅತ್ತಿನ ಪರಿಚಯಗಳು ಹೆಚ್ಚಾಗುತ್ತಿವೆ ಮತ್ತು ಜನರು ಅಹ್ಮದೀಯ್ಯತ್‌ಗೆ ಹತ್ತಿರವಾಗುತ್ತಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಅಹ್ಮದೀಯತ್ ಅನ್ನು ತಿಳಿದುಕೊಳ್ಳಲಾಗಿದೆ. ಮತ್ತು ಈಗ ದೇಶದ ದೊಡ್ಡ ನಗರಗಳಲ್ಲಿ ಜನರು ಅಹ್ಮದಿಯ್ಯತ್ ಅನ್ನು ಜನರು ತಿಳಿದುಕೊಳ್ಳಲು ಪ್ರಾರಂಭಿಸುತ್ತಿದ್ದಾರೆ. ಮತ್ತು ಅವರಲ್ಲಿ ಮುಸ್ಲಿಮರು ಮತ್ತು ಮುಸ್ಲಿಮೇತರರು ಸೇರಿಕೊಂಡಿದ್ದಾರೆ. (ಸಮಾರೋಪ ಭಾಷಣ ಜಲ್ಸ ಸಾಲಾನ ಜರ್ಮನಿ, 7-ಜೂನ್ 2015)

ಇಂದು ಜಗತ್ತಿನಲ್ಲಿ ಜಮಾಅತ್‌ನ ಮಾನ್ಯತೆ ಎಂಟು ವರ್ಷಗಳ ಹಿಂದಿಗಿಂತ ನಿಸ್ಸಂಶಯವಾಗಿ ಅತೀ ಹೆಚ್ಚು ವಿಸ್ತಾರವಾಗಿದೆ. ಹುಝೂರ್ ಅನ್ವರ್[ಅತಬಿಅ] ಅವರು ಈಗ ವಿಶ್ವದ ಪ್ರಮುಖ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಉತ್ತಮ ಸ್ವೀಕಾರವನ್ನು ಪಡೆಯುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅವರ ಪಟ್ಟಣವು ಅಜ್ಞಾತವಾಗಿರುವ ಸಮಯ ಎಲ್ಲಿದೆ ಮತ್ತು ಅವರ ಖ್ಯಾತಿಯು ಪ್ರಪಂಚದಾದ್ಯಂತ ಇರುವ ಸಮಯ ಎಲ್ಲಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು 1882 ರ ತಮ್ಮ ಕೆಲವು ದೈವವಾಣಿಗಳನ್ನು ಅಲ್ಲಾಹನ ಬೆಂಬಲ ಹಾಗೂ ಸಹಾಯದ ವಾಗ್ದಾನವಿರುವ ತಮ್ಮ ಕೆಲವು ದೈವವಾಣಿಗಳನ್ನು ಉಲ್ಲೇಖಿಸಿ ಹೇಳುತ್ತಾರೆ:

ಇದು ನಾನು ಅಜ್ಞಾತವಾಗಿದ್ದ ಸಮಯದ ಭವಿಷ್ಯವಾಣಿಯಾಗಿದೆ....... ಜನರಲ್ಲಿ ಒಬ್ಬನೇ **ಅಹದುಮ್ಮಿನನ್ನಾಸ್** ಆಗಿದ್ದೆನು ಮತ್ತು ಅನಾಮಧೇಯನಾಗಿದ್ದೆ ಮತ್ತು ಒಬ್ಬ ವ್ಯಕ್ತಿಯೂ ನನ್ನೊಂದಿಗೆ ಸಂಬಂಧಿಸಿರಲಿಲ್ಲ ............ ತದನಂತರ ಈ ಭವಿಷ್ಯವನ್ನು ಪೂರೈಸಲು ಸರ್ವಶಕ್ತನಾದ ಅಲ್ಲಾಹನು ತನ್ನ ದಾಸರನ್ನು ನನ್ನ ಕಡೆಗೆ ಕಳುಹಿಸಲು ಆರಂಭಿಸಿದನು ಮತ್ತು ಜನರ ಸೈನ್ಯವು ಖಾದಿಯಾನ್‌ಗೆ ಮರಳಿತು ಮತ್ತು ಮರಳುತ್ತಿದ್ದಾರೆ. ಜನರು ನಗದು, ಜಿನಿಸು ಮತ್ತು ಎಲ್ಲಾ ರೀತಿಯ ಉಡುಗೊರೆಗಳನ್ನು ನಾನು ಎಣಿಸಲಾಗದಷ್ಟು ಹೇರಳವಾಗಿ ನೀಡಿದರು ಮತ್ತು ನೀಡುತ್ತಿದ್ದಾರೆ. (ರೂಹಾನಿ ಖಝಾಈನ್, ಸಂಪುಟ-22, ಹಖೀಖತುಲ್ ವಹೀ, ಪುಟ-261)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಒಂದು ಕವನದಲ್ಲಿ ಹೀಗೆ ಹೇಳುತ್ತಾರೆ:

ಇಕ್ ಝಮಾನಾ ಥಾ ಕೆ ಮೇರಾ ನಾಮ್ ಭೀ ಮಸ್ತೂರ್ ಥಾ
ಖಾದಿಯಾನ್ ಭೀ ಥೀ ನಿಹಾಂ ಐಸೀ ಕೆ ಗೋಯಾ ಝೇರೆ ಗ್ಹಾರ್
ಅರ್ಥ: ನನ್ನ ಹೆಸರು ರಹಸ್ಯವಾಗಿದ್ದ ಕಾಲವೊಂದಿತ್ತು, ಖಾದಿಯಾನ್ ಗುಹೆಯ ಕೆಳಗಿದ್ದಂತೆ ಇತ್ತು.

ಕೋಈ ಭೀ ವಾಖಿಫ್ ನ ಥಾ ಮುಜ್ಸ್ ಸೇ ನ ಮೇರಾ ಮೊತಖಿದ್
ಲೇಕಿನ್ ಅಬ್ ದೇಖೋ ಕೆ ಚರ್ಚಾ ಕಿಸ್ ಖದರ್ ಹೈ ಹರ್ ಕಿನಾರ್
ಅರ್ಥ: ಯಾರೂ ನನ್ನನ್ನು ತಿಳಿದಿರಲಿಲ್ಲ ಮತ್ತು ಯಾರೂ ನನ್ನನ್ನು ನಂಬಲಿಲ್ಲ, ಆದರೆ ಈಗ ನೋಡಿ ಮೂಲೆ ಮೂಲೆಯಲ್ಲಿ ಎಷ್ಟು ಚರ್ಚೆ ಆಗಿದೆ.

ಉಸ್ ಝಮಾನೆ ಮೇಂ ಖುದಾನೇ ದೀ ಥೀ ಶೊಹ್ರತ್ ಕೀ ಖಬರ್
ಜೋ ಕೆ ಅಬ್ ಪೂರೀ ಹುಈ ಬಅದ್ ಅಝ್ ಮುರೂರೆ ರೋಝ್ಗಾರ್
ಅರ್ಥ: ಆ ಸಮಯದಲ್ಲಿ, ದೇವರು ಖ್ಯಾತಿಯ ಸುದ್ದಿಯನ್ನು ನೀಡಿದನು, ಜೀವನೋಪಾಯ ಮುಗಿದ ನಂತರ ಈಗ ಅದು ಪೂರ್ಣಗೊಂಡಿದೆ.

ಕೌನ್ ದರ್‌ಪರ್ದ ಮುಜ್ಹೇ ದೇತಾ ಹೈ ಮೈದಾಂ ಮೇ ಫತಹ್
ಕೌನ್ ಹೈ ಜೊ ತುಮ್ ಕೊ ಹರ್ ದಮ್ ಕರ್ ರಹಾ ಹೈ ಶರ್ಮ್‌ಸಾರ್
ಅರ್ಥ: ಪರದೆಯಲ್ಲಿದ್ದು (ರಹಸ್ಯವಾಗಿ) ಯಾರು ನನಗೆ ಎಲ್ಲ ಕ್ಷೇತ್ರಗಳಲ್ಲಿ ಗೆಲುವು ತಂದು ಕೊಡುತ್ತಿದ್ದಾರೆ, ಸಾರ್ವಕಾಲಿಕ ನಿಮ್ಮೆಲ್ಲರನ್ನು ಮುಜುಗರಕ್ಕೀಡು ಮಾಡುತ್ತಿರುವನು ಯಾರು?

ತುಮ್ ತೊ ಕೆಹ್ತೇ ಥೇ ಕೆ ಯೇ ನಾಬೂದ್ ಹೋಜಾ ಯೆಗಾ ಜಲ್ದ್
ಯೆಹ್ ಹಮಾರೆ ಹಾಥ್ ಕೇ ನೀಚೆ ಹೈ ಇಕ್ ಅದ್ನಾ ಶಿಕಾರ್
ಅರ್ಥ: ಇವನು ಬೇಗ ನಾಶವಾಗುತ್ತಾನೆ ಎಂದು ನೀವು ಹೇಳುತ್ತಿದ್ದಿರಿ, ಇವನು ನಮ್ಮ ಕೈಕೆಳಗಿರುವ ಬೇಟೆ ಎಂದು ಹೇಳುತ್ತಿದ್ದೀರಿ.

ಬಾತ್ ಫಿರ್ ಯೆಹ್ ಕ್ಯಾ ಹುವೀ ಕಿಸ್ ನೇ ಮೇರಿ ತಾಈದ್ ಕೀ
ಖಾಎಬ್ ವ ಖಾಸರ್ ರಹೇ ತುಮ್, ಹೋಗಯಾ ಮೈಂ ಕಾಮ್ಗಾರ್
ಅರ್ಥ: ವಿಷಯ ಏನಾಯಿತು? ಯಾರು ನನ್ನನ್ನು ಬೆಂಬಲಿಸಿದರು?, ನೀವು ನಾಚಿಕೆಯಿಂದ ತಲೆಬಾಗಿದ್ದೀರಿ, ಆದರೆ ನಾನು ಕೆಲಸಗಾರನಾಗಿದ್ದೇನೆ (ವಿಜಯಶಾಲಿಯಾಗಿದ್ದೇನೆ).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನುಝೂಲ್‌ನ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ:

"ಮತ್ತು ಎರಡನೆಯ ಕಾರಣವೆಂದರೆ ಎಲ್ಲಾ ದೇಶಗಳಲ್ಲಿ ಮಸೀಹ್ ಮೌಊದ್‌ರ ಖ್ಯಾತಿಯು ಸಮಯ ಮತ್ತು ಕಾಲದಲ್ಲಿ ಸಾಧ್ಯವಾದಷ್ಟು ಬೇಗ ವ್ಯಕ್ತವಾಗಬೇಕು, ಏಕೆಂದರೆ ಯಾವ ವಸ್ತುವು ಆಕಾಶದಿಂದ ಅವತರಿಸುತ್ತದೆಯೋ ಅದನ್ನು ದೂರದ ಮತ್ತು ಹತ್ತಿರದ ಮತ್ತು ವಿವಿಧ ಭಾಗಗಳಿಂದ, ಮೂಲೆಗಳಿಂದ ಜನರು ನೋಡುತ್ತಾರೆ. ನ್ಯಾಯಾಧೀಶರ ದೃಷ್ಟಿಯಲ್ಲಿ ಅದರ ಮೇಲೆ ಯಾವುದೇ ಪರದೆ ಇರುವುದಿಲ್ಲ ಮತ್ತು ಇದು ಮಿಂಚಿನಂತೆ ಒಂದು ಬದಿಯಿಂದ ಇನ್ನೊಂದು ಬದಿಗೆ ಜಿಗಿಯುತ್ತದೆ ಮತ್ತು ವೃತ್ತದಂತೆ ಎಲ್ಲಾ ಬದಿಗಳನ್ನು ಸುತ್ತುವರಿಯುತ್ತದೆ. (ಖುತ್ಬ ಇಲ್ಹಾಮಿಯ, ಉರ್ದು ಅನುವಾದ ಪುಟ-3)

ಹೀಗಾಗಿ ಜಮಾಅತ್ ಎಲ್ಲಾ ಕಡೆ ವೃತ್ತಾಕಾರವಾಗಿ ಸುತ್ತುವರಿಯುವ ದಿನ ದೂರವಿಲ್ಲ. ಇನ್‌ಶಾಅಲ್ಲಾಹ್. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಡೀ ಜಗತ್ತಿನಲ್ಲಿ ಜಮಾಅತ್‌ನ ಪ್ರಾಬಲ್ಯಕ್ಕೆ ಮೂರು ಶತಮಾನಗಳ ಅವಧಿಯನ್ನು ನಿಗದಿಪಡಿಸಿದ್ದಾರೆ. ಅವರು(ಅ) ಹೇಳುತ್ತಾರೆ:

"ಇಂದಿನಿಂದ ಮೂರನೆಯ ಶತಮಾನ ಪೂರ್ಣವಾಗುವುದರೊಳಗೆ ಈಸಾರನ್ನು ಪ್ರತೀಕ್ಷಿಸುತ್ತಾ ಇರುವ ಮುಸ್ಲಿಮರೂ ಕ್ರೈಸ್ತರೂ ತೀವ್ರ ನಿರಾಶೆ ಹೊಂದಿದವರೂ ಶಂಕಿಸುವವರೂ ಆಗಿ ಈ ಸುಳ್ಳು ನಂಬಿಕೆಯನ್ನು ತ್ಯಜಿಸುವರು. ಆಗ ಲೋಕದಲ್ಲಿ ಒಂದೇ ಧರ್ಮವಿರುವುದು ಒಬ್ಬನೇ ನೇತಾರನಾಗಿರುವರು. ನಾನು ಒಂದು ಬೀಜವನ್ನು ಬಿತ್ತಲು ಆಗಮಿಸಿದೆ. ನನ್ನ ಕೈಯಿಂದ ಆ ಬೀಜ ಬಿತ್ತಲ್ಪಟ್ಟಿದೆ. ಅದು ವೃಕ್ಷವಾಗಿ ಬೆಳೆಯುವುದು ಪುಷ್ಪ ಭರಿತವಾಗುವುದು. ಅದರ ಬೆಳವಣಿಗೆಯನ್ನು ತಡೆಯಬಲ್ಲವನು ಯಾರೂ ಇಲ್ಲ."(ತಝ್ಕಿರತುಶ್ಶಹಾದತೈನ್, ರೂಹಾನಿ ಖಝಾಈನ್, ಸಂಪುಟ-20, ಪುಟ-67)

ತಝ್ಕಿರತುಶ್ಶಹಾದತೈನ್ 1903ರಲ್ಲಿ ಬರೆಯಲಾಗಿದೆ. ಈ ಭವಿಷ್ಯವಾಣಿಯ ನೂರಾ ಹದಿನೆಂಟು ವರ್ಷಗಳು ಇಂದು ನೆರವೇರಿವೆ. ಮೂರು ಶತಮಾನಗಳನ್ನು ಪೂರೈಸಲು ನೂರಾ ಎಂಬತ್ತೆರಡು ವರ್ಷಗಳು ಉಳಿದಿವೆ. ನೂರ ಎಂಬತ್ತೆರಡು ವರ್ಷಗಳ ನಂತರ, ಅಹ್ಮದಿಯಾ ಜಮಾಅತ್ ಇಡೀ ಜಗತ್ತಿನಲ್ಲಿ ಪ್ರಾಬಲ್ಯ ಸಾಧಿಸುತ್ತದೆ. ಅಹ್ಮದೀಯತ್ ಜಗತ್ತಿನಲ್ಲಿ ಹರಡುತ್ತಿರುವ ವೇಗದಲ್ಲಿ ಮತ್ತು ಅದರ ಖ್ಯಾತಿ ಮತ್ತು ಜನಪ್ರಿಯತೆಯ ವೇಗ ನೋಡಿದರೆ, ನಾವು ಬಹಳ ಕಡಿಮೆ ಸಮಯದಲ್ಲಿ ಅಹ್ಮದಿಯತ್ ಮೇಲುಗೈ ಸಾಧಿಸುತ್ತದೆ ಎಂದು ಖಚಿತವಾಗಿರುತ್ತೇವೆ. ಇನ್‌ಶಾಅಲ್ಲಾಹ್. ಓ ಸರ್ವಶಕ್ತನಾದ ಅಲ್ಲಾನೇ ನೀನು ಹಾಗೆಯೇ ಸಂಭವಿಸುವಂತೆ ಮಾಡು. ಆಮೀನ್- ವಆಖಿರುದ್ದಅ್‌ವನಾ ಅನಿಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್- **(ಮನ್ಸೂರ್ ಅಹ್ಮದ್ ಮಸ್ರೂರ್)**

...*...*...*...


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**


**ಎಲ್ಲರಿಗೂ 127ನೇ ಜಲ್ಸ ಸಾಲಾನ ಖಾದಿಯಾನ್‌ನ ಶುಭಾಷಯಗಳು**





ಜಲ್ಸ ಸಾಲಾನ ಬ್ರಿಟನ್ 2022ರ ಸಂದರ್ಭದಲ್ಲಿ ದಿನಾಂಕ 05 ಆಗಸ್ಟ್ ರಂದು ಹುಝೂರ್ ಅನ್ವರ್(ಅತಬಿಅ) ರವರು ಅಹ್ಮದೀಯ್ಯತ್‌ನ ಧ್ವಜವನ್ನು ಆರೋಹಿಸುತ್ತಿರುವುದು






ಜಲ್ಸ ಸಾಲಾನ ಬ್ರಿಟನ್ 2022ರ ಸಂದರ್ಭದಲ್ಲಿ ದಿನಾಂಕ 06 ಆಗಸ್ಟ್ ರಂದು ಮಧ್ಯಾಹ್ನದ ಅದಿವೇಶನದಲ್ಲಿ ಹುಝೂರ್ ಅನ್ವರ್[ಅತಬಿಅ] ರವರು ಸಂಬೋಧಿಸುತ್ತಿರುವುದು






ದಿನಾಂಕ 21 ಆಗಸ್ಟ್ 2022 ರಂದು ಬ್ರಿಟನ್‌ನ ಇಸ್ಲಾಮಬಾದ್ ನಿಂದ **MTA international** ಮೂಲಕ ಹುಝೂರ್ ಅನ್ವರ್[ಅತಬಿಅ] ರವರು ಜಲ್ಸ ಸಾಲಾನ ಜರ್ಮನಿಯ ಸಮಾರೋಪ ಸಮಾರಂಭದಲ್ಲಿ ಸಂಬೋಧಿಸುತ್ತಿರುವುದು ಮತ್ತು ದುಆ ನಿರ್ವಹಿಸುತ್ತಿರುವುದು






ದಿನಾಂಕ 13 ಮಾರ್ಚ್ 2022 ರಂದು ಸಯ್ಯದುನಾ ಹುಝೂರ್ ಅನ್ವರ್[ಅತಬಿಅ] ರವರು ಟೆಕ್ಸಾಸ್ (ಅಮೇರಿಕ)ದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಸದಸ್ಯರೊಂದಿಗೆ ಆನ್‌ಲೈನ್ ಮುಖಾಂತರ ಭೇಟಿ




ದಿನಾಂಕ 22 ಮೇ 2022 ರಂದು ಬ್ರಿಟನ್‌ನ ಮಜ್ಲಿಸ್ ಶೂರದಲ್ಲಿ ಹುಝೂರ್ ಅನ್ವರ್[ಅತಬಿಅ] ರವರ ಸಂಬೋಧನೆ



**The God Summit 2022** ಗಾಗಿ ಹುಝೂರ್ ಅನ್ವರ್[ಅತಬಿಅ] ರವರು ತಮ್ಮ ವಿಶೇಷ ಸಂದೇಶವನ್ನು ನೀಡುತ್ತಿರುವುದು

**EDITOR**
**TARIQ AHMED IDRIS.**
**Mobile : +91 8050330779**
e-mail:
kannadabadar@gmail.com
website:
www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

ಕನ್ನಡ ಬದರ್ ವಾರ ಪತ್ರಿಕೆ *Weekly* **BADAR** *Qadian*

Qadian - 143516 Distt. Gurdaspur (Pb.) INDIA

Vol No.03, Thursday, 22-29 December 2022, Issue No. 51-52

**MANAGER**
**SHAIKH MUJAHID AHMAD**
Mobile : +91 99153 79255
e -mail:managerbadrqnd@gmail.com
**SUBSCRIPTION**
**ANNUAL**: Rs. **Rs: 600/-**
WEIGHT: 50-100 gms / issue


Humanity First
*Serving Mankind*

هوالشافی
We Treat Allah Heal
Noor Hospital
نور ہسپتال
QADIAN
1917 - 2017
100 Years Celebration
Serving Humanity Since Hundred Years

TAHIR HEART INSTITUTE

IAAAE
INTERNATIONAL ASSOCIATION OF AHMADI ARCHITECTS & ENGINEERS

FOOD SECURITY

GIFT SIGHT

ORPHAN CARE

WATER FOR LIFE

GLOBAL HEALTH

DISASTER RELIEF

COMMUNITY CARE

KNOWLEDGE FOR LIFE




Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gurdaspur-143516, Punjab. India. Editor: Tariq Ahmed Idris.